ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17
ಸಂಚಿಕೆ 05
ರೂ. 2.00

29 ಜನವರಿ 1995



ಹುಬ್ಬಳ್ಳಿಯಲ್ಲಿ ಮತ್ತೆ ಸಂಕುಚಿತ ರಾಜಕೀಯದ ಆಟ?

ರಾಜ್ಯ ಸಮ್ಮೇಳನ: ಫೆ.24-27

ಜಿಲ್ಲಾ ಮತ್ತು ತಾಲೂಕಾ ಪಂಚಾಯಿತಿ ಚುನಾವಣೆಗಳು ಮಾರ್ಚ್ ತಿಂಗಳಲ್ಲಿ ನಡೆಯಲಿರುವುದರಿಂದ ಸಿಪಿಐ(ಎಂ) ರಾಜ್ಯ ಸಮ್ಮೇಳನದ ದಿನಾಂಕಗಳನ್ನು ಬದಲಾವಣೆ ಮಾಡಲಾಗಿದೆ. ಅದು ದಿನಾಂಕ ಫೆಬ್ರವರಿ 24ರಿಂದ 27ರವರೆಗೆ ಗುಲ್ಬರ್ಗಾದಲ್ಲಿ ನಡೆಯಲಿದೆ. ಫೆಬ್ರವರಿ 24ರಂದು, ಬೀದರ್, ರಾಯಚೂರು, ಬಳ್ಳಾರಿ, ಬಿಜಾಪುರ ಮೊದಲಾದ ಜಿಲ್ಲೆಗಳಿಂದ ಹಾಗೂ ಗುಲ್ಬರ್ಗಾ ಜಿಲ್ಲೆಯಿಂದ ಬರುವ ಸಾವಿರಾರು ರೈತ, ಕಾರ್ಮಿಕರ, ಯುವಜನರ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಲಿದೆ. ಫೆಬ್ರವರಿ 25ರಿಂದ ಪ್ರತಿನಿಧಿಗಳ ಸಭೆ ಪ್ರಾರಂಭವಾಗುವುದು. ಕರ್ನಾಟಕ ರಾಜ್ಯದ ಬದಲಾದ ರಾಜಕೀಯ ಪರಿಸ್ಥಿತಿಯ ವಿಶ್ಲೇಷಣೆ, ಪಕ್ಷದ ಸಂಘಟನೆ, ಮುಂದಿನ ಹೋರಾಟಗಳ ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಳ್ಳಲಾಗುವುದು. ಈ ಸಮ್ಮೇಳನದ ಯಶಸ್ವಿಗಾಗಿ ಗುಲ್ಬರ್ಗಾ ಜಿಲ್ಲಾ ಸಮಿತಿ ಹಾಗೂ ಪಕ್ಷದ ಸಂಗಾತಿಗಳೆಲ್ಲಾ ತೀವ್ರ ಪ್ರಯತ್ನ ನಡೆಸಿದ್ದಾರೆ. ಬರುವ ಪ್ರತಿನಿಧಿಗಳಿಗೆ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಲು ಹೆಚ್ಚಿನ ಪ್ರಯತ್ನ ನಡೆದಿದೆ. ಸಮ್ಮೇಳನದ ಕುರಿತು ಹೆಚ್ಚಿನ ಮಾಹಿತಿಗಾಗಿ ಸ್ವಾಗತ ಸಮಿತಿಯನ್ನು ಸಂಪರ್ಕಿಸಿ: ಮಾರುತಿ ಮಾನ್ಪಡೆ,

ಅಧ್ಯಕ್ಷರು, ಸ್ವಾಗತ ಸಮಿತಿ,
ಸಿಪಿಐ(ಎಂ) 15ನೇ ರಾಜ್ಯ ಸಮ್ಮೇಳನ,
ಮಹಮ್ಮದ್ ಹಸನ್‌ಖಾನ್ ಸ್ಮಾರಕ ಭವನ,
ಸ್ಟೇಷನ್ ಬಜಾರ್, ಗುಲ್ಬರ್ಗಾ.

ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಯಥಾಸ್ಥಿತಿ ಕಾಪಾಡಬೇಕು, ಆ ಪ್ರದೇಶದೊಳಗೆ ಜನವರಿ 26ರಂದು ಯಾರಿಗೂ ಪ್ರವೇಶ ನೀಡಬಾರದು ಎಂಬ ಸುಪ್ರೀಂಕೋರ್ಟಿನ ಮಧ್ಯಂತರ ಆದೇಶ ಹಾಗೂ ಈ ಆದೇಶವನ್ನು ಕಟ್ಟುನಿಟ್ಟಾಗಿ ರಾಜ್ಯ ಸರಕಾರ ಪಾಲಿಸುವುದೆಂಬ ಮುಖ್ಯಮಂತ್ರಿಗಳ ಘೋಷಣೆಯಿಂದ ರಾಜ್ಯದ ಹಾಗೂ ದೇಶದ ಜಾತ್ಯಾತೀತರು ಹಾಗೂ ಹುಬ್ಬಳ್ಳಿಯ ಜನಸಾಮಾನ್ಯರು ಇನ್ನೇನು ಈ ವರ್ಷದ ಪ್ರಜಾಪ್ರಭುತ್ವ ದಿನದಂದು ನೆಮ್ಮದಿಗೆ ಅವಕಾಶವಿದೆ ಎಂದು ಭಾವಿಸಿದರೆ ಅತ್ತ ರಾಷ್ಟ್ರಪ್ರೇಮದ ಮುಖವಾಡ ಹೊತ್ತು ಮುಗ್ಧ ಜನರನ್ನು ದಾರಿ ತಪ್ಪಿಸುತ್ತಿರುವ ಕೋಮುವಾದಿ ರಾಜಕೀಯ ಶಕ್ತಿಗಳನ್ನು ಇದು ತಲ್ಲಣಗೊಳಿಸಿದೆ. ಆದರೂ ಈ ಶಕ್ತಿಗಳು ತಮ್ಮ ಆಟವನ್ನು ಮುಂದುವರಿಸುತ್ತಿವೆ. ಹುಬ್ಬಳ್ಳಿಯಲ್ಲಿ ಮತ್ತೆ ಆತಂಕ ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ.

ಸುಪ್ರೀಂ ಕೋರ್ಟ್ ವಿವಾದಿತ ಸ್ಥಳದಲ್ಲಿನ ಕಟ್ಟಡಗಳನ್ನು ಒಡೆದು ಹಾಕುವುದಕ್ಕೆ ಮಾತ್ರ ತಡೆಯಾಜ್ಞೆ ನೀಡಿದೆ, ಧ್ವಜಾರೋಹಣಕ್ಕಲ್ಲ, ಸರಕಾರ ಸುಪ್ರೀಂ ಕೋರ್ಟಿನ ಆದೇಶದ ಅಪವ್ಯಾಖ್ಯಾನ ಮಾಡುತ್ತಿದೆ ಎಂದು ಬಿಜೆಪಿ ಮುಖಂಡರು ಹೇಳಲಾರಂಭಿಸಿದ್ದಾರೆ. ಆದ್ದರಿಂದ ತಾವು ಧ್ವಜಾರೋಹಣ ಮಾಡಿ ಮತ್ತೊಮ್ಮೆ ತಮ್ಮ ಹುಸಿ ರಾಷ್ಟ್ರಪ್ರೇಮದ ಕರಾಳ ಪ್ರದರ್ಶನ ನಡೆಸಿಯೇ ನಡೆಸುತ್ತೇವೆ ಎಂದು ಬೆದರಿಸಿದ್ದಾರೆ. ಆದರೆ ಇತಿಹಾಸದ, ವಾಸವ ಸಂಗತಿಗಳ ಅಪವ್ಯಾಖ್ಯಾನ ಮಾಡುವುದರಲ್ಲಿ ಕುಖ್ಯಾತಿ ಗಳಿಸಿದ ಈ ಮಂದಿಯದು ಈಗಲೂ ಕೇವಲ ಮೊಂಡುವಾದ ಎಂದು ಅವರದೇ ಪತ್ರಿಕೆ "ಹೊಸ ದಿಗಂತ"ದ ಸಂಪಾದಕೀಯದಿಂದ ಸ್ಪಷ್ಟವಾಗುತ್ತದೆ. ಈ ಪತ್ರಿಕೆಯ ಜನವರಿ 17ರ ಸಂಚಿಕೆಯ ಸಂಪಾದಕೀಯ "..ಇಂತಹ ಆದೇಶವೊಂದರ ಹಿಂದೆ ಅಂಜುಮಾನ್-ಇ-ಇಸ್ಲಾಂ ಸಂಸ್ಥೆಯ ಕೈವಾಡವನ್ನು ಮರೆಯುವಂತಿಲ್ಲ. ಈ ಆದೇಶ ಮೀರಿ ಧ್ವಜಾರೋಹಣ ನಡೆಸಿದರೆ ನ್ಯಾಯಾಲಯ ನಿಂದನೆಯಾಗುತ್ತದೆ...ಸುಪ್ರೀಂಕೋರ್ಟಿನ ಈ ಆದೇಶದಿಂದ ಧ್ವಜಾರೋಹಣವನ್ನು ಆ ಮೈದಾನಿನಲ್ಲಿ ನಡೆಸುವಂತಿಲ್ಲ....." ಎಂದಿದೆ!

"ಧ್ವಜಾರೋಹಣ ಮಾಡುವ ಬಗ್ಗೆ ಬಿಜೆಪಿ ಸುಪ್ರೀಂ ಕೋರ್ಟಿನ ಎದುರು ಮನವಿ ಸಲ್ಲಿಸಿದೆಯೇ?" ಎಂದು ಮುಖ್ಯಮಂತ್ರಿಗಳೂ ತೀಕ್ಷ್ಣವಾಗಿ ಪ್ರಶ್ನಿಸಿದ್ದರಂತೆ. "......ಬಿಜೆಪಿ ರಾಷ್ಟ್ರೀಯ ಮುಖಂಡರು ಸಂಸತ್ತಿನೊಳಗೆ ಮತ್ತು ಹೊರಗೆ ನ್ಯಾಯಾಲಯದ ತೀರ್ಪನ್ನು ಗೌರವಿಸಬೇಕೆಂದು ಪದೇ ಪದೇ ಹೇಳುತ್ತಲೇ ಬಂದಿದ್ದಾರೆ. ಅಂತಹ ಹಿರಿಯರ ಮುಖಂಡತ್ವದ ಬಿಜೆಪಿ ಈ ವಿಚಾರದಲ್ಲೂ ನ್ಯಾಯಾಲಯದ ತೀರ್ಪನ್ನು ಗೌರವಿಸುವುದೆಂಬ ವಿಶ್ವಾಸ ತಮಗಿದೆ" ಎಂದೂ ಅವರು ಹೇಳಿದುದಾಗಿ ವರದಿಯಾಗಿದೆ.

ಆದರೆ ಅಂತಹ ವಿಶ್ವಾಸಕ್ಕೆ ಆಸ್ಪದವಿಲ್ಲ ಎಂಬಂತೆ ಸ್ಪಷ್ಟಪಡಿಸುತ್ತಾ ಬಿಜೆಪಿ ಮುಖಂಡರು ತಮ್ಮ ಎಂದಿನ "ಪರಂಪರೆ"ಯನ್ನೇ ಮುಂದುವರಿಸುತ್ತಿದ್ದಾರೆ. ಎಷ್ಟೆಂದರೂ ಸರ್ವೋಚ್ಚ ನ್ಯಾಯಾಲಯದ ಆದೇಶದ ಉಲ್ಲಂಘನೆಗಾಗಿ ಶಿಕ್ಷೆ ಅನುಭವಿಸಿದ ಮುಖ್ಯಮಂತ್ರಿಯನ್ನು ಸೃಷ್ಟಿಸಿದ ಪಕ್ಷವಲ್ಲವೇ ಅದು?

ಬಿಜೆಪಿ ನ್ಯಾಯಾಲಯಕ್ಕೆ ಗೌರವ ನೀಡುತ್ತದೆಯೇ ಎಂಬ ಬಗ್ಗೆ ಮಾತ್ರವಲ್ಲ ಅದು ರಾಷ್ಟ್ರಧ್ವಜಕ್ಕೆ ಪ್ರಾಮಾಣಿಕವಾಗಿ ಗೌರವ ನೀಡುತ್ತದೆಯೇ, ಅವರು ನಿಜವಾಗಿ ರಾಷ್ಟ್ರಪ್ರೇಮಿಗಳೇ ಎಂಬ ಬಗ್ಗೆಯೂ ಈಗ ಯಾರಿಗೂ ಸಂಶಯವುಳಿದಂತಿಲ್ಲ.

ಕನ್ನಡ ಪ್ರಭ (ಜ.17)ದ ಈ ಸಂಪಾದಕೀಯ ಅದಕ್ಕೊಂದು ಉದಾಹರಣೆಯಷ್ಟೆ-"ಧ್ವಜ ಹಾರಿಸಲು ಮುಂದಾದವರು ರಾಷ್ಟ್ರ ಅಥವಾ ರಾಷ್ಟ್ರಧ್ವಜದಿಂದ ಪ್ರೇರಿತರಾಗಿದ್ದರು ಎಂದು ಯಾರೂ ಹೇಳುವುದಿಲ್ಲ. ರಾಷ್ಟ್ರೀಯ ಹಬ್ಬದ ದಿನಗಳಂದು ಕೇಳುವವರೇ ಇಲ್ಲದ ಸಾರ್ವಜನಿಕ ಒಡೆತನದ ಮೈದಾನಗಳು ಇರುತ್ತವೆ. ಅದನ್ನು ಯಾರು ಗಮನಿಸುವುದಿಲ್ಲ. ಅಷ್ಟೇಕೆ ಅಂಜುಮಾನ್ ಸಂಸ್ಥೆಗೆ ಮೈದಾನ ನೀಡಿದ ಕರಾರಿಗೆ ಸಂವಾದಿಯಾಗುವ ರೀತಿಯಲ್ಲಿ ಹುಬ್ಬಳ್ಳಿಯಲ್ಲೇ ಇನ್ನೊಂದು ಸಂಸ್ಥೆಗೂ ಭೂಮಿಯನ್ನು ನೀಡಲಾಗಿದೆ. ಈದ್ಗಾ ಮೈದಾನದ ಮೇಲೆ ಕಣ್ಣಿಟ್ಟಿರುವವರಿಗೆ ಈ ಭೂಮಿ ಕಾಣಿಸುತ್ತಿಲ್ಲ ಅದಕ್ಕೆ ಜಾಣಗುರುಡತನ ವಿನಾ ಬೇರೆ ಕಾರಣ ಇಲ್ಲ."

"ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸುವ ಉದ್ದೇಶದಿಂದ ಹುಟ್ಟಿಕೊಂಡ 'ರಾಷ್ಟ್ರಧ್ವಜ ಗೌರವ ಸಂರಕ್ಷಣಾ ಸಮಿತಿ' ಈಗ ಹಿನ್ನೆಲೆಗೆ ಸರಿದಿದೆ. ಅದರ ಬದಲಿಗೆ ರಂಗಮಧ್ಯವನ್ನು ಬಿಜೆಪಿ ಆಕ್ರಮಿಸಿ ಸರಕಾರಕ್ಕೆ ಗಡುವು ನೀಡುವುದೇ ಮುಂತಾದ ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳುತ್ತಿದೆ" ಎಂದೂ ಆ ಸಂಪಾದಕೀಯ ಗಮನಿಸಿದೆ.

ಬಿಜೆಪಿಯ ಜಾಣಗುರುಡತನ, ಬೆದರಿಕೆಗಳು, ಕೇವಲ ಸಂಕುಚಿತ ರಾಜಕೀಯದಿಂದ ಪ್ರೇರಿತವಾದದ್ದು ಎಂಬುದು ಈಗ ಸಂಶಯಾತೀತ. ಹೀಗಿರುವಾಗ ಈ ವಿವಾದವನ್ನು "ಪರಿಹರಿಸಲು" ಮುಸ್ಲಿಂ ನಾಯಕರೇ ಮುಂದಾಗಲಿ ಎಂಬ ಪ್ರಯತ್ನಕ್ಕೆ ಏನು ಅರ್ಥವಿದೆ? ಆದರಿಂದ ಈ ಸಂಕುಚಿತ ರಾಜಕೀಯ ಮಾಡುವವರಿಗೆ ಹೆದರಿದಂತಾಗುವುದಿಲ್ಲವೇ?

ನ್ಯಾಯಾಲಯದ ಆದೇಶ ಬರುವವರೆಗೆ ಯಥಾಸ್ಥಿತಿಯಿರಲಿ ಎಂದು ಸಿಪಿಐ(ಎಂ) ಹಾಗೂ ಇತರ ಎಡ-ಜಾತ್ಯಾತೀತ ಶಕ್ತಿಗಳು ಹೇಳುತ್ತಿರುವುದು ಈ ಕಾರಣದಿಂದಲೇ.

ನ್ಯಾಯಾಲಯದ ಮುಂದಿರುವ ಒಂದು ವಿವಾದವನ್ನು ನಗರದಲ್ಲಿ ಅಶಾಂತಿ ಹುಟ್ಟಿಸಲು ಪದೇ ಪದೇ ಬಳಸಿಕೊಳ್ಳಲಾಗುತ್ತಿರುವುದನ್ನು ಸಿಪಿಐ(ಎಂ) ಪಕ್ಷವು ಬಲವಾಗಿ ಖಂಡಿಸುತ್ತದೆ. ಮಹಾನಗರ, ಜಿಲ್ಲೆ ಮತ್ತು ರಾಜ್ಯದ ಶಾಂತಿಗೆ, ಅಭಿವೃದ್ಧಿಗೆ ಭಂಗ ತರುವ ಈ ವಿದ್ಯಮಾನವನ್ನು ಅರಿತು ಕರ್ನಾಟಕದಲ್ಲಿ ಇಂದು ಎಲ್ಲ ಪ್ರಜಾತಂತ್ರ ಶಕ್ತಿಗಳು ಒಂದಾಗಿ ಕೋಮು ಶಕ್ತಿಗಳ ದುಷ್ಟ ದಾರಿಗಳನ್ನು ಬಯಲಿಗೆಳೆಯಬೇಕಾಗಿದೆ. ಕೋಮು ರಾಜಕೀಯದ ಬೆಳವಣಿಗೆಯನ್ನು ತಡೆಯದಿದ್ದರೆ ಎಂಥ ಅಪಾಯ ಸಂಭವಿಸಬಹುದು ಎನ್ನುವುದರ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಬೇಕಾಗಿದೆ.

ಈ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿ ಸಿಪಿಐ(ಎಂ)ನ ಧಾರವಾಡ ಜಿಲ್ಲಾ ಸಮಿತಿಯು ಜನವರಿ 20ರಂದು ಧಾರವಾಡದಲ್ಲಿ ಒಂದು ಬೃಹತ್ ರ್‍ಯಾಲಿ ಹಾಗೂ ಬಹಿರಂಗ ಸಭೆಯನ್ನು ನಡೆಸಿದೆ.

ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ನೀತಿ, ಭ್ರಷ್ಟಾಚಾರಗಳ ವಿರುದ್ಧ ಪ್ರಬಲ ಜನಾಂದೋಲನ ನಡೆಯುತ್ತಿರುವಾಗ, ಕೋಮುವಾದಿ ಶಕ್ತಿಗಳು ಜನರ ಐಕ್ಯತೆಯನ್ನು ಮುರಿಯುತ್ತಿವೆ. ಸಿಪಿಐ(ಎಂ) ಕೋಮು ಸೌಹಾರ್ದತೆಗಾಗಿ, ರಾಷ್ಟ್ರೀಯ ಸಮಗ್ರತೆಗಾಗಿ, ಜನಪರವಾದ ಪರ್ಯಾಯ ಆರ್ಥಿಕ ನೀತಿಗಾಗಿ ನಡೆಸುತ್ತಿರುವ ದೇಶವ್ಯಾಪಿ ಆಂದೋಲನಕ್ಕೆ ಜನತೆ ಬೆಂಬಲ ನೀಡಬೇಕೆಂದು ಜಿಲ್ಲಾಸಮಿತಿ ವಿನಂತಿಸಿದೆ.

ಈ ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಮುಖಂಡರಲ್ಲದೆ ಕಾನ್ಪುರದ ದಿಟ್ಟ ಕಾರ್ಮಿಕ ನಾಯಕಿ, ಕೋಮುವಾದದ ವಿರುದ್ಧ ಸೆಣಸುತ್ತಿರುವ ಸುಭಾಷಿಣಿ ಅಲಿಯವರೂ ಭಾಗವಹಿಸಿದ್ದಾರೆ.

ರಾವ್ ಸರಕಾರದ ಮತ್ತೊಂದು ನಾಚಿಕೆಗೇಡಿ ವರ್ತನೆ

ಅಮೆರಿಕಾದೊಡನೆ ಮಾರಕ ರಕ್ಷಣಾ ಒಪ್ಪಂದ

ಭಾರತದ ಮಹತ್ವದ ಭದ್ರತಾ ಹಿತಾಸಕ್ತಿಗಳು ಮತ್ತು ಸಾರ್ವಭೌಮತೆಯನ್ನು ತಟ್ಟುವ ವಿಷಯಗಳಲ್ಲಿ ಕದ್ದು ಮುಚ್ಚಿ ವರ್ತಿಸುವ ನರಸಿಂಹರಾವ್ ಸರಕಾರದ ಈ ಪರಂಪರೆಗೆ ಇನ್ನೊಂದು ಕೊಂಡಿ ಸೇರಿಸಿದೆ. ನವದೆಹಲಿಗೆ ಅಮೆರಿಕಾದ ರಕ್ಷಣಾ ಕಾರ್ಯದರ್ಶಿ ವಿಲಿಯಂ ಪೆರಿಯ ಭೇಟಿಯ ಸಮಯದಲ್ಲಿ ಭಾರತ-ಅಮೆರಿಕಾ ರಕ್ಷಣಾ ಸರಕಾರದ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈ ಒಪ್ಪಂದವಾಗುವ ಸುದ್ದಿಯನ್ನು ಇದ್ದಕ್ಕಿದ್ದಂತೆ ಪೆರಿಯವರ ಭೇಟಿಯ ಮುನ್ನಾದಿನವಷ್ಟೇ ಪ್ರಕಟಿಸಲಾಯಿತು. ಇಂತಹ ಗಂಭೀರ ನೀತಿ ಕುರಿತಾದ ಕ್ರಮದ ಬಗ್ಗೆ ಯಾವುದೇ ಸಾರ್ವಜನಿಕ ಚರ್ಚೆ ನಡೆಯದಿರಲೆಂದೇ ಸರಕಾರದ ಆಶಯವಿರಬೇಕು. ಚರ್ಚೆಯ ಬಗ್ಗೆಯೇ ಭಯವಿರಬೇಕು. ಕಳೆದ ಬಾರಿ ಗ್ಯಾಟ್ ಸಂಧಿಗೆ ತಲೆಬಾಗುವ ಎರಡು ಸುಗ್ರೀವಾಜ್ಞೆಗಳು; ಈ ಬಾರಿ ಈ ರಕ್ಷಣಾ ಒಪ್ಪಂದ.

ಈ ಒಪ್ಪಂದವನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಕಳೆದ ಮೂರು ವರ್ಷಗಳಲ್ಲಿ ಅಮೆರಿಕಾ ಆಡಳಿತದ ಮುತುವರ್ಜಿಯಿಂದ ಕಾಂಗ್ರೆಸ್(ಐ) ಸರಕಾರ ಜಂಟಿ ಕವಾಯಿತು, ತರಬೇತಿ ಕಾರ್ಯಕ್ರಮ ಮುಂತಾದ ರಕ್ಷಣಾ ಸಹಕಾರದ ವಲಯವನ್ನೂ ಪ್ರವೇಶಿಸಿತು. ಭೂಸೇನೆ, ಜಲಸೇನೆ, ವಾಯುಸೇನೆಗ

ಪುಟ 8 ನೋಡಿ

ಗಾಂಧೀಜಿಯ ಸಮಾಧಿಯ ಬಳಿ



ರಾಜಘಾಟಿಗೆ '0'(ಸೊನ್ನೆ) ಕಿಲೋಮೀಟರ್, "ರಾಮರಾಜ್ಯ"ದ ಕನಸಿಗೆ.......?
[illegible]

ವಾರದ ವ್ಯಂಗ್ಯಚಿತ್ರ

'ಟೈಮ್ಸ್ ಆಫ್ ಇಂಡಿಯಾ'ನಲ್ಲಿ"ನಲ್ಲಿ ಆರ್.ಕೆ.ಲಕ್ಷ್ಮಣ್



ವರ್ತಮಾನ

ಇತಿಹಾಸ

ಸಿಐಟಿಯು ಆಗ್ರಹ

"ಕರ್ನಾಟಕದಲ್ಲಿ ಅವಶ್ಯಕತೆ ಆಧಾರಿತ ಕನಿಷ್ಟ ವೇತನದ ಅಧ್ಯಯನಕ್ಕೆ ಆಯೋಗ ರಚಿಸಿ"

ಜನವರಿ 13ರಂದು ಸಿಐಟಿಯು ರಾಜ್ಯ ಮುಖಂಡರು ರಾಜ್ಯದ ಕಾರ್ಮಿಕ ಮಂತ್ರಿ ಶ್ರೀ ಸಿ. ಗುರುನಾಥ್‌ರವರನ್ನು ಭೇಟಿಯಾಗಿ ರಾಜ್ಯದ ಕಾರ್ಮಿಕರ ಪರವಾಗಿ ಬೇಡಿಕೆಗಳನ್ನು ಸಲ್ಲಿಸಿದ ವರದಿಯನ್ನು ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಸಿಐಟಿಯು ನಿಯೋಗ ಕಾರ್ಮಿಕ ಮಂತ್ರಿಗಳಿಗೆ ಕನಿಷ್ಟಕೂಲಿ ನಿರ್ಣಯ ಮತ್ತು ಜಾರಿಯ ಬಗ್ಗೆ ಒಂದು ಮನವಿಯನ್ನು ಅರ್ಪಿಸಿತು. ಅದು ಹೀಗಿದೆ.-

ಕೈಗಾರಿಕಾ ಕಾರ್ಮಿಕರ ವೇತನದ ಬಗ್ಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆದ ಚರ್ಚೆಯ ಫಲವಾಗಿ ಕಾರ್ಮಿಕರ ವೇತನವನ್ನು 3 ಹಂತಗಳಲ್ಲಿ ಗುರುತಿಸಲು ಸಾಧ್ಯವಾಗಿದೆ.

1. ಬದುಕಿರಲು ಸಾಲುವ ವೇತನ (Subsistence Wage)
2. ನ್ಯಾಯಬದ್ಧ ವೇತನ(Fair Wage)
3. ಜೀವನ ವೆಚ್ಚ ವೇತನ(Living Wage)

ಬದುಕಿರಲು ಸಾಲುವ ವೇತನ ಅಂದರೆ ಅವಶ್ಯಕತೆ ಆಧಾರಿತ ವೇತನವಾಗಿದೆ. 1928 ರಲ್ಲಿ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಓ) ಅವಶ್ಯಕತೆ ಆಧಾರಿಕ ಕನಿಷ್ಟ ವೇತನದ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿತ್ತು. ಈ ಅಂತರಾಷ್ಟ್ರೀಯ ಒತ್ತಡದಿದಾಗಿ 1948ರಲ್ಲಿ ಕೇಂದ್ರ ಸರ್ಕಾರ "ಕನಿಷ್ಟ ವೇತನ" ಕಾಯ್ದೆಯನ್ನು ರಚಿಸಿತು. ಮುಂದೆ 1957ರಲ್ಲಿ 15ನೇ ಭಾರತೀಯ ಕಾರ್ಮಿಕ ಸಮ್ಮೇಳನ (ಐ.ಎಲ್.ಸಿ) ಅವಶ್ಯಕತೆ ಆಧಾರಿತ ಕನಿಷ್ಟ ವೇತನ ಎಷ್ಟಿರಬೇಕು ಎಂಬ ಬಗ್ಗೆ ನಿರ್ಣಯವೊಂದನ್ನು ಅಂಗೀಕರಿಸಿತು. ಅವಶ್ಯಕತೆ ಆಧಾರಿತ ಕನಿಷ್ಟ ವೇತನದ ಕುರಿತು ಐ.ಎಲ್.ಸಿ. ಸ್ವೀಕರಿಸಿದ ನಿರ್ಣಯವನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಆದರೆ 1957-59 ರಲ್ಲಿ ಕೇರಳದಲ್ಲಿ ಅಧಿಕಾರದಲ್ಲಿದ್ದ ಪ್ರಪ್ರಥಮ ಕಮ್ಯುನಿಸ್ಟ್ ಸರ್ಕಾರ ಹೆಂಚು ಕಾರ್ಮಿಕರ ಕನಿಷ್ಟ ವೇತನವನ್ನು ನಿಗಿಪಡಿಸುವ ಸಂದರ್ಭದಲ್ಲಿ ಐ.ಎಲ್.ಸಿ. ಶಿಫಾರಸ್ಸನ್ನು ಜಾರಿಗೆ ತರಲ ಮುಂದಾಯಿತು. ಐ.ಎಲ್.ಸಿ. ಶಿಫಾರಸ್ಸಿನ ಆಧಾರದಲ್ಲಿ ಕೇರಳದಲ್ಲಿ ಅವಶ್ಯಕತೆ ಆಧಾರಿತ ಕನಿಷ್ಟ ವೇತನ ಎಷ್ಟಿರಬೇಕು ಎಂಬುದನ್ನು ಅಬಾಯಸಮಾಡಿ ಶಿಫಾರಸ್ಸನ್ನು ಅನುಷ್ಠಾನಕ್ಕೆ ತರಲು ಹೊರಟಾಗ ಇದರ ವಿರುದ್ಧ ಮಾಲೀಕರು ಸರ್ವೋಚ್ಛ ನ್ಯಾಯಾಲಯದ ಮೊರೆ ಹೊಕ್ಕರು. (ಉಣಿಚೊಯ್ ವರ್ಸಸ್ ಕೇರಳ ಸರ್ಕಾರ) ಆದರೆ ಸರ್ವೋಚ್ಛ ನ್ಯಾಯಾಲಯವು ಕೇರಳ ಸರ್ಕಾರದ ಕ್ರಮವನ್ನು ಎತ್ತಿ ಹಿಡಿಯಿತು. ಮಾತ್ರವಲ್ಲ ಕಾರ್ಮಿಕರಿಗೆ ಬದುಕಿರಲು ಬೇಕಾಗುವ ಅವಶ್ಯಕತೆ ಆಧಾರಿತ ಕನಿಷ್ಟ ವೇತನ ಕೊಡದ ಯಾವ ಉದ್ದಿಮೆಗೂ ಅಸ್ತಿತ್ವದಲ್ಲಿರಲು ಹಕ್ಕಿಲ್ಲ ಎಂದು ಸಾರಿತು. ಆದರೆ ಸಂಘಟಿತ ವಲಯದ ಕಾರ್ಮಿಕರ ಒಂದು ಸಣ್ಣ ವಿಭಾಗವನ್ನು ಹೊರತು ಪಡಿಸಿ ಅಸಂಘಟಿತ ಕಾರ್ಮಿಕರನ್ನೂ ಒಳಗೊಂಡಂತೆ ಲಕ್ಷಗಟ್ಟಲೆ ಕಾರ್ಮಿಕರು ಬದುಕಿರಲು ಬೇಕಾಗುವ ಅವಶ್ಯಕತೆ ಆಧಾರಿತ ಕನಿಷ್ಟ ವೇತನವನ್ನೂ ಪಡೆಯದೆ ದಟ್ಟ ದಾರಿದ್ರ್ಯದಲ್ಲಿ ಜೀವಿಸುತ್ತಿದ್ದಾರೆ.

ಕರ್ನಾಟಕದಲ್ಲಿ:- ಕರ್ನಾಟಕ ಸರ್ಕಾರ ಕೇವಲ 67 ಉದ್ಯೋಗಗಳನ್ನು ಮಾತ್ರ 1948ರ ಕನಿಷ್ಠ ವೇತನ ಕಾಯ್ದೆಯ ಅಡಿಯಲ್ಲಿ ಪಟ್ಟಿ ಮಾಡಿದೆ. ಈ ಪಟ್ಟಿಯೊಳಗೆ ಸೇರಿಸಬಹುದಾದ ಅನೇಕ ಉದ್ಯೋಗಗಳನ್ನು ಕೈಬಿಟ್ಟಿರುವುದರಿಂದ ರಾಜ್ಯದಲ್ಲಿ ಲಕ್ಷಾಂತರ ಕಾರ್ಮಿಕರು ಕನಿಷ್ಟ ವೇತನ ಕಾಯ್ದೆಯ ರಕ್ಷಣೆಯಿಂದ ವಂಚಿತರಾಗಿದ್ದಾರೆ. ಪಟ್ಟಿಯಲ್ಲಿ ಸೇರಿಸಲಾದ 67 ಉದ್ಯೋಗಗಳಲ್ಲಿ 37 ಉದ್ಯೋಗಗಳಿಗೆ ಮಾತ್ರ ಕನಿಷ್ಟ ವೇತನವನ್ನು ನಿಗದಿಪಡಿಸಲಾಗಿದೆ. ಈ 37 ಉದ್ಯೋಗಗಳ ಕನಿಷ್ಟ ವೇತನವನ್ನು ಕಾಲಕಾಲಕ್ಕೆ ಪರಿಷ್ಕರಿಸದೇ ಹೋಗಿರುವುದರಿಂದ ಅವುಗಳ ನಡುವೆ ಏಕರೂಪತೆ ಇಲ್ಲದಂತಾಗಿದೆ. ನಿಗದಿಪಡಿಸಿದ ಕನಿಷ್ಟ ವೇತನವನ್ನು ಕಟ್ಟು ನಿಟ್ಟಾಗಿ ಜಾರಿಗೆ ತರುವ ವ್ಯವಸ್ಥೆ ಇಲ್ಲ. ಕನಿಷ್ಟ ವೇತನ ನಿಗದಿಪಡಿಸುವಾಗ ಮಾಲೀಕರ ಒತ್ತಡಗಳಿಗೆ ಮಣಿದು ಜಾರಿಯಲ್ಲಿದ್ದ ವೇತನಕ್ಕಿಂತ ಕಡಿಮೆ ದರಗಳಲ್ಲಿ ವೇತನವನ್ನು ನಿಗದಿಪಡಿಸಿದ ಉದಾಹರಣೆಗಳಿವೆ.

ಕಾರ್ಮಿಕರ ಅವಶ್ಯಕತೆ ಆಧಾರಿತ ಕನಿಷ್ಟ ವೇತನ ಎಷ್ಟಿರಬೇಕು ಎಂಬುದನ್ನು ತೀರ್ಮಾನಿಸುವ ಬದಲು ಕಾರ್ಮಿಕರ ಕನಿಷ್ಟ ವೇತನ ಬಡತನ ರೇಖೆಗಿಂತ ಕಡಿಮೆ ಇರಬಾರದು ಎಂಬ ಪರಿಕಲ್ಪನೆಯನ್ನು ಕರ್ನಾಟಕದಲ್ಲಿ ಪ್ರತಿಪಾದಿಸಲಾರಂಭಿಸಲಾಯಿತು. ಆದರೆರಾಜ್ಯದಲ್ಲಿ ಇಂದೂ ಅಗರಬತ್ತಿ, ಬೀಡಿ, ಕೈಮಗ್ಗ, ತೋಟ ಮೊದಲಾದ ಲಕ್ಷಾಂತರ ಕಾರ್ಮಿಕರಿಗೆ ಅವಶ್ಯಕತೆ ಆಧಾರಿತ ಕನಿಷ್ಟ ವೇತನವೂ ನಿಗದಿಯಾಗಲಿಲ್ಲ, ಬಡತನದ ರೇಖೆಗಿಂತ ಮೇಲಟ್ಟದ ಕನಿಷ್ಟ ವೇತನವೂ ನಿಗದಿಯಾಗಲಿಲ್ಲ.


ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಅಸಂಘಟಿತ ವಲಯದ ಕಾರ್ಮಿಕರನ್ನು ಸಂಘಟಿಸುವುದರ ಅವಶ್ಯಕತೆಯನ್ನು ಗಂಭೀರವಾಗಿ ಮನಗಾಣುತ್ತಾ ಅವರ ಕನಿಷ್ಟ ವೇತನ ಪರಿಷ್ಕರಣೆಗಾಗಿ ಹೋರಾಟಗಳನ್ನು ಸಂಘಟಿಸುತ್ತಾ ಬಂದಿದೆ. 1993 ನವಂಬರ್ ತಿಂಗಳಲ್ಲಿ ವಿಧಾನಸೌಧದ ಎದುರು ನಡೆಸಲಾದ ಅನಿರ್ದಿಷ್ಟ ಅವಧಿಯ ಬೃಹತ್ ಸಾಮೂಹಿಕ ಧರಣಿ ಸತ್ಯಾಗ್ರಹ ಈ ದಿಕ್ಕಿನಲ್ಲಿ ಒಂದು ಪ್ರಮುಖ ದಾಖಲೆಯಾಗಿದೆ. 3 ಯುನಿಟ್‌ಗಳ ಒಂದು ಕಾರ್ಮಿಕ ಕುಟುಂಬವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು 1991-92ರ ಬೆಲೆಗಳ ಆಧಾರದಲ್ಲಿ ಔದ್ಯಮಿಕ ಗ್ರಾಹಕ ಬೆಲೆ ಸೂಚ್ಯಾಂಕದ 1,309ಪಾಯಿಂಟುಗಳಿಗೆ ಮಾಸಿಕ ಕನಿಷ್ಟ ವೇತನ 1800¥00 ನಿಗದಿಯಾಗಬೇಕೆಂದೂ 1,309 ರಮೇಲಿನ ಪ್ರತಿಯೊಂದು ಪಾಯಿಂಟ್‌ಗೆ 5 ಪೈಸೆ ದರದಲ್ಲಿ ತುಟ್ಟಿಭತ್ಯೆ ನಿಗದಿಯಾಗಬೇಕೆಂದೂ ಸಿಐಟಿಯು ಬೇಡಿಕೆಯನ್ನು ಇಟ್ಟಿತು. ಅಂದು ಅಧಿಕಾರದಲ್ಲಿದ್ದ ಮೊಯ್ಲಿ ನೇತೃತ್ವದ ಸರ್ಕಾರ ಸಿಐಟಿಯು ಬೇಡಿಕೆಯನ್ನು ತಾತ್ವಿಕವಾಗಿ ಒಪ್ಪಿಕೊಂಡಂತೆ ಕಂಡರೂ ಆ ದಿಕ್ಕಿನಲ್ಲಿ ಪ್ರಾಮಾಣಿಕ ಹೆಜ್ಜೆ ಇಡಲಿಲ್ಲ.

ಈಗ ಆಗಬೇಕಾದುದು ಏನು?

ಪಂಜಾಬ್, ದೆಹಲಿ ಮತ್ತು ಹರಿಯಾಣ ರಾಜ್ಯಗಳಲ್ಲಿ ತೀರಾ ಇತ್ತೀಚೆಗೆ ಆರಂಭವಾದ ಅಸಂಘಟಿತ ವಲಯದ ಕಾರ್ಮಿಕರ ಹೋರಾಟಗಳ ಫಲವಾಗಿ ಇಂದು ರಾಜ್ಯಗಳಲ್ಲಿ ಕನಿಷ್ಟ ವೇತನ ತಿಂಗಳಿಗೆ ರೂ 1,300-00ಕ್ಕಿಂತಲೂ ಹೆಚ್ಚು ನಿಗದಿಯಾಗಿ ಜಾರಿಯಾಗಿದೆ.

ಇತ್ತೀಚೆಗೆ ಪಶ್ಚಿಮ ಬಂಗಾಳದ ಕಾರ್ಮಿಕ ಮಂತ್ರಿ ಶ್ರೀ ಶಾಂತಿ ಘಟಕ್ ಅವರ ಅಧ್ಯಕ್ಷತೆಯಲ್ಲಿ ನಡೆದ ಭಾರತದ ಕಾರ್ಮಿಕ ಮಂತ್ರಿಗಳ ಸಮ್ಮೇಳನವು ದೇಶದಲ್ಲಿ ಏಕರೂಪದ ಅವಶ್ಯಕತೆ ಆಧಾರಿತ ಕನಿಷ್ಟ ವೇತನ ಎಂಬ ಬಗ್ಗೆ ಸಲಹೆ ಮಾಡಿದೆ. ಇಲ್ಲಿಯವರೆಗೆ 3 ಯೂನಿಟುಗಳ ಒಂದು ಕುಟುಂಬವನ್ನು ಆಧಾರವಾಗಿಟ್ಟುಕೊಳ್ಳುವುದನ್ನು ಕೈಬಿಟ್ಟು 4 ಯೂನಿಟುಗಳ ಒಂದು ಕುಟುಂಬವನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಅದು ಶಿಫಾರಸ್ಸು ಮಾಡಿದೆಯಲ್ಲದೆ, ಒಬ್ಬನಿಗೆ ಪ್ರತಿದಿನ ಬೇಕಾಗುವ 2700 ಕ್ಯಾಲರಿ ಆಹಾರ, ವರ್ಷಕ್ಕೆ ಬೇಕಾಗುವ 125 ಗಜ ಬಟ್ಟೆ, ಮನೆಯ ಬಾಡಿಗೆ ಹಾಗೂ ಪ್ರತಿಶತ 25ರಂತೆ ಇತರ ಖರ್ಚನ್ನು ಲೆಕ್ಕ ಹಾಕಿ ಅವಶ್ಯಕತೆ ಆಧಾರಿತ ಕನಿಷ್ಠ ವೇತನ ನಿಗದಿಯಾಗಬೇಕೆಂದು ಸೂಚಿಸಿದೆ. ಇತ್ತೀಚೆಗೆ ಕೇಂದ್ರ ಸರಕಾರ ಬೀಡಿ ಕಾರ್ಮಿಕರ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ನೇಮಿಸಿದ ಚಂದ್ರಪ್ರಭಾ ಅರಸ್ ನೇತೃತ್ವದ ಸಂಸದೀಯ ಸಮಿತಿಯು ಕಾರ್ಮಿಕ ಮಂತ್ರಿಗಲ ಸಮ್ಮೇಳನವು ಶಿಫಾರಸ್ಸು ಮಾಡಿರುವ ಕನಿಷ್ಠ ವೇತನದ ಸೂಚನೆಯನ್ನೇ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಹೀಗಿರುವಾಗ ಕರ್ನಾಟಕ ರಾಜ್ಯದಲ್ಲಿಯೂ ಕನಿಷ್ಠ ವೇತನ ನಿಗದಿ ಪಡಿಸುವ ಬಗ್ಗೆ ಸರ್ಕಾರ ವೈಜ್ಞಾನಿಕ ದೃಷ್ಟಿಕೋನ ತಾಳುವುದು ಅವಶ್ಯವಿದೆ. ಕನಿಷ್ಠ ವೇತನ ವಿಷಯದಲ್ಲಿ ಕರ್ನಾಟಕವು ಇತರ ರಾಜ್ಯಗಳಿಗಿಂತ ಹಿಂದುಳಿಯಬಾರದು. ಯಾವುದೇ ಉದ್ದಿಮೆಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಬಡತನದ ರೇಖೆಗಿಂತ ಕಡಿಮೆ ವೇತನ ದೊರೆಯಬಾರದು. ಅವರಿಗೆ ಅವಶ್ಯಕತೆ ಆಧಾರಿತ ಕನಿಷ್ಠ ವೇತನ ನಿಗದಿ ಮಾಡಿ ಅದನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲು ನೂತನ ಜನತಾದಳ ಸರ್ಕಾರ ಕ್ರಮ ಕೈಗೊಳ್ಳಬೇಕೆಂದೂ, ಈ ದಿಕ್ಕಿನಲ್ಲಿ ಕರ್ನಾಟಕದಲ್ಲಿ ಕಾರ್ಮಿಕರಿಗೆ ಅವಶ್ಯಕತೆ ಆಧಾರಿತ (Need-based minimum wage) ಕನಿಷ್ಠ ವೇತನ ಎಷ್ಟಿರಬೇಕು, ಬೆಲೆಏರಿಕೆ ಯನ್ನು ಸರಿದೂಗಿಸಲು ಯಾವ ದರದಲ್ಲಿ ತುಟ್ಟಿಭತ್ಯೆ ಕೊಡಬೇಕು ಎಂಬುದನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ಸಲಹೆ ನೀಡಲು ಸರ್ಕಾರ ಅರ್ಥಿಕತಜ್ಞರನ್ನು, ಟ್ರೇಡ್ ಯೂನಿಯನ್ ಪ್ರತಿನಿಧಿಗಳನ್ನು ಮತ್ತು ಮಾಲೀಕರ ಪ್ರತಿನಿಧಿಗಳನ್ನು ಒಳಗೊಂಡ ಒಂದು ಆಯೋಗ (Commission) ವನ್ನು ನೇಮಿಸಬೇಕೆಂದು ಒತ್ತಾಯಿಸುತ್ತೇವೆ.



ಶೋಷಣೆಯಿಲ್ಲದ, ಸಮಾನತೆಯ ಸಮಾಜ ನಿರ್ಮಿಸುವ ಗುರಿಯಿಂದ ಪ್ರೇರಿತರಾಗಿ, ವೈಜ್ಞಾನಿಕ ಸಿದ್ಧಾಂತದ ಆಧಾರದಲ್ಲಿ ಆರಂಭವಾದ ಭಾರತದ ಕಮ್ಯುನಿಸ್ಟ್ ಆಂದೋಲನದ ಇತಿಹಾಸ, ಅವಿರತ ಹೋರಾಟದ ಇತಿಹಾಸ; ಆಧುನಿಕ ಭಾರತದ ಬೆಳವಣಿಗೆಯೊಂದಿಗೆ ಹಾಸುಹೊಕ್ಕಾಗಿರುವ ಇತಿಹಾಸ; ಅಪೂರ್ವ ತ್ಯಾಗ-ಬಲಿದಾನಗಳ ಮೂಲಕ ಬೆಳೆದು ಬಂದ ಇತಿಹಾಸ; ಆಂತರಿಕ ಚರ್ಚೆ, ಹೋರಾಟಗಳ ಮೂಲಕ ಮುನ್ನಡೆದ ಇತಿಹಾಸ. ಈ ಇತಿಹಾಸದ ರೂಪುರೇಷೆ ನೀಡುವ ಲೇಖನಮಾಲೆ.

ಆಧಾರ
ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್‌ರವರ
An Outline History of the Communist Movement in India

ಸಂಗ್ರಹ-ಅನುವಾದ: ವಿಶ

ಅಧ್ಯಾಯ 19

ಪಕ್ಷದ 13ನೇ ಮಹಾಧಿವೇಶನ

ಸಿಪಿಐ(ಎಂ)ನ 13ನೇ ಮಹಾಧಿವೇಶನ 1988 ಡಿಸೆಂಬರ್-1989 ಜನವರಿಯಲ್ಲಿ ತಿರುವನಂತಪುರದಲ್ಲಿ ನಡೆಯಿತು. ಎಡರಂಗ ಸರಕಾರಗಳು ಮತ್ತು ಇತರ ಕಾಂಗ್ರೆಸೇತರ ರಾಜ್ಯ ಸರಕಾರಗಳ ಮೇಲೆ ಆಕ್ರಮಣ ನಡೆಸುವ ಹಾಗೂ ಅವುಗಳ ಕಾರ್ಯನಿರ್ವಹಣೆಯನ್ನು ತಡೆಯುವ ಕೇಂದ್ರ ಸರಕಾರದ ನೀತಿಯನ್ನು ಅಧಿವೇಶನ ಪರಿಶೀಲಿಸಿತು. ಎರಡು ರಾಜ್ಯಗಳ (ಪ.ಬಂಗಾಳ ಹಾಗೂ ಕೇರಳ) ಜನತೆಯ ನ್ಯಾಯಬದ್ಧ ಬೇಡಿಕೆಗಳನ್ನು ತಿರಸ್ಕರಿಸುವ ಮೂಲಕ ಕೇಂದ್ರ ಸರ್ಕಾರ ಈ ಜನರನ್ನು ಹಸಿವಿನ ದವಡೆಗೆ ನೂಕುತ್ತಿದೆ. ಮತ್ತು ಅವರ ಅಭಿವೃದ್ಧಿ ಚಟುವಟಿಕೆಗಳ ಪ್ರಗತಿಯನ್ನು ತಡೆಯುತ್ತಿದೆ. ಎಂದು ಅದು ಅಭಿಪ್ರಾಯಪಟ್ಟಿತು.

ಆದ್ದರಿಂದ ಎಡರಂಗ ಸರಕಾರ ಯಾವ ಪರಿಮಿತಿಯಲ್ಲಿ ಕೆಲಸ ನಿರ್ವಹಿಸಬೇಕಾಗಿದೆ ಎಂಬುದರ ಬಗ್ಗೆ ಮಾತ್ರವೇ ಅಲ್ಲದೆ ಎಡರಂಗ ಸರಕಾರಗಳ ವಿರುದ್ಧ ಕೇಂದ್ರ ತಳೆಯುತ್ತಿರುವ ನಗ್ನ ಆಕ್ರಮಣಕಾರಿ ಧೋರಣೆಗಳ ಬಗ್ಗೆಯೂ ಜನರಿಗೆ ಸತತವಾಗಿ ತಿಳುವಳಿಕೆ ನೀಡಬೇಕಾದುದು ಪಕ್ಷದ ಗುರಿಯಾಗಿದೆ. ಎರಡು ಎಡರಂಗ ಸರಕಾರಗಳನ್ನು ರಕ್ಷಿಸುವ ಹೊತ್ತಿನಲ್ಲೇ ಪಕ್ಷ ಕೇಂದ್ರದ ಧಾಳಿಗೆ ಒಳಗಾದ ಇನ್ನುಳಿದ ಕಾಂಗ್ರೆಸೇತರ ಸರಕಾರಗಳನ್ನು ಸಂರಕ್ಷಿಸ ಬೇಕು.

ಈ ಸರಕಾರಗಳಲ್ಲಿ ಕೆಲಸ ಮಾಡುವಾಗಲೇ ಸಂಸದೀಯ ಭ್ರಮೆಗಳು ಮತ್ತು ಸಮಯಸಾಧಕತನ ಹೆಚ್ಚುವುದರ ವಿರುದ್ಧ ಹೋರಾಟ ನಡೆಸಲು ಅನುಕೂಲವಾಗುವಂತೆ ಇಡೀ ಪಕ್ಷಕ್ಕೆ ನಿರಂತರವಾಗಿ ಶಿಕ್ಷಣ ನೀಡಬೇಕಾದುದು ಪಕ್ಷದ ಮುಂದಿರುವ ಒಂದು ಮುಖ್ಯ ಕೆಲಸ. ಸಾಧ್ಯವಾದಲ್ಲೆಲ್ಲ ಸರಕಾರ ರಚಿಸುವುದು ಸೇರಿದಂತೆ ಸಂಸದೀಯ ಕ್ಷೇತ್ರದಲ್ಲಿ ಕೆಲಸ ಮಾಡುವುದು ಕಾರ್ಮಿಕ ವರ್ಗ ಹಾಗೂ ಪ್ರಜಾಸತ್ತಾತ್ಮಕ ಚಳುವಳಿಯನ್ನು ಒಗ್ಗೂಡಿಸುವ ಹೋರಾಟದಲ್ಲಿ ಒಂದು ಪ್ರಮುಖ ಅಸ್ತ್ರ ಆಗಿರುವಾಗಲೇ ಸಂಸದೀಯವಾದದ ವಾತಾವರಣ ಪಕ್ಷದ ಸದಸ್ಯರ ಕ್ರಾಂತಿಕಾರಿ ಪ್ರಜ್ಞೆಯನ್ನು ನಾಶ ಮಾಡಿ ಅವರನ್ನು ಭ್ರಷ್ಟರನ್ನಾಗಿಸುವ ಸಾಧ್ಯತೆಯಿದೆ ಎಂಬ ಅಭಿಪ್ರಾಯವನ್ನು ಪಕ್ಷ ಸದಾ ವ್ಯಕ್ತಪಡಿಸಿದೆ. ಈ ಅಪಾಯದ ವಿರುದ್ಧ ನಿರಂತರವಾಗಿ ಕಣ್ಗಾವಲನ್ನು ಇಡಬೇಕು. ಪಕ್ಷ ಮತ್ತು ದುಡಿಯುವ ವರ್ಗದ ಹೋರಾಟಗಾರರ ಸಂಘಟನೆಯನ್ನು ಸರಕಾರ ಹಾಗೂ ಶಾಸಕಾಂಗಗಳಿಗೆ ಅಧೀನಗೊಳಿಸಬಾರದು, ಅದರ ಬದಲು ಶಾಸಕಾಂಗಗಳೇ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳಿಗೆ ಅಧೀನವಾಗಿರಬೇಕು.

1978ರಲ್ಲಿ ನಡೆದ ಸಾಲ್ಕಿಯಾ ಪ್ಲೀನಂ ನಂತರದ ಪಕ್ಷದ ಸಂಘಟನಾ ಪರಿಸ್ಥಿತಿಯನ್ನೂ 13ನೇ ಮಹಾಧಿವೇಶನ ಪರಿಶೀಲಿಸಿತು. ಪಕ್ಷದ ಸದಸ್ಯತ್ವ 1,61,000 ದಿಂದ 4,65,000ಕ್ಕೆ ಅಂದರೆ ಮೂರುಪಟ್ಟು ಹೆಚ್ಚಿತು. ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಸದಸ್ಯತ್ವ] 15 ಪಟ್ಟು ಅಂದರೆ 2.23 ಲಕ್ಷದಿಂದ 48 ಲಕ್ಷಕ್ಕೆ ಏರಿತು.

ಸಾಲ್ಕಿಯಾ ಪ್ಲೀನಂ ಹೆಚ್ಚಿನ ಒತ್ತು ಕೊಟ್ಟಿದ್ದ ಹಿಂದಿ ಮಾತನಾಡುವ ಪ್ರದೇಶಗಳಲ್ಲಿ ಪಕ್ಷದ ಸದಸ್ಯತ್ವ ಹೆಚ್ಚಳ ಸಾಧಾರಣವಾಗಿತ್ತು. ಅಂದರೆ 1978ರಲ್ಲಿ 14,109 ಸದಸ್ಯರಿದ್ದದ್ದು 1987 ರಲ್ಲಿ 26,782ಕ್ಕೆ ಏರಿತು. ಪಕ್ಷದ ಪರಂಪರಾಗತ ಬಲಿಷ್ಠ ಪ್ರದೇಶಗಳಾದ ಪಶ್ಚಿಮ ಬಂಗಾಳ, ತ್ರಿಪುರಾ, ಕೇರಳ,ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಹೆಚ್ಚಳ ಗಣನೀಯವಾಗಿತ್ತು. ಇದರಿದಾಗಿ ಹೊಸ ಪ್ರದೇಶಗಳು ಮತ್ತು ಪರಂಪರಾಗತ ಬಲಿಷ್ಠ ಪ್ರದೇಶಗಳ ನಡುವಿನ ಅಂತರ ಇನ್ನಷ್ಟು ಹೆಚ್ಚಿತು.

ಪಕ್ಷದ ನೇತೃತ್ವದಲ್ಲಿ ಸಿಐಟಿಯು ಮತ್ತು ಎಐಎಡಬ್ಲ್ಯುಯುಗಳ ಸದಸ್ಯತ್ವ ಏರಿಕೆ ಪ್ರಮಾಣ ಇತರ ಸಾಮೂಹಿಕ ಸಂಘಟನೆಗಳಿಗೆ ಹೋಲಿಸಿದರೆ ಮಂದಗತಿಯಲ್ಲಿತ್ತು. ಪಕ್ಷದಲ್ಲಿ ಕಾರ್ಮಿಕವರ್ಗದ ಪ್ರಮಾಣ ಇನ್ನೂ ದುರ್ಬಲವಾಗಿದೆ ಎಂದು ಮಹಾಧಿವೇಶನ ಅಭಿಪ್ರಾಯಪಟ್ಟಿತು.

ಕೇಂದ್ರದಿಂದ ಪ್ರಕಟಿಸಲಾಗುವ ಪಕ್ಷದ ಪತ್ರಿಕೆಗಳ ಪ್ರಸಾರದಲ್ಲಿ ಗಮನಾರ್ಹ ಮುನ್ನಡೆಯೇನೂ ಆಗಲಿಲ್ಲ.



ಬದಲಾದ ಕರ್ನಾಟಕದ ಸನ್ನಿವೇಶದಲ್ಲಿ ಸಿಪಿಐ(ಎಂ)ನ 15ನೇ ರಾಜ್ಯ ಸಮ್ಮೇಳನ

ಎನ್.ಕೆ. ಉಪಾಧ್ಯಾಯ

ಸಿಪಿಐ(ಎಂ) ಪಕ್ಷದ 15ನೇ ಕರ್ನಾಟಕ ರಾಜ್ಯ ಸಮ್ಮೇಳನ ಬದಲಾಗುತ್ತಿರುವ ರಾಜಕೀಯ ಪರಿಸ್ಥಿತಿಯಲ್ಲಿ ನಡೆಯುತ್ತಿದೆ. ಆದ್ದರಿಂದ ಈ ಸಮ್ಮೇಳನಕ್ಕೆ ಹೆಚ್ಚಿನ ಮಹತ್ವವಿದೆ. ಇತ್ತೀಚಿಗೆ ನಡೆದ ಕರ್ನಾಟಕ-ಆಂಧ್ರ ಪ್ರದೇಶದ ವಿಧಾನಸಭೆಗಳ ಚುನಾವಣೆಗಳು ಆ ಎರಡು ರಾಜ್ಯಗಳ ರಾಜಕೀಯ ಪರಿಸ್ಥಿತಿಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿರುವುದಷ್ಟೇ ಅಲ್ಲ, ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ನರಸಿಂಹರಾವ್ ಸರಕಾರಕ್ಕೇನೇ ಅಪಾಯ ತಂದೊಡ್ಡಿರುವುದನ್ನು ಕಣ್ಣಾರೆ ಕಾಣುತ್ತಿದ್ದೇವೆ. ಕಾಂಗ್ರೆಸ್ಸಿನ ಭದ್ರಕೋಟೆಗಳಾಗಿದ್ದ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ 1983ರಲ್ಲಿ ನಡೆದ ವಿಧಾನಸಭಾ ಚುನಾವಣೆ ತೀವ್ರ ಬಿರುಕುಂಟು ಮಾಡಿ ಕಾಂಗ್ರೆಸ್ ಕೋಟೆಯ ಪತನಕ್ಕೆ ಕಾರಣವಾಗಿತ್ತು. ಕರ್ನಾಟಕದಲ್ಲಿ ಜನತಾಪಕ್ಷದ ಸರಕಾರ, ಆಂಧ್ರಪ್ರದೇಶದಲ್ಲಿ ತೆಲುಗುದೇಶಂ ಸರಕಾರ ಅಧಿಕಾರಕ್ಕೆ ಬಂದಿತ್ತು. ಮುಂದೆ 1989ರಲ್ಲಿ ನಡೆದ ಚುನಾವಣೆಯಲ್ಲಿ ಈ ಎರಡೂ ರಾಜ್ಯಗಳಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು. ಇತರ ರಾಜ್ಯಗಳಂತೆಯೇ ಈ ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿದ್ದ ಆಂತರಿಕ ಗುಂಪು ಜಗಳ, ಅವುಗಳ ಬಹಿರಂಗ ಪ್ರದರ್ಶನ, ಆಡಳಿತೆಯ ಮೇಲೆ ಅದರ ಪರಿಣಾಮ, ಮುಖ್ಯಮಂತ್ರಿಗಳ ಬದಲಾವಣೆಗಳು, ಭ್ರಷ್ಟಾಚಾರ, ಆಡಳಿತೆಯಲ್ಲಿ ಶಿಥಿಲತೆ, ಮಿತಿಮೀರಿ ಅಭಿವೃದ್ಧಿಯೇತರ ಖರ್ಚಿನಿಂದಾಗಿ, ಅಭಿವೃದ್ಧಿ ಕೆಲಸಗಳ ಕುಂಠಿತಗೊಳ್ಳುವಿಕೆ, ಇವುಗಳ ಮಧ್ಯೆ ಬರೇ ಸುಳ್ಳು ಆಶ್ವಾಸನೆಗಳ ಸುರಿಮಳೆ, ಇವುಗಳಿಗೆಲ್ಲಾ ಕಿರೀಟಪ್ರಾಯವಾಗಿ ಕೇಂದ್ರದಲ್ಲಿ ನರಸಿಂಹರಾವ್ ಸರಕಾರ ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿಯ ಫಲವಾಗಿ ಅತ್ಯಾವಶ್ಯಕ ವಸ್ತುಗಳ ಬೆಲೆಗಳಲ್ಲಿ ಏರಿಕೆ, ಕಾರ್ಖಾನೆಗಳ ಮುಚ್ಚುವಿಕೆ, ನಿರುದ್ಯೋಗಿಗಳ ಸಂಖ್ಯೆಯಲ್ಲಿ ಹೆಚ್ಚಳ, ಮಹಿಳೆಯರ ಮೇಲೆ ಅತ್ಯಾಚಾರಗಳು, ದರೋಡೆಗಳ ಹಾವಳಿ ಮಾತ್ರವಲ್ಲ ಬಿಜೆಪಿಯ ಕೋಮು ರಾಜಕೀಯದ ವಿಸ್ತರಣೆ, ಅದರ ಮೂಲಕ ರಾಜ್ಯದ ಹಲವಾರು ಕಡೆಗಳಲ್ಲಿ ಕೋಮು ಗಲಭೆಗಳು ಇವುಗಳ ಕುರಿತು ಕಾಂಗ್ರೆಸ್ ಸರಕಾರದ ನಿರ್ಲಕ್ಷ್ಯ ಇವುಗಳಿಗೆಲ್ಲಾ ಬೇಸತ್ತ ಮತದಾರರು ಮೊನ್ನೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ಸನ್ನು ಸೋಲಿಸಲಿಕ್ಕೆ ಕಾರಣವಾಯಿತು.

ಹೀನಾಯವಾದ ಕಾಂಗ್ರೆ ಸೋಲು

ಅಷ್ಟೇ ಅಲ್ಲ ಅದಕ್ಕಿಂತಲೂ ಹೆಚ್ಚಿನ ರಾಜಕೀಯ ಚಳುವಳಿ ಸಿಪಿಐ(ಎಂ) ಪಕ್ಷದಿಂದಲೂ ಅದರ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳಿಂದಲೂ ನಡೆಯಿತು. ಅದೇನೆಂದರೆ ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಯ ವಿರುದ್ಧ, ಆ ನೀತಿಗಳಿಂದಾಗಿ ದೇಶದ ಸಾರ್ವಭೌಮತ್ವ, ಸ್ವಾತಂತ್ರ್ಯ ಹಾಗೂ ಬೆಳವಣಿಗೆಗಳ ಮೇಲೆ ಆಗಬಹುದಾದ ಅಪಾಯಗಳ ಕುರಿತು, ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿ ದೇಶದ ಒಕ್ಕಲುತನ ಮತ್ತು ಪೇಟೆಂಟ್ ಕಾಯಿದೆಗಳ ಮೇಲಿನ ಹಕ್ಕುಗಳ ಮೇಲೆ ಆಗಬಹುದಾದ ಕೆಟ್ಟ ಪರಿಣಾಮಗಳ ಕುರಿತು ಹಾಗೆಯೇ ಬಿಜೆಪಿಯ ಕೋಮುವಾದ ಮತ್ತು ರಾಜ್ಯ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ನಡೆದ ಹಲವಾರು ಪರಿಣಾಮಕಾರಿ ಚಳುವಳಿಗಳು, ಜಾಥಾ, ಧರಣೆ, ರಸ್ತಾ ರೋಕೋ ಮತ್ತು ಜೈಲ್ ಭರೋ ಕಾರ್ಯಕ್ರಮಗಳು ಮತ್ತು ಭಾರತ್ ಬಂದ್ ನಂತಹ ಚಟುವಟಿಕೆಗಳು ನಗರ ಮತ್ತು ಗ್ರಾಮಾಂತರ ಪ್ರದೇಶದ ಜನರ ಮಧ್ಯೆ ರಾಜಕೀಯ ಜಾಗೃತಿ ಸ್ವಲ್ಪ ಮಟ್ಟಿಗಾದರೂ ಮೂಡಿಸಲಿಕ್ಕೆ ಸಾಧ್ಯವಾದುದರಿಂದಾಗಿ ಕಾಂಗ್ರೆಸ್ಸಿನ ವಿರುದ್ಧ ಮತ ಚಲಾಯಿಸುವಂತೆ ಜನರಲ್ಲಿ ಪ್ರೇರಣೆ ಉಂಟು ಮಾಡಲು ಸಾಧ್ಯವಾಯಿತು. ಅಯೋಧ್ಯೆ ಘಟನೆಯ ನಂತರ ಬಿಜೆಪಿ ಮತ್ತಿನ್ನಿತರ ಕೋಮು ಶಕ್ತಿಗಳ ಧೋರಣೆ ಮತ್ತು ಚಟುವಟಿಕೆಗಳ ಕುರಿತು, ಬಾಬ್ರಿ ಮಸೀದಿ ಮತ್ತು ರಾಮ ಮಂದಿರ ನಿರ್ಮಾಣದ ಕುರಿತು ನರಸಿಂಹರಾವ್ ಅನುಸರಿಸುತ್ತಾ ಬರುತ್ತಿರುವ ಅನಿಶ್ಚಿತತೆಯಿಂದಾಗಿ ಭಯಭೀತರಾಗಿ ಅಲ್ಪಮತಸ್ಥರು ತಮ್ಮ ಮತವನ್ನು ಜನತಾದಳಕ್ಕೆ ಹಾಕಬೇಕೆಂಬ ನಿರ್ಧಾರದಿಂದಾಗಿಯೇ ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಸೋಲನ್ನನುಭವಿಸಲು ಸಾಧ್ಯವಾಯಿತು. ಈ ಸಲದ ಕಾಂಗ್ರೆಸ್ ಸೋಲು ಬರೇ ಸೋಲು ಮಾತ್ರವಲ್ಲ, ಕಾಂಗ್ರೆಸ್ ಹೀನಾಯವಾಗಿ ನೆಲಕಚ್ಚುವಂತೆ ಮಾಡಿದ ಸೋಲು. ವಿಧಾನಸಭೆಯಲ್ಲಿ ವಿರೋಧ ಪಕ್ಷದ ಸ್ಥಾನವನ್ನು ಕಳೆದುಕೊಳ್ಳುವಂತೆ ಮಾಡಿದ ಸೋಲು. ವಿಧಾನಸಭೆಯಲ್ಲಿ ಮೂರನೇ ಸ್ಥಾನಕ್ಕೆ ಅಟ್ಟಿಸಿದ ಸೋಲು.

ಮಹತ್ವವಾದ ತಿರುವು

ಈ ಎರಡೂ ರಾಜ್ಯಗಳಲ್ಲಿ ಚುನಾವಣೆಯ ಪ್ರಚಾರ ಭಾಷಣಗಳನ್ನು ಮಾಡುವಾಗ ಕಾಂಗ್ರೆಸ್ ಪಕ್ಷವನ್ನು ಆರಿಸಿ ತರದಿದ್ದರೆ ರಾಜ್ಯಕ್ಕೆ ಸಲ್ಲತಕ್ಕ ಧನ ಸಹಾಯ ನಿಲ್ಲಿಸಲಾಗುವುದೆಂಬ ಬೆದರಿಕೆ ಹಾಕಿದರೂ, ಈ ಚುನಾವಣೆಯ ಮತದಾನ ತನ್ನ ಮೇಲಿನ ವಿಶ್ವಾಸದ ಮತದಾನವೆಂದು ಹೇಳಿ ಮತದಾರರ ಮೇಲೆ ಒತ್ತಡ ತರಲು ಪ್ರಯತ್ನ ಮಾಡಿದರೂ, ಕೂಡಾ ಈ ಎರಡೂ ರಾಜ್ಯಗಳ ಮತದಾರು ಕಾಂಗ್ರೆಸ್ ಪಕ್ಷವನ್ನು ಅತ್ಯಂತ ಹೀನಾಯವಾಗಿ ಸೋಲಿಸಿ ನರಸಿಂಹರಾಯರಿಗೆ ಎಚ್ಚರಿಕೆಯ ಗಂಟೆಯನ್ನು ಬಾರಿಸಿ ತೋರಿಸಿರುವುದು ದೇಶದ ರಾಜಕೀಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮಹತ್ತರವಾದ ತಿರುವು ತರಲಿಕ್ಕೆ ಮಾರ್ಗ ಸೂಚಿ ಆಗುವುದರಲ್ಲಿ ಸಂಶಯವಿಲ್ಲ, ಅದು ಮಾರ್ಗ ಸೂಚಿ ಆಗಿಯೇ ಬಿಟ್ಟಿದೆ. ರಾಜ್ಯದ, ದೇಶದ ಕಾಂಗ್ರೆಸ್ ಪಕ್ಷದಲ್ಲಿ ಈ ಸೋಲಿನ ಕುರಿತು ಗಂಭೀರ ಚಿಂತನೆ ನಡೆದಿದೆ. ಕೇಂದ್ರ ಮಂತ್ರಿ ಅರ್ಜುನ್ ಸಿಂಗ್‌ರಂತಹವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಕಾಂಗ್ರೆಸ್ ಅಧ್ಯಕ್ಷ, ಪ್ರಧಾನಮಂತ್ರಿ ಪಿ.ವಿ.ನರಸಿಂಹರಾವ್ ಅವರಿಗೆ ನೇರ ಸವಾಲು ಒಡ್ಡಿದ್ದಾರೆ. ಈಗ ಬಿಹಾರ, ಒರಿಸ್ಸಾ, ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ನಡೆಯಲಿರುವ ವಿಧಾನಸಭೆಗಳ ಚುನಾವಣೆಯಲ್ಲಿ ಅರ್ಜುನ್‌ಸಿಂಗ್ ಅವರ ರಾಜೀನಾಮೆಯೂ ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಚುನಾವಣೆಗಳ ಫಲಿತಾಂಶಗಳೂ ಕಾಂಗ್ರೆಸ್ ಮೇಲೆ ತೀವ್ರ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ಕಾಂಗ್ರೆಸ್ಸಿನ ಸೋಲು ದೇಶದ ರಾಜಕೀಯದ ಮೇಲೆ ನಿರ್ಣಾಯಕ ಪ್ರಭಾವ ಬೀರುವುದರಲ್ಲಿ ಸಂಶಯವಿಲ್ಲ. ಕೇಂದ್ರದಲ್ಲಿಯ ಬದಲಾವಣೆ ಕರ್ನಾಟಕ ಆಂಧ್ರ ಸರಕಾರಗಳ ಮೇಲೂ ನಿಶ್ಚಿತ ಪ್ರಭಾವ ಬೀರುತ್ತದೆ.

ಕರ್ನಾಟಕದಲ್ಲಿನ ಹೊಸ ಪರಿಸ್ಥಿತಿ

ಕರ್ನಾಟಕದಲ್ಲಿ ದೇವೇಗೌಡರು ಮುಖ್ಯಮಂತ್ರಿ ಆಗಿರುವ ಜನತಾದಳದ ಸರಕಾರ ಅಧಿಕಾರಕ್ಕೆ ಬಂದಿದೆ. ಭ್ರಷ್ಟಾಚಾರ, ಚಲಿಸಲು ನಿರಾಕರಿಸುತ್ತಿರುವ ಆಡಳಿತೆ, ನಿಷ್ಕ್ರಿಯತೆ, ಸುಳ್ಳು ಆಶ್ವಾಸನೆಗಳು, ಬರಿದಾದ ಖಜಾನೆಗಳ ಬಳುವಳಿಯನ್ನೇ ಕಾಂಗ್ರೆಸ್ ಬಿಟ್ಟು ಹೋಗಿದೆ. ಜನತಾದಳದ ಮಂತ್ರಿಗಳಲ್ಲಿ ಕೆಲವರು ಮಾತ್ರ ಅನುಭವಿಗಳಿದ್ದು ಹೆಚ್ಚಿನವರು ಹೊಸಬರೇ. ರಾಜ್ಯದ ಜನತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. -ಕೆಲವು ಕೇಂದ್ರ ಸರಕಾರದ ನೀತಿಯಿಂದ ಉಂಟಾಗಿರುವುದು, ಕೆಲವು ರಾಜ್ಯ ಸರಕಾರಗಳಿಂದಾಗಿ ಪರಿಹಾರ ಕಾಣದೆ ಉಳಿದಿರುವುದು. ಬೆಲೆಯೇರಿಕೆ, ನಿರುದ್ಯೋಗ, ಭ್ರಷ್ಟಾಚಾರ, ವಿಳಂಬ ನೀತಿಗಳೆಲ್ಲ ಸರ್ವೇಸಾಮಾನ್ಯವಾಗಿದ್ದರೆ, ನಾವು ಮುಖ್ಯವಾಗಿ ಪರಿಹಾರ ಕಾಣಬೇಕಾಗಿರುವುದು ಕೈಗೂಡದೆ ನಿಂತಿರುವ ಕೃಷ್ಣಾ-ಕಾವೇರಿ ಯೋಜನೆಗಳ ಪೂರ್ಣಗೊಳ್ಳುವಿಕೆ, ಅರ್ಧಕ್ಕೆ ನಿಂತಿರುವ ಇತರ ನೀರಾವರಿ ಯೋಜನೆಗಳು, ವಿದ್ಯುತ್ ಉತ್ಪಾದನಾ ಕಾಮಗಾರಿಗಳು, ಕೈಗಾರಿಕೆಗಳ ಸ್ಥಾಪನೆ, ಪ್ರಾಥಮಿಕ ಶಾಲೆಗಳಿಗಾಗಿ ಕಟ್ಟಡ ಮೊದಲಾದ ತುರ್ತು ಸಮಸ್ಯೆಗಳಿಗೆ ಪರಿಹಾರ ಸಿಗಬೇಕಾಗಿದೆ. ಇವುಗಳಿಗೆ ಬೇಕಾದ ಸಂಪನ್ಮೂಲಗಳನ್ನು ಕ್ರೂಢೀಕರಿಸಬೇಕಾಗಿದೆ. ರೈತರಿಗೆ ಭೂಮಿ ಹಂಚಬೇಕಾಗಿದೆ. ಪಟ್ಟಾ ವಿತರಣೆ ಮಾಡಬೇಕಾಗಿದೆ. ಹೊಸತಾಗಿ ಅಧಿಕಾರಕ್ಕೆ ಬಂದ ದೇವೇಗೌಡ ಸರಕಾರ ಈ ಸಮಸ್ಯೆಗಳ ಕುರಿತು ಯಾವ ಕ್ರಮ ಕೈಗೊಳ್ಳುತ್ತದೆಂಬುದನ್ನು ನೋಡಬೇಕು. ಇವುಗಳತ್ತ ಸರಕಾರ ತುರ್ತು ಗಮನ ಹರಿಸಬೇಕೆಂದ ಒತ್ತಾಯಿಸಲು ಹೋರಾಟ ರೂಪಿಸಬೇಕು.

ವಿಧಾನಸಭೆ ಚುನಾವಣೆಯಲ್ಲಿ ಈ ಸಲ ಬಿಜೆಪಿ ತನ್ನ ಬಲವನ್ನು ಆರಿಂದ ಆಂಕ್ಕೆ ಹೆಚ್ಚಿಸಿದೆ. ಜನರ ಮಧ್ಯೆ ಹೋಗಲು ಬೇರೆ ಬೇರೆ ಸಂಘಟನೆಗಳಲ್ಲಿ ಕೈ ಹಾಕಲು, ಮಧ್ಯ ಪ್ರವೇಶಿಸುವ ಸಾಮರ್ಥ್ಯ ಪಡೆದಿದೆ. ಅದನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಹಾಗೆ ಜನರ ಮಧ್ಯೆ ಸರಕಾರದ ವಿರುದ್ಧ ತಲೆದೋರಿರುವ ಅಸಮಾಧಾನವನ್ನು ತನ್ನತ್ತ ಸೆಳೆದುಕೊಳ್ಳುವ ಹುನ್ನಾರ ನಡೆಸಬಹುದಾಗಿದೆ. ರಾಜ್ಯದಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಬಲಹೀನವಾಗಿರುವಾಗ ಜನರಲ್ಲಿರುವ ಅಸಂತುಷ್ಟತೆಯನ್ನು ತಮತ್ತ ಆಕರ್ಷಿಸಿಕೊಳ್ಳುವ ಬಿಜೆಪಿ ಕುತಂತ್ರವನ್ನು ವಿಫಲಗೊಳಿಸಬೇಕಾಗಿದೆ.

ಎಡ-ಪ್ರಜಾಪ್ರಭುತ್ವ ಶಕ್ತಿಗಳ ಹೊಣೆ

ಜನತಾದಳ ಅಧಿಕಾರಕ್ಕೆ ಬಂದಿದೆ ನಿಜ. ಆದರೆ ಅವರಲ್ಲಿರುವ ಗುಂಪುಗಾರಿಕೆ ಪೂರ್ಣ ಅಳಿಸಿಹೋಗಿಲ್ಲ. ಜನತಾದಳದ ಗುಂಪುಗಳನ್ನು ಒಂದುಗೂಡಿಸಿ ಅವರು ಜನಪರ ದೃಷ್ಟಿಕೋನ ಅನುಸರಿಸಿ ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಸೋಲಿಸುವ ಸಾಮರ್ಥ್ಯ ಪಡೆಯಬೇಕೆಂದು ಅವರ ಮುಖಂಡರಲ್ಲಿ ಮನವರಿಕೆ ಉಂಟು ಮಾಡುವಲ್ಲಿ ಸಿಪಿಐ(ಎಂ) ಪಕ್ಷದ ಕೇಂದ್ರ ಮುಖಂಡರು ಹಾಗೆಯೇ ರಾಜ್ಯ ಸಮಿತಿ ಬಹಳ ಪ್ರಯತ್ನ ಮಾಡಿತ್ತು. ಅದರ ಪರಿಣಾಮದಿಂದಾಗಿಯೇ ಸದ್ಯ ಕರ್ನಾಟಕದಲ್ಲಿ ಜನತಾದಳ ಸರಕಾರ ಅಧಿಕಾರಕ್ಕೆ ಬಂದಿದೆ. ಇತರ ಬಂಡವಾಳಶಾಹಿ ಪಕ್ಷಗಳಲ್ಲಿರುವ ಎಲ್ಲಾ ಕೆಟ್ಟ ಗುಣಗಳು ಜನತಾದಳದಲ್ಲಿದ್ದರೂ ಕೂಡ ಈ ಪಕ್ಷವನ್ನು ಸರಿದಾರಿಗೆ ತಂದು ಎಡ ಜಾತ್ಯಾತೀತ ಪ್ರಜಾಪ್ರಭುತ್ವ ರಂಗ ರಚನೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಯ ಸೋಲಿಗೆ ಈ ಪಕ್ಷವನ್ನು ಒಟ್ಟುಗೂಡಿಸಿ ಜನಪರ ನೀತಿಯನ್ನು ದೇವೇಗೌಡ ಸರಕಾರ ನಡೆಸಿಕೊಂಡು ಹೋಗುವಂತೆ ಮಾಡುವ ಜವಾಬ್ದಾರಿ ಸಿಪಿಐ(ಎಂ), ಸಿಪಿಐ ಮತ್ತಿತರ ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ಬಿದ್ದಿದೆ.

ಹೀಗೆ ಒಂದು ಕಡೆ ಕಾಂಗ್ರೆಸ್, ಬಿಜೆಪಿ ಪಕ್ಷಗಳನ್ನು ಇನ್ನಷ್ಟು ಬಲಹೀನಗೊಳಿಸುವ ಅದರ ಸಲುವಾಗಿ ಅವುಗಳ ವಿರುದ್ಧ ರಾಜಕೀಯ ಸೈದ್ಧಾಂತಿಕ ಹೋರಾಟ ನಡೆಸುವ ಕ್ರಮಗಳನ್ನು ನಿರ್ಧರಿಸಬೇಕಾಗಿದೆ. ಜನತಾದಳ ಸರಕಾರ ಜನರಪರವಾದ ಕಾರ್ಯಕ್ರಮಗಳನ್ನು ಅನುಸರಿಸುವಂತೆ ನೋಡಿಕೊಳ್ಳಬೇಕಾಗಿದೆ. ಜನಪರವಾದ ಸಮಸ್ಯೆಗಳಿಗಾಗಿ ಹೋರಾಡಬೇಕಾಗಿದೆ. ರಾಜ್ಯದಲ್ಲಿ ಸಿಪಿಐ(ಎಂ), ಎಡಪಕ್ಷಗಳು, ಹಾಗೆಯೇ ನಮ್ಮ ನೇತೃತ್ವದಲ್ಲಿರುವ ಕಾರ್ಮಿಕ, ರೈತ, ವಿದ್ಯಾರ್ಥಿ-ಯುವಜನತೆಯ, ಮಹಿಳೆಯರ ಸಂಘಟನೆಗಳನ್ನು ಬಲಿಷ್ಠಗೊಳಿಸಬೇಕಾಗಿದೆ. ಅವರ ಹೋರಾಟಗಳಿಗೆ ಸ್ಫೂರ್ತಿನೀಡಬೇಕಾಗಿದೆ. ಅವೆಲ್ಲಾ ಕೆಲಸಗಳನ್ನು ಸಿಪಿಐ(ಎಂ) ಪಕ್ಷ ಮಾಡಬೇಕು. ಇದೆಲ್ಲ ಆಗಬೇಕಾದರೆ ಸಿಪಿಐ(ಎಂ) ಇನ್ನೂ ಹೆಚ್ಚು ಬಲಿಷ್ಠವಾಗಬೇಕು.

ಫೆಬ್ರವರಿ 24ರಿಂದ 27ರವರೆಗೆ ಗುಲ್ಬರ್ಗದಲ್ಲಿ ಸೇರುವ ಸಿಪಿಐ(ಎಂ) 15ನೇಯ ಕರ್ನಾಟಕ ರಾಜ್ಯ ಸಮ್ಮೇಳನ ಈ ಎಲ್ಲ ಸಮಸ್ಯೆಗಳ ಕುರಿತು ಪಕ್ಷದ ಜವಾಬ್ದಾರಿ ಕುರಿತು ಕೂಲಂಕುಷವಾಗಿ, ವಿಮರ್ಶಾತ್ಮಕವಾಗಿ ಚರ್ಚೆ ನಡೆಸಬೇಕು.ತಮ್ಮ ಲೋಪದೋಷಗಳನ್ನು ಕಂಡುಹಿಡಿಯಬೇಕು. ಆದರ ಆಧಾರದಲ್ಲಿ ನಮ್ಮ ಪಕ್ಷಕ್ಕಿರುವ ಈಗಿನ ಜನಬೆಂಬಲವನ್ನು ಪಕ್ಷದತ್ತ ಇನ್ನೂ ಹೆಚ್ಚಾಗಿ ಆಕರ್ಷಿಸಲು, ಪಕ್ಷವನ್ನು ಇನ್ನೂ ಹೆಚ್ಚು ಬಲಗೊಳಿಸುವ ಯೋಜನೆಯ ರೂಪರೇಷೆಯನ್ನು ನಿರ್ಧರಿಸಬೇಕು.

ನಮ್ಮ ನೇತೃತ್ವದಲ್ಲಿ ಸ್ವತಂತ್ರವಾಗಿಯೇ ಕೇಂದ್ರ-ರಾಜ್ಯಗಳ ಜನವಿರೋಧಿ ನೀತಿಗಳ ವಿರುದ್ಧ ನಡೆಸಬೇಕಾದ ಹೋರಾಟಗಳ ಕುರಿತು ನಿರ್ಧರಿಸಬೇಕು

ನಮ್ಮ ಪಕ್ಷದ ಮುಖಂಡತ್ವದಲ್ಲಿರುವ ಸಾಮೂಹಿಕ ಸಂಘಟನೆಗಳನ್ನು ಇನ್ನೂ ಹೆಚ್ಚು ಬಲಗೊಳಿಸಿ, ಅವರ ಸಮಸ್ಯೆಗಳಿಗೆ ಪರಿಹಾರಪಡೆಯುವ ಸಲುವಾಗಿ ಹೋರಾಟಗಳನ್ನು ನಡೆಸಲು ನಿರ್ದೇಶನ ನೀಡಬೇಕು.

ಹೀಗೆ ಪಕ್ಷವನ್ನು ಬಲಿಷ್ಠವಾಗಿಕಟ್ಟುವ, ಸಾಮೂಹಿಕ ಸಂಘಟನೆಗಳನ್ನು ವಿಸ್ತೃತ ಗೊಳಿಸುವ, ಜನರ ಸಮಸ್ಯೆಗಳ ಸಲುವಾಗಿ ಹೋರಾಟಗಳನ್ನು ರೂಪಿಸುವ ನಿರ್ಣಯಗಳನ್ನು ಗುಲ್ಬರ್ಗಾದಲ್ಲಿ ನಡೆಯುವ ಸಮ್ಮೇಳನ ನಿರ್ಧರಿಸಬೇಕಾಗಿದೆ.

ಬದಲಾದ ಕರ್ನಾಟಕ ರಾಜ್ಯದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಪಕ್ಷದ ನಿಲುಮೆಯನ್ನೂ ನಿರ್ಧರಿಸುವ, ಅದಕ್ಕೆ ಅನುಗುಣವಾಗಿ ಹೋರಾಟಗಳನ್ನು ರೂಪಿಸುವ ಕುರಿತು ನಿರ್ಧರಿಸಬೇಕಾಗಿದೆ.

ಈ ಮಹತ್ವದ ಕಾಲಘಟ್ಟದಲ್ಲಿ 15ನೇಯ ರಾಜ್ಯ ಸಮ್ಮೇಳನ, ಪಕ್ಷದ ಕೇಂದ್ರದ ಸಹಾಯದಿಂದ ಸಮರ್ಪಕವಾಗಿ ನಿರ್ಣಯಗಳನ್ನು ಅಂಗೀಕರಿಸುತ್ತದೆಂದು ಆಶಿಸೋಣ. ಅದರ ಮೂಲಕ ಪಕ್ಷಕ್ಕೆ ಹೊಸ ಚಾಲನೆ, ಹೊಸ ಸ್ಫೂರ್ತಿ ನೀಡುತ್ತದೆಂದು ಅಪೇಕ್ಷಿಸೋಣ.

ಜಿಲ್ಲಾ ಸಮ್ಮೇಳನಗಳ ದಿನಾಂಕ ಬದಲಾವಣೆ

ರಾಜ್ಯ ಸಮ್ಮೇಳನದ ದಿನಾಂಕಗಳ ಬದಲಾವಣೆಯಿಂದಾಗಿ ಬೆಂಗಳೂರು ಜಿಲ್ಲಾ ಸಮ್ಮೇಳನ ಫೆ. 14-15 ನಡೆಯಲಿದೆ. ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನ ಹೊಸ ದಿನಾಂಕಗಳನ್ನು ನಿರ್ಧರಿಸಲಾಗುತ್ತಿದೆ.

ಸಿಪಿಐ(ಎಂ) ಶಾಖಾ ಸಮ್ಮೇಳನ

ಕುರುಗೋಡು: ಸಿಪಿಐ(ಎಂ)ನ ಕುರುಗೋಡು ಶಾಖಾ ಸಮ್ಮೇಳನ 26ಡಿಸೆಂಬರ್ 1994ರಂದು ಬಾದನಹಳ್ಳಿ ಗ್ರಾಮದಲ್ಲಿ ಎನ್. ದಿವಾಕರಪ್ಪ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ವಿ.ಎಸ್. ಶಿವಶಂಕರ್‌ರವರು ಸಮ್ಮೇಳನ ಉದ್ಘಾಟಿಸಿದರು. ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಯು.ಬಸವರಾಜುರವರು ಭಾಗವಹಿಸಿದ್ದು ಮಾಹಿತಿ ನೀಡಿದರು. ಶಾಖಾ ಕಾರ್ಯದರ್ಶಿ ಕೆ. ಗಾದಿಲಿಂಗಪ್ಪ ವರದಿಮಂಡಿಸಿದರು. ಒಟ್ಟು 15 ಜನ ಸದಸ್ಯರು ಹಾಜರಿದ್ದರು ಹಾಲಿ ಕಾ ರ್ಯದರ್ಶಿಗಳಾದ ಕೆ.ಗಾದಿಲಿಂಗಪ್ಪನವರನ್ನು ಮುಂದಿನ ಅವಧಿಯವರೆಗೆ ಕಾರ್ಯದರ್ಶಿಯನ್ನಾಗಿ ಮುಂದುವರೆಸಿಕೊಂಡು ಹೋಗಲು ಸಮಾವೇಶ ಆಯ್ಕೆಮಾಡಿತು.

22 ಜನವರಿ 95ರಂದು ಸಿಪಿಐ(ಎಂ)ನ ಬಳ್ಳಾರಿ ತಾಲೂಕು ಸಮ್ಮೇಳನವನ್ನು ಕುರುಗೋಡಿನಲ್ಲಿ ನಡೆಸಲುಸಮ್ಮೇಳನ ನಿರ್ಧರಿಸಿದೆ.

ಮೈಸೂರು ಶಾಖಾ ಸಮ್ಮೇಳನ

ಸಿಪಿಐ(ಎಂ) ಗೆಳೆಯರ ಶಾಖೆ ಮೈಸೂರು 4ನೇ ವಾರ್ಷಿಕ ಸಮ್ಮೇಳನವು ಜನವರಿ 8ರಂದು 11 ಗಂಟೆಗೆ ಕಾಂ. ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಈ ಸಮ್ಮೇಳನವನ್ನು ರಾಜ್ಯ ಕಾರ್ಯದರ್ಶಿ ಮುಖಂಡರಾದ ಕಾಂ.ಎಸ್.ಸೂರ್ಯನಾರಾಯಣರಾವ್ ಅವರು ಉದ್ಘಾಟಿಸಿದರು ಹಾಗೂ ರಾಷ್ಟ್ರೀಯ, ಅಂತರಾಷ್ಟ್ರೀಯ ವಿಚಾರಗಳನ್ನು ಪ.ಬಂಗಾಳದ ಕೈಗಾರಿಕಾ ನೀತಿ ಕರ್ನಾಟಕದ ವಿಧಾನಸಭೆ ಚುನಾವಣೆ ವಿಶೇಷಗಳನ್ನು ತಿಳಿಸಿ. ಇಲ್ಲಿಯ ಗೆಳೆಯರ ಶಾಖೆಯು ಪಾರ್ಟಿಯ ಕಾರ್ಯಕ್ರಮ ಹಾಗೂ ಸ್ಥಳೀಯವಿಚಾರ ಕುಂದು ಕೊರತೆಗಳನ್ನು ಜಿಲ್ಲೆಯಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸಮಾಡುತ್ತಾ ಪಾರ್ಟಿಯನ್ನು ಬೆಲಸಬೇಕೆಂದು ಕರೆನೀಡಿದರು. ವಾರ್ಷಿಕ ವರದಿಯ ಮೇಲೆ 12 ಜನ ಸದಸ್ಯರು ಮಾತನಾಡಿದರು ಹಾಗೂ ವರದಿಯನ್ನು ಕೆಲವು ತಿದ್ದುಪಡಿಯೊಂದಿಗೆ ಅಂಗೀಕರಿಸಲಾಯಿತು. 15 ಜನ ಸದಸ್ಯರು ತಮ್ಮ ಸದಸ್ಯತ್ವವನ್ನು ನವೀಕರಿಸಿದರು ಹಾಗೂ ರಾಜ್ಯ ಸಮಿತಿ ಸದಸ್ಯ, ಜಿಲ್ಲಾ ಕಾರ್ಯದರ್ಶಿಗಳಾದ ಕಾಂ. ಎಂ.ಎನ್. ಉಗ್ರಪ್ಪ, ಆರ್.ಸಿ. ಸದಸ್ಯರಾದ ಕಾಂ. ಎನ್.ಪಿ. ಪ್ರಭಾಕರ್ ಹೆಚ್.ಕೆ. ತಿರುಮಲಾಚಾರ್ ಮಾರ್ಗದರ್ಶನ ನೀಡಿದರು. ಮುಂದಿನ ಸಾಲಿಗೆ ಕಾಂ. ಗುರುಸ್ವಾಮಿ ಅವರನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.

ಸಿಪಿಐ(ಎಂ) ತಾಲೂಕು ಸಮ್ಮೇಳನ

ಹಗರಿ ಬೊಮ್ಮನಹಳ್ಳಿ: ಜನವರಿ 10 1995ರಂದು ಸಿಪಿಐ(ಎಂ)ನ 3ನೇ ಹಗರಿ ಬೊಮ್ಮನಹಳ್ಳಿ ತಾಲೂಕು ಸಮ್ಮೇಳನ ತಂಬ್ರಹಳ್ಳಿಯಲ್ಲಿ ಪಕ್ಷದ ಧ್ವಜಾರೋಹಣದೊಂದಿಗೆ ಪ್ರಾರಂಭವಾಯಿತು. ಸ್ಥಳೀಯ 'ಸಿಪಿಐ(ಎಂ) ನಾಯಕರಾದ ಕೊಟಗಿ ಮಲ್ಲಿಕಾರ್ಜುನರವರು ಧ್ವಜಾರೋಹಣ ಮಾಡಿದರು.ಸಮ್ಮೇಳನದ ಉದ್ಘಾಟನೆಯನ್ನು ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಎಂ. ವೀರಸಂಗಯ್ಯನವರು ನರವೇರಿಸಿದರು. ಮುಖ್ಯ ಅತಿಥಿಗಳಾಗಿ ಜನತಾದಳ ತಾಲೂಕಿನ ಪ್ರದಾನ ಕಾರ್ಯದರ್ಶಿಯಾದ ಅಂಗಡಿಗವಿಸಿದ್ದಪ್ಪ ಮತ್ತು ನಾಗನಗೌಡ ಶುಭಕೋರಿ ಮಾತನಾಡಿದರು.

ಈ ಸಮ್ಮೇಳನ ನಾಲ್ಕೂ ತಾಸಿಗಿಂತಲೂ ಹೆಚ್ಚುಕಾಲ ನಡೆದು ತಾಲೂಕಿನ ಪ್ರಮುಖ ಬೇಡಿಕೆಗಳನ್ನು ಚರ್ಚಿಸಿದರು. ಈ ಸಮ್ಮೇಳನದಲ್ಲಿ 10 ಸದಸ್ಯರನ್ನು ಆಯ್ಕೆ ಮಾಡಿದ್ದು ತಾಲೂಕಿನ ಸಿಪಿಐ(ಎಂ) ಕಾರ್ಯದರ್ಶಿಯಾಗಿ ಜೆ.ಎಂ. ವೀರಸಂಗಯ್ಯ ಆಯ್ಕೆಯಾಗಿದ್ದಾರೆ. ಜಿಲ್ಲಾ ಸಮಿತಿಯಿಂದ ಯು.ಬಸವರಾಜು, ಎಲ್.ಮಂಜುನಾಥ ಉಪಸ್ಥಿತರಿದ್ದರು. ಸಮ್ಮೇಳನದ ಅಧ್ಯಕತೆಯನ್ನು ವಿ.ರಂಗಪ್ಪ ವಹಿಸಿದ್ದರು. ಗ್ರಾಮ ಪಂಚಾಯ್ತಿ ಸದಸ್ಯೆ ಗೋಣಿಹೆಬ್ಬಮ್ಮ ಮಾತನಾಡಿದರು.

ಸಿಪಿಐ(ಎಂ)ನ ಜಿಲ್ಲಾ ಸಮ್ಮೇಳನ ಫೆಬ್ರವರಿ, 8,9,10ರಂದು ಹಗರಿ ಬೊಮ್ಮನಹಳ್ಳಿಯಲ್ಲಿ ನಡೆಯಲಿದ್ದು, ಹಗರಿಬೊಮ್ಮನ ಹಳ್ಳಿಯ ನಾಗರಿಕ ಬಂಧುಗಳು, ಸಮ್ಮೇಳನವನ್ನು ಯಶಸ್ವಿ ಮಾಡಿಕೊಡಬೇಕೆಂದು ತಾಲೂಕು ಸಮ್ಮೇಳನ ಮನವಿ ಮಾಡಿದೆ.

ಉಪವಾಸ ಸತ್ಯಾಗ್ರಹ ಮುಂದೂಡಿಕೆ

ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕಿಯರ ಸಮಸ್ಯೆಗಳು ಪರಿಹಾರ ಕಾಣುವುದಾಗಿ ರಾಜ್ಯಸರಕಾರ ಆಶ್ವಾಸನೆ ಕೊಟ್ಟುದರಿಂದ ಆದಾರದಲ್ಲಿ ಇಂದು ವಿದಾನಸೌಧ ಎದುರಿಗೆ ಆರಂಭವಾಗಲಿದ್ದ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಮುಂದೂಡಲಾಗಿದೆ.ಜನವರಿ 18,95 ರಂದು ಕಬ್ಬನ್‌ಪಾರ್ಕ್‌ನಲ್ಲಿ ನಡೆಸಲು ತೀರ್ಮಾನಿಸಿದ್ದ ರಾಜ್ಯ ಮಟ್ಟದ ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕಿಯರ ರ್‍ಯಾಲಿಯನ್ನು ರದ್ದುಪಡಿಸಲಾಗಿದೆ. ಅದೇ ದಿನ ಬೆಂಗಳೂರು ನಗರಕ್ಕೆ ಆಗಮಿಸುವ ಕಾರ್ಯಕರ್ತರ ಸಮಾವೇಶ ಬೆಂಗಳೂರು ರೈಲ್ವೆ ನಿಲ್ದಾಣದ ಹತ್ತಿರವಿರುವ ದೇವಿ ಥಿಯೇಟರ್ ಬಳಿ ಸಾಲವಮ್ಮ ಛತ್ರದಲ್ಲಿ ಏರ್ಪಡಿಸಲಾಗಿದೆ.

ಗೃಹ ಮಂತ್ರಿ ಶ್ರೀ ಪಿ.ಜಿ.ಆರ್.ಸಿಂಧ್ಯಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಂತ್ರಿ ಬಿ.ಟಿ.ಲಲಿತನಾಯ್ಕರವರು ಸಿಐಟಿಯು ನಿಯೋಗದ ಜೊತೆಯಲ್ಲಿ ಚರ್ಚೆ ನಡೆಸಿ ಶೇಕಡಾ 25ರಷ್ಟು ಕಾರ್ಯಕರ್ತರಿಗೆ ಸರ್ಕಾರಿ ಉದ್ಯೋಗವನ್ನು ನೀಡಲಿದೆ. ಉಳಿದವರ ವೇತನ ಹೆಚ್ಚಿಸುವ ವಿಷಯದಲ್ಲಿ ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಒಂದು ವಾರದೊಳಗೆ ಸಭೆ ಕರೆದು ಅದರಲ್ಲಿ ಚರ್ಚೆ ನಡೆಸಿ ಪರಿಹಾರ ಕಾಣುವುದಾಗಿ ಆಸ್ವಾಸನೆ ನೀಡಿದ್ದಾರೆ.

ಹೊಸದಾಗಿ ಆರಿಸಬಂದ ರಾಜ್ಯ ಸರ್ಕಾರಕ್ಕೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಒಂದು ವಾರದ ಅವಧಿ ಸರಿಯೆಂದೂ ಇಂದು ಹಾಜರಾಗಿದ್ದ ನಾಯಕರು ಮತ್ತು ನೌಕರರು ತೀರ್ಮಾನಿಸಿ ಮುಂದಿನ ಕರೆ ನೀಡುವವರೆಗೆ ಉಪವಾಸ ಸತ್ಯಾಗ್ರಹ ಮತ್ತು ರ್‍ಯಾಲಿ ಕೈಗೊಳ್ಳುವುದಿಲ್ಲವೆಂದು ಈ ಮೂಲಕ ಅಂಗನವಾಡಿ ನೌಕರರಿಗೆ ವಿನಂತಿಸಲಾಗಿದೆ.

ವಿಶ್ಲೇಷಣೆ

ಸಿಪಿಐ(ಎಂ) ಮತ್ತು ಎಡರಂಗ ಸರಕಾರದ ವಿರುದ್ಧ ಅಪಪ್ರಚಾರ, ಗೊಂದಲಗಳ ಹಿನ್ನೆಲೆಯಲ್ಲಿ ಕೇಂದ್ರ ಸಮಿತಿಯ ವಿಶ್ಲೇಷಣೆಯ ಉಳಿದ ಭಾಗ

ಭಾರತದಲ್ಲಿ ದುಡಿಯುವ ಜನರ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ಜನತಾ ಪ್ರಜಾಪ್ರಭುತ್ವವನ್ನು ತರುವಲ್ಲಿ ಎಡರಂಗ ಸರಕಾರಗಳ ಪಾತ್ರವೇನು, ಅವುಗಳ ನೀತಿಯೇನು, ಎಂತಹ ಪ್ರತಿಕೂಲ ಸನ್ನಿವೇಶದಲ್ಲಿ ಅವು ಎಡ-ಪ್ರಜಾಪ್ರಭುತ್ವ ಪರ್ಯಾಯವನ್ನು ಕಟ್ಟಿ ಬೆಳಿಸುವಲ್ಲಿ ತಮ್ಮ ಕಾಣಿಕೆ ನೀಡಿವೆ ಎಂಬುದನ್ನು ಹಿಂದಿನ ಸಂಚಿಕೆಯಲ್ಲಿ ಓದಿರುವಿರಿ.

ಪ್ರಸ್ತುತ ಬದಲಾದ ಸನ್ನಿವೇಶದಲ್ಲಿ ದುಡಿಯುವ ಜನರ ಪರವಾದ ಎಡ-ಪ್ರಜಾಪ್ರಭುತ್ವ ಆಂದೋಲನದ ಅಂತಿಮ ಗುರಿಸಾಧನೆಗೆ ನೆರವಾಗಲು ಎಡರಂಗ ಸರಕಾರ ಈಗ ಯಾವ ಕಾರ್ಯತಂತ್ರವನ್ನು ಅನುಸರಿಸಬೇಕು ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.



ಹೊಸ ಆರ್ಥಿಕ ನೀತಿಗಳ ಸಂದರ್ಭದಲ್ಲಿ ಪ.ಬಂಗಾಳ ಎಡರಂಗ ಸರಕಾರದ ಪಾತ್ರ

(ಹಿಂದಿನ ಸಂಚಿಕೆಯಿಂದ)

ಒಂದು ದಶಕದ ಹಿಂದೆ ಇನ್ನೂ ಕೇಂದ್ರ ಸರಕಾರದ ನೀತಿಗಳು ಪ್ರಭುತ್ವವನ್ನು ಬಳಸಿ ಸಾರ್ವಜನಿಕ ವಲಯವನ್ನು ಬೆಳೆಸುವ ಮತ್ತು ಸೋವಿಯತ್ ಒಕ್ಕೂಟದಿಂದ ನೆರವು ಪಡೆದು ದೊಡ್ಡ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ ಮಾರ್ಗವನ್ನು ಬೆಳೆಸುವ, ಅದೇ ವೇಳೆಗೆ ವಿದೇಶೀ ಬಂಡವಾಳದೊಂದಿಗೆ ಕೈ ಜೋಡಿಸುವ ಬಂಡವಾಳಶಾಹೀ ಅಭಿವೃದ್ಧಿ ಮಾರ್ಗದ ಚೌಕಟ್ಟಿನಲ್ಲೇ ಇದ್ದವು. ಈ ಚೌಕಟ್ಟು ಈಗ ಪ್ರಮುಖ ಬದಲಾವಣೆ ಕಂಡಿದೆ. 1991ರಿಂದ ನರಸಿಂಹರಾಯರ ಸರಕಾರ ಅನುಸರಿಸಿರುವ ಆರ್ಥಿಕ ನೀತಿಗಳಿಗೆ ನೀಡಿರುವ ಒತ್ತಿನ ಸ್ವರೂಪದಲ್ಲಿ ಬದಲಾವಣೆಯಾಗಿದೆ. ಹಳೆಯ ನೆಹರೂ ಮಾದರಿಯ ಬಂಡವಾಳಶಾಹಿ ಅಭಿವೃದ್ಧಿ ದಾರಿಯನ್ನು ಬಿಟ್ಟು ಬಿಡಲಾಯಿತು. ನಿಜ 1980ರ ದಶಕದ ಮಧ್ಯಭಾಗದಲ್ಲಿ ಈ ಪಲ್ಲಟ ಆರಂಭವಾಯಿತು. ಆದರೆ ಐ.ಎಂ.ಎಫ್.-ವಿಶ್ವಬ್ಯಾಂಕ್ ಆದೇಶಿತ ದಾರಿಯನ್ನು ಅಂಗೀಕರಿಸಿದ್ದು 1991 ರಿಂದಲೇ. ಸಮಾಜವಾದಕ್ಕಾದ ಹಿನ್ನಡೆ ಹಾಗೂ ಸೋವಿಯತ್ ಒಕ್ಕೂಟದ ವಿಘಟನೆಯಿಂದ ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ದೊಡ್ಡ ಪರಿವರ್ತನೆ ಬಂತು. ಅದರಿಂದ ಸಾಮ್ರಾಜ್ಯಶಾಹಿ ಆಕ್ರಮಣ ನಡೆಸಲು ಹಾಗೂ ಅಂತರ್ರಾಷ್ಟ್ರೀಯ ಬಂಡವಾಳ ಮೂರನೇ ಜಗತ್ತಿನ ದೇಶಗಳಲ್ಲಿ ಮತ್ತಷ್ಟು ಆಳವಾಗಿ ತೂರಿ ಅವುಗಳನ್ನು ಶೋಷಿಸಲು ಇನ್ನಷ್ಟು ಭರದಿಂದ ನಿರಂತರ ಪ್ರಯತ್ನ ನಡೆಸಲು ಅವಕಾಶವಾಯಿತು. ಐ.ಎಂ.ಎಫ್-ವಿಶ್ವಬ್ಯಾಂಕ್ ಹೊರಿಸಿದ ದಾರಿ ಸಾಮ್ರಾಜ್ಯಶಾಹಿಯ ಈ ಜಾಗತಿಕ ಧಾಳಿಯ ಒಂದು ಪ್ರತೀಕವಷ್ಟೇ. ಹಣಕಾಸು ಬಂಡವಾಳದ ಜಾಗತೀಕರಣ ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ತ್ವರಿತ ಪ್ರಸಾರ ಈ ಧಾಳಿಯ ಪ್ರಮುಖ ಲಕ್ಷಣಗಳು.

ಭಾರತ ಈ ಬದಲಾವಣೆಗಳ ಸಂಪೂರ್ಣ ಹೊಣೆಯನ್ನು ಹೊರಬೇಕಾಗಿದೆ. ಏಕೆಂದರೆ ಇದು ಮೂರನೇ ಜಗತ್ತಿನಲ್ಲಿ ಉಳಿದ ದೇಶಗಳಿಗೆ ಹೋಲಿಸಿದರೆ ಸಾಕಷ್ಟು ಅಭಿವೃದ್ಧಿ ಹೊಂದಿದ ಆರ್ಥಿಕವುಳ್ಳ ಮತ್ತು ಸ್ವತಃ ಒಂದು ದೊಡ್ಡ ಮಾರುಕಟ್ಟೆಯುಳ್ಳ ದೇಶ. ಭಾರತದ ಆರ್ಥಿಕವನ್ನು ವಿಶ್ವ ಬಂಡವಾಳಶಾಹೀ ವ್ಯವಸ್ಥೆಯೊಂದಿಗೆ ಸಂಪೂರ್ಣವಾಗಿ ಸಮಗ್ರೀಕರಿಸುವ ನಿರಂತರ ಒತ್ತಡ ಬರುತ್ತಿದೆ. ಸಾಮ್ರಾಜ್ಯಶಾಹಿ ಹಾಕಿದ ಶರತ್ತುಗಳ ಮೇಲೆ ಇಂತಹ ಸಮಗ್ರೀಕರಣ ಮತ್ತು ದೊಡ್ಡ ಬಂಡವಾಳಶಾಹಿ ವರ್ಗದ ಆಂತರಿಕ ಒತ್ತಾಯಗಳಿಂದಾಗಿ ಹೊಸ ಉದಾರೀಕರಣದ ನೀತಿಗಳು ಬಂದವು. ಈ ನೀತಿಗಳ ಪ್ರಮುಖ ಲಕ್ಷಣಗಳೆಂದರೆ: (1) ಆರ್ಥಿಕದ ಮೇಲಿನ ಹತೋಟಿ ರದ್ದತಿ ಹಾಗೂ ಉದ್ದಿಮೆಗಳಿಗೆ ಕೇಂದ್ರದ ಲೈಸೆನ್ಸ್ ಅಥವಾ ಕೇಂದ್ರದ ಪರವಾನಗಿ ಬೇಕಾಗಿಲ್ಲ (2) ಸಾರ್ವಜನಿಕ ವಲಯವನ್ನು ಕುಂಠಿತಗೊಳಿಸುವುದು-ಕೆಲವು ವಲಯಗಳಲ್ಲಿ ಅದನ್ನು ಸಂಪೂರ್ಣ ಕಳಚಿ ಹಾಕುವುದು ಮತ್ತು ಖಾಸಗೀಕರಣ (3) ಭಾರತದ ಆರ್ಥಿಕವನ್ನು ವಿದೇಶೀ ಬಂಡವಾಳಕ್ಕೆ ತೆರೆಯುವುದು-ಅವುಗಳಿಗೆ ವಿಶೇಷ ಸೌಲಭ್ಯ ಒದಗಿಸುವುದು (4) ಹಣಕಾಸು ವಲಯವನ್ನು ವಿದೇಶೀ ಬಂಡವಾಳಕ್ಕೆ ತೆರೆಯುವುದು (5) ಉದ್ದಿಮೆ ಮತ್ತು ಆರ್ಥಿಕದ ಬೆಳವಣಿಗೆಯಲ್ಲಿ, ಅವಕ್ಕೆ ಬೇಕಾಗುವ ಮೂಲಭೂತ ಪರಿಕರಗಳ ಬೆಳವಣಿಗೆಯಲ್ಲೂ, ಸಾಮಾಜಿಕ ಖರ್ಚಿನಲ್ಲೂ ಸರಕಾರದ ಮಧ್ಯಪ್ರವೇಶವನ್ನು ಕಮ್ಮಿ ಮಾಡುವುದು.

> **ಈ ಆರ್ಥಿಕ ನೀತಿಗಳು ಕಾಂಗ್ರೆಸ್(ಐ)ನ ಆರ್ಥಿಕ ನೀತಿಗಳಷ್ಟೇ ಅಲ್ಲ, ಭಾರತೀಯ ಆಳುವ ವರ್ಗಗಳಲ್ಲಿ ಅವಕ್ಕೆ ವ್ಯಾಪಕ ಬೆಂಬಲ ಕೂಡಾ ಇದೆ. ಬಿಜೆಪಿ ಉದಾರೀಕರಣಕ್ಕೆ ನೀಡಿದ ಬೆಂಬಲ, ಜನತಾದಳ ಮತ್ತು ಇತರ ಮಧ್ಯಪಂಥೀಯ ಪಕ್ಷಗಳ ಚಂಚಲತೆ ಮತ್ತು ಒಂದು ಸಮಂಜಸವಾದ ಪರ್ಯಾಯ ಮುಂದಿಡುವಲ್ಲಿ ಅವುಗಳ ಅಸಮರ್ಥತೆ ಇದಕ್ಕೆ ಸಾಕ್ಷಿ.**

ಈ ಹೊಸ ನೀತಿಗಳೊಂದಿಗೆ ಶಕ್ತಿಗಳ ಬಲಾಬಲ ರಾಜ್ಯ ಸರಕಾರಗಳಿಗೆ ಇನ್ನಷ್ಟು ಪ್ರತಿಕೂಲವಾದವು. ಸಾರ್ವಜನಿಕ ವಲಯಕ್ಕೆ, ಮೂಲಭೂತ ಪರಿಕರಗಳ ಅಭಿವೃದ್ಧಿಯಲ್ಲಿ ಮತ್ತು ಸಾಮಾಜಿಕ ಕಲ್ಯಾಣಕ್ಕೆ ಕೇಂದ್ರದ ನಿಧಿ ನೀಡಿಕೆಯಲ್ಲಿ ಇನ್ನಷ್ಟು ಕಡಿತವನ್ನು ರಾಜ್ಯ ಸರಕಾರಗಳು ಎದುರಿಸಬೇಕಾಗಿದೆ. ರಾಜ್ಯದ ಸಾರ್ವಜನಿಕ ಉದ್ದಿಮೆಗಳನ್ನು ಕಳಚಿಹಾಕುವ, ಖಾಸಗೀಕರಣ ಮಾಡುವ ಮತ್ತು ರಿಯಾಯ್ತಿ ಶರತ್ತುಗಳಲ್ಲಿ ವಿದೇಶೀ ಬಂಡವಾಳ ಮತ್ತು ದೊಡ್ಡ ಬಂಡವಾಳಶಾಹಿಗಳಿಗೆ ಪ್ರವೇಶ ನೀಡುವ ದಾರಿ ಹಿಡಿಯಬೇಕೆಂದು ರಾಜ್ಯ ಸರಕಾರಗಳ ಮೇಲೆ ಒತ್ತಾಯ ಹೇರಲಾಗುತ್ತಿದೆ. ಉದ್ದಿಮೆಗಳಿಗೆ ಬೇಕಾಗುವ ಮೂಲಭೂತ ಪರಿಕರಗಳ ವಲಯವನ್ನು ಖಾಸಗಿಯವರಿಗೆ ತೆರೆಯಬೇಕೆಂದು ಕೇಂದ್ರ ಸರಕಾರ ಭಾರೀ ಒತ್ತಡ ಹೇರುತ್ತಿದೆ. ಈ ಎಲ್ಲಾ ನೀತಿಗಳನ್ನು ಕಳೆದ ಮೂರು ವರ್ಷಗಳಲ್ಲಿ ವಿವಿಧ ವೇಗಗಳಲ್ಲಿ ಜ್ಯಾರಿಗೆ ತರಲಾಗುತ್ತಿದೆ.

ಪರ್ಯಾಯ ನೀತಿಗಳಿಗಾಗಿ ಹೋರಾಟ ಮತ್ತು ಎಡರಂಗ

ಜೂನ್ 1991ರಲ್ಲಿ ನರಸಿಂಹರಾವ್ ಸರಕಾರ ಅಧಿಕಾರಕ್ಕೆ ಬಂದಾಗ ಪರ್ಯಾಯ ಆರ್ಥಿಕ ನೀತಿಗಳನ್ನು ಮುಂದಿಟ್ಟ ಮೊದಲ ರಾಜ್ಯ ಸರಕಾರವೆಂದರೆ ಪಶ್ಚಿಮ ಬಂಗಾಳ ಸರಕಾರ. ಜುಲೈ 1991ರಲ್ಲೇ ತನ್ನ ಪರ್ಯಾಯ ಆರ್ಥಿಕ ನೀತಿಯ ದಸ್ತಾವೇಜನ್ನು ರಾಜ್ಯ ಸರಕಾರ ಕೇಂದ್ರದ ಮುಂದೆ ಮಂಡಿಸಿತ್ತು. ಇದು ನಮ್ಮ ಪಕ್ಷ ಅಖಿಲ ಭಾರತ ಮಟ್ಟದಲ್ಲಿ ಎಡಪಂಥೀಯ ಆರ್ಥಿಕ ತಜ್ಞರನ್ನು ಒಟ್ಟು ಸೇರಿಸಿ ಐ.ಎಂ.ಎಫ್-ವಿಶ್ವಬ್ಯಾಂಕ್ ಹೇರಿದ ದಾರಿಗೆ ಪರ್ಯಾಯವಾದ ಒಂದು ನೀತಿಯ ಹೇಳಿಕೆಯನ್ನು ಮಂಡಿಸುವ ಪ್ರಯತ್ನದ ಜೊತೆಗೇ ನಡೆದ ಪ್ರಯತ್ನ. ಈ ಪರ್ಯಾಯ ದೃಷ್ಟಿಕೋಣವನ್ನೇ ಇನ್ನಷ್ಟು ಸಮಯಬದ್ಧಗೊಳಿಸಿ ನಮ್ಮೆದುರು ತೆರೆದುಕೊಳ್ಳುತ್ತಿರುವ ಉದಾರೀಕರಣದ ನೀತಿಗಳ ವಿರುದ್ಧ ಹೋರಾಡುವ ವೇದಿಕೆಯಾಗಿ ಬಳಸಿಕೊಳ್ಳಲಾಗುತ್ತಿದೆ. ಸಾರ್ವಜನಿಕ ವಲಯದ ಮೇಲಿನ ಧಾಳಿಗಳು, ಕಾರ್ಮಿಕ ವರ್ಗದ ಮೇಲಿನ ಹಲ್ಲೆಗಳು, ಹಣಕಾಸು ವಲಯವನ್ನು ತೆರೆಯುವುದು, ಗ್ಯಾಟ್ ಸಂಧಿ, ಸ್ವದೇಶೀ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿಯನ್ನು ಕುಂಠಿತಗೊಳಿಸಲು ಸಾಮ್ರಾಜ್ಯಶಾಹಿಗಳ ಒತ್ತಡ, ಭಾರತದ ಕೃಷಿ ರಂಗದೊಳಗೆ ನುಗ್ಗಲು ಬಹುರಾಷ್ಟ್ರೀಯ ಕಂಪೆನಿಗಳ ಪ್ರಯತ್ನ, ಬಳಕೆ ಸರಕುಗಳ ವಲಯವನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ತೆರೆಯುವುದು ಇವೆಲ್ಲಾ ವಿವಿಧ ವಲಯಗಳಲ್ಲಿ ಕಾರ್ಮಿಕ ವರ್ಗ ಮತ್ತು ಅದರ ಸಂಘಟನೆಗಳ ಹೋರಾಟದಲ್ಲಿನ ಜೀವಂತ ಪ್ರಶ್ನೆಗಳಾಗಿ ಬಿಟ್ಟಿವೆ.

ಈ ಆರ್ಥಿಕ ನೀತಿಗಳು ಕಾಂಗ್ರೆಸ್(ಐ)ನ ಆರ್ಥಿಕ ನೀತಿಗಳಷ್ಟೇ ಅಲ್ಲ, ಭಾರತೀಯ ಆಳುವ ವರ್ಗಗಳಲ್ಲಿ ಅವಕ್ಕೆ ವ್ಯಾಪಕ ಬೆಂಬಲ ಕೂಡಾ ಇದೆ. ಬಿಜೆಪಿ ಉದಾರೀಕರಣಕ್ಕೆ ನೀಡಿದ ಬೆಂಬಲ, ಜನತಾದಳ ಮತ್ತು ಇತರ ಮಧ್ಯಪಂಥೀಯ ಪಕ್ಷಗಳ ಚಂಚಲತೆ ಮತ್ತು ಒಂದು ಸಮಂಜಸವಾದ ಪರ್ಯಾಯ ಮುಂದಿಡುವಲ್ಲಿ ಅವುಗಳ ಅಸಮರ್ಥತೆ ಇದಕ್ಕೆ ಸಾಕ್ಷಿ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಇತರ ಎಡಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳು ಆರ್ಥಿಕ ಸಾರ್ವಭೌಮತೆ ರಕ್ಷಿಸುವ ಮತ್ತು ಹೊಸ ಆರ್ಥಿಕ ನೀತಿಗಳ ಧಾಳಿಯನ್ನು ಹಿಮ್ಮೆಟ್ಟಿಸುವ ನಿರಂತರ ಹೋರಾಟದಲ್ಲಿ ತೊಡಗಿವೆ. ಕಾರ್ಮಿಕ ವರ್ಗ ಈ ಹೋರಾಟದ ಮುಂಚೂಣಿಯಲ್ಲಿದೆ. ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಮೂಲಕ ಸಾಧಿಸಿದ ವ್ಯಾಪಕ ಐಕ್ಯತೆಯಿಂದಾಗಿ 1991ರಿಂದ 1994ರ ನಡುವೆ ನಾಲ್ಕು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳು, ಬಂದ್‌ಗಳು ನಡೆದಿವೆ. ಇವುಗಳಲ್ಲಿ ಮಿಲಿಯಾಂತರ ಕಾರ್ಮಿಕರು, ರೈತರು,ಕೃಷಿ ಕೂಲಿಕಾರರು ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು ಹಾಗೂ ನೌಕರರು ಭಾಗವಹಿಸಿದ್ದಾರೆ. ಈ ಹೋರಾಟಗಳಲ್ಲಿ ಸಿಪಿಐ(ಎಂ) ಮತ್ತು ಪ.ಬಂಗಾಳ ಎಡರಂಗ ಅತಿ ಬಲಿಷ್ಠ ಮತ್ತು ಸುಸಂಘಟಿತ ತುಕಡಿಯಾಗಿವೆ. ಪ.ಬಂಗಾಳದ ಎಡ ಕೊತ್ತಳ ಮತ್ತು ಕೇರಳ, ತ್ರಿಪುರಾ ಮತ್ತು ಇತರ ಸ್ಥಳಗಳಲ್ಲಿನ ಪಕ್ಷಗಳ ಬಲಿಷ್ಠ ತುಕಡಿಗಳು ನೀಡಿದ ಶಕ್ತಿಯಿಂದಾಗಿಯೇ ಸಿಪಿಐ(ಎಂ)ಗೆ ಹೊಸ ಆರ್ಥಿಕ ನೀತಿಗಳಿಗೆ ಪ್ರತಿರೋಧವನ್ನು ವ್ಯಾಪಕಗೊಳಿಸುವಲ್ಲಿ ಒಂದು ನೇತೃತ್ವದ ಪಾತ್ರ ವಹಿಸಲು ಸಾಧ್ಯವಾಗಿದೆ.

ಈ ಅಂಶದ ಮಹತ್ವವನ್ನು ಕಡೆಗಣಿಸಲಾಗದು. ಪಶ್ಚಿಮ ಬಂಗಾಲದ ಕಾರ್ಮಿಕ ವರ್ಗ ಮತ್ತು ಶ್ರಮಜೀವಿ ವಿಭಾಗಗಳ(ಪಶ್ಚಿಮ ಬಂಗಾಳದಲ್ಲಿ ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಸದಸ್ಯತ್ವವೇ ಎರಡು ಕೋಟಿ ದಾಟುತ್ತದೆ) ಬಲವೇ ಆರ್ಥಿಕ ನೀತಿಗಳ ವಿರುದ್ಧ ಹೋರಾಟದಲ್ಲಿ ನೆರವಾಗಿರುವ ಪ್ರಮುಖ ಶಕ್ತಿ. 1977ರಿಂದ ಸತತವಾಗಿ ಎಡರಂಗ ಸರಕಾರದ ಅಸ್ತಿತ್ವ ಈ ಸಂಘಟಿತ ಶಕ್ತಿಯನ್ನು ಎಡ ಆಂದೋಲನದ ಮುಂಚೂಣಿಯನ್ನು ಕಟ್ಟಿ ಬೆಳೆಸುವಲ್ಲಿ ಕಾಣಿಕೆ ನೀಡಿದೆ.

ತನ್ನ ಅಧಿಕಾರದ ವಲಯದಲ್ಲಿ ಎಡರಂಗ ಸರಕಾರದ ದೊಡ್ಡ ಸಾಧನೆ

ಆದರೆ ಎಡರಂಗ ಸರಕಾರವೊಂದೇ ಈ ಎಲ್ಲಾ ಅಖಿಲಭಾರತ ಉದಾರೀಕರಣ, ಖಾಸಗೀಕರಣವನ್ನು ಎದುರಿಸಿ ಪರ್ಯಾಯ ನೀತಿಗಳನ್ನು ಅನುಷ್ಠಾನಕ್ಕೆ ತರಬಲ್ಲದು ಎಂದು ನಿರೀಕ್ಷಿಸುವುದು ನಮ್ಮದೇ ಪಕ್ಷದ ಕಾರ್ಯಕ್ರಮ ಮತ್ತು ಮೂಲಭೂತ ತಿಳುವಳಿಕೆಗೆ ಅಪಚಾರವೆಸಗಿದಂತಾಗುತ್ತದೆ. ಎಡರಂಗ ಸರಕಾರ ಪರ್ಯಾಯ ನೀತಿಯ ಅನುಷ್ಠಾನದಲ್ಲಿ ಒಂದು ಸೀಮಿತ ಪಾತ್ರ ವಹಿಸಬಹುದಷ್ಟೇ; ಕೇಂದ್ರದ ನೀತಿಗಳ ವಿರುದ್ಧ ಜನಗಳನ್ನು ಅಣಿನೆರೆಸುವಲ್ಲಿ ಮಾತ್ರ ಅದು ಒಂದು ದೊಡ್ಡ ಪಾತ್ರ ವಹಿಸಬಹುದು. ತನಗೆ ಹೆಚ್ಚಿನ ಅಧಿಕಾರವಿರುವ ಕ್ಷೇತ್ರಗಳಲ್ಲಿ ನಿರ್ಣಾಯಕ ಮುನ್ನಡೆ ಸಾಧಿಸಲು ಎಡರಂಗ ಸರಕಾರಕ್ಕೆ ಸಾಧ್ಯವಾಗಿದೆ-ಉದಾ: ಭೂ ಸುಧಾರಣೆಯ ಅನುಷ್ಠಾನ, ಕೃಷಿ ಉತ್ಪಾದನೆಗೆ ಉತ್ತೇಜನೆ, ಪಂಚಾಯತಿಗಳಿಗೆ ಅಧಿಕಾರದ ವಿಕೇಂದ್ರೀಕರಣ, ಅಭಿವೃದ್ಧಿ ಕೆಲಸಗಳಲ್ಲಿ ಅದನ್ನು ಒಳಗೊಳ್ಳುವುದು, ದುಡಿಯುವ ಜನರ ಹೋರಾಟಗಳ ವಿರುದ್ಧ ಪೋಲೀಸ್ ಮತ್ತು ದಮನ ವ್ಯವಸ್ಥೆಯನ್ನು ಸರಕಾರೀ ಯಂತ್ರದ ಬಳಕೆಯಿಂದ ನಿಷ್ಫಲಗೊಳಿಸುವ ಗ್ರಾಮೀಣ ಬಡವರ ಪ್ರಜಾಪ್ರಭುತ್ವ ಹಕ್ಕುಗಳ ವಿಸ್ತರಣೆ ಮತ್ತು ರಾಜ್ಯದ ಸೀಮಿತ ಸಂಪನ್ಮೂಲಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗೆ ಉತ್ತೇಜನ ಕೊಡಲು ಬಳಸುವುದರಲ್ಲಿ ಎಡರಂಗ ಸರಕಾರದ ಮುನ್ನಡೆ ಅದರ ದೊಡ್ಡ ಸಾಧನೆಗಳಲ್ಲಿ ಒಂದು.

ಸಾಮೂಹಿಕ ಆಂದೋಲನದ ಕಾರ್ಯತಂತ್ರಗಳಲ್ಲಿ ಬದಲಾವಣೆಯಾಗಿರುವ ವಾತಾವರಣ [illegible] ಎಡರಂಗ ಸರಕಾರದ ನೀತಿಗಳೂ ಬದಲಾಗಬೇಕು. ಹಿಂದೆ ರೋಗಗ್ರಸ್ತ ಘಟಕಗಳನ್ನು ವಹಿಸಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳಲು ಅವಕ್ಕೆ ಸಂಪನ್ಮೂಲ ನೀಡುವುದು ಕೇಂದ್ರ ಸರಕಾರದ ನೀತಿಯಾಗಿದ್ದಾಗ ಕಾರ್ಮಿಕ ವರ್ಗ ಇಂತಹ ರೋಗಗ್ರಸ್ತ ಉದ್ದಿಮೆಗಳನ್ನು ವಹಿಸಿಕೊಳ್ಳಬೇಕು ಎಂದು ಒತ್ತಾಯಿಸುತ್ತಿತ್ತು. ಈ ಮೊದಲು ಹೋರಾಟ ರೋಗಗ್ರಸ್ತ ಘಟಕಗಳನ್ನು ಸರಕಾರ ವಹಿಸಿಕೊಳ್ಳಲು ಸಾಧ್ಯವಾಗಲು ಸಾಲ ನೀಡುವಂತೆ ಕೇಂದ್ರ ಸರಕಾರ ಹಣಕಾಸು ಸಂಸ್ಥೆಗಳಿಗೆ ನಿರ್ದೇಶನ ನೀಡಬೇಕೆಂದು ಒತ್ತಾಯಿಸಿ ನಡೆಯುತ್ತಿತ್ತು. ಈಗ ಕೇಂದ್ರದ ಮೂಲಭೂತ ನೀತಿಯಿಂದಾಗಿ ಹೊಸ ಘಟಕಗಳನ್ನು, ಉದ್ದಿಮೆಗಳನ್ನು ಸರಕಾರ ವಹಿಸಿಕೊಳ್ಳುವುದು ಕಷ್ಟವಾಗಿದೆ ಎಂದು ಕಾರ್ಮಿಕ ಆಂದೋಲನ ತನ್ನ ಅನುಭವದಿಂದಲೇ ಕಂಡು ಕೊಂಡಿದೆ. ಇಂತಹ ಸನ್ನಿವೇಶದಲ್ಲಿ ಈಗಿರುವ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣ ತಪ್ಪಿಸುವುದು ಹೇಗೆ ಎಂಬುದರ ಮೇಲೆ ಹೋರಾಟದ ಗಮನ ಕೇಂದ್ರೀಕರಿಸಬೇಕಾಗಿದೆ. ಸ್ವದೇಶೀ ತಂತ್ರಜ್ಞಾನ ಇರುವಲ್ಲಿ ಪ್ರಧಾನ ಉದ್ದಿಮೆ ವಲಯವನ್ನು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ತೆರೆಯುವ ನೀತಿಯನ್ನು ರಾಜ್ಯ ಸರಕಾರ ಒಪ್ಪದಿದ್ದರೂ ಕೇಂದ್ರದೊಡನೆ ಹೋರಾಡಿ ಈ ಪ್ರಧಾನ ವಲಯಗಳನ್ನು ಸರಕಾರೀ/ಸಾರ್ವಜನಿಕ ವಲಯದೊಳಗೇ ಇರುವಂತೆ ಬಲವಂತ ಮಾಡಲು ಅದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ -ಹೊಸ ವಿದ್ಯುತ್ ಯೋಜನೆಗಳಿಗೆ ಬಿಹೆಚ್‌ಇಎಲ್ ಉಪಕರಣಗಳನ್ನು ಪಡೆಯಬೇಕೆಂದು ಎಡರಂಗ ಸರಕಾರ ಬಯಸಿದರೂ ಇದಕ್ಕೆ ಕೇಂದ್ರ ಸರಕಾರ ಹಣಕಾಸು ಒದಗಿಸುವಂತೆ ಮಾಡಲು ರಾಜ್ಯ ಸರಕಾರಗಳಿಗೆ ಸಾಧ್ಯವಿಲ್ಲ. ಇಡೀ ದೇಶದಲ್ಲಿ ಹೊಸ ವಿದ್ಯುತ್ ಯೋಜನೆಗಳನ್ನು ಖಾಸಗಿ ವಲಯ ಮತ್ತು ವಿದೇಶೀ ಬಂಡವಾಳಕ್ಕೆ ತೆರೆಯುತ್ತಿರುವಾಗ ಪಶ್ಚಿಮ ಬಂಗಾಳ ಮಾತ್ರವೇ ನಾವು ಖಾಸಗಿ ವಲಯದ ಬಂಡವಾಳ ಹೂಡಿಕೆಯನ್ನು ಒಪ್ಪುವುದಿಲ್ಲವಾದ್ದರಿಂದ ಹೊಸ ವಿದ್ಯುತ್ ಯೋಜನೆಗಳು ಸಾಧ್ಯವಿಲ್ಲ ಎಂಬ ನಿಲುವು ತಳೆಯಲು ಸಾಧ್ಯವಿಲ್ಲ. ಆದ್ದರಿಂದ ಪ್ರಸ್ತುತ ಕೇಂದ್ರ ಸರಕಾರದ ನೀತಿಗಳ ಮಿತಿಯಲ್ಲಿ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆ ಮತ್ತು ಅದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಬೆಳವಣಿಗೆ ಸಾಧ್ಯವಾಗುವಂತೆ ಯಾವ ಕಾರ್ಯತಂತ್ರಗಳನ್ನು ಅನುಸರಿಸಬೇಕು ಎಂಬ ನಿರ್ದಿಷ್ಟ ಪ್ರಶ್ನೆ ನಮ್ಮ ಮುಂದಿದೆ.

ಪ್ರಸ್ತುತ ಪರಿಸ್ಥಿತಿ

ಪಶ್ಚಿಮ ಬಂಗಾಳದಲ್ಲಿ ಕೈಗಾರಿಕಾ ಅಭಿವೃದ್ಧಿ ಅಗತ್ಯ ಎಂಬುದರ ಬಗ್ಗೆ ವಿವಾದವಿರಲು ಸಾಧ್ಯವಿಲ್ಲ. ಸ್ವಾತಂತ್ರ್ಯ ದೊರೆತಂದಿನಿಂದ ಇದ್ದ ಸ್ಥಾನದಿಂದ ರಾಜ್ಯ ಕೆಳಗೆ ಸರಿಯುತ್ತಾ ಬಂದಿದೆ. 1951ರಲ್ಲಿ ರಾಷ್ಟ್ರೀಯ ಕೈಗಾರಿಕಾ ಉತ್ಪಾದನೆಯಲ್ಲಿ ಪಶ್ಚಿಮ ಬಂಗಾಳದಪಾಲು ಶೇ. 22 ಇತ್ತು. 1984-85ರಲ್ಲಿ ಅದು ಶೇ.8.1ಕ್ಕೆ ಇಳಿಯಿತು. ಭೂ ಸುಧಾರಣೆಗಳ ಯಶಸ್ವಿ ಅನುಷ್ಠಾನ ಮತ್ತು ಕೃಷಿ ಉತ್ಪಾದಕತೆಯಲ್ಲಿ ಮಹತ್ವಪೂರ್ಣ ಮುನ್ನಡೆಯಿಂದ ಈಗ ಕೈಗಾರಿಕೆಗಳನ್ನು ವಿಸ್ತರಿಸುವ ಆಧಾರ ಮತ್ತು ಅಗತ್ಯ ಏರ್ಪಟ್ಟಿದೆ. ತದ್ವಿರುದ್ಧವಾಗಿ ಕೈಗಾರಿಕಾ ದೃಶ್ಯ ಆತಂಕಕಾರಿಯಾಗಿದೆ. ಸೆಣಬು, ಇಂಜಿನಿಯರಿಂಗ್‌ನಂತಹ ಹಳೆಯ ಉದ್ದಿಮೆಗಳು ಬಿಕ್ಕಟ್ಟಿನಲ್ಲಿದ್ದು ಮುಚ್ಚುತ್ತಿದ್ದರೆ, ಅವನತಿ ಹೊಂದುತ್ತಿರುವ ಉದ್ದಿಮೆಗಳ ಜಾಗದಲ್ಲಿ ಹೊಸ ತಂತ್ರಜ್ಞಾನದ ಹೊಸ ಕೈಗಾರಿಕಾ ಬೆಳವಣಿಗೆ ಆಗುತ್ತಿಲ್ಲ. ಆದ್ದರಿಂದ ಪಶ್ಚಿಮ ಬಂಗಾಳ ಇಮ್ಮಡಿ ಅಡ್ಡಿ ಆತಂಕಗಳನ್ನು ಅನುಭವಿಸಬೇಕಾಗಿದೆ-ಒಂದೆಡೆ ಹಳೆಯ ಉದ್ದಿಮೆಗಳು ದೊಡ್ಡ ಪ್ರಮಾಣದಲ್ಲಿ ಮುಚ್ಚಿ, ನಿರ್ಮೂಲಗೊಳ್ಳುತ್ತಿರುವುದು, ಇನ್ನೊಂದೆಡೆ ಸ್ವತಃ ಕಾರ್ಮಿಕ ವರ್ಗದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅನುಕೂಲವಾಗಬಲ್ಲ ಕೈಗಾರಿಕಾ ಬೆಳವಣಿಗೆಯಿಲ್ಲದಿರು

> **ಎಡರಂಗ ಸರಕಾರದ ಪಾತ್ರ ಆರ್ಥಿಕ ನೀತಿಗಳ ವಿರುದ್ಧ ಅಖಿಲ ಭಾರತ ಹೋರಾಟವನ್ನು ಮಾತ್ರವೇ ಅಲ್ಲ ವರ್ಗ ಶಕ್ತಿಗಳ ಬಲಾಬಲದಲ್ಲಿ ಒಂದು ಬದಲಾವಣೆ ತರಲು ಅಗತ್ಯವಾದ ಎಡ-ಪ್ರಜಾಪ್ರಭುತ್ವ ರಂಗ ಕಟ್ಟುವ ಕೆಲಸವನ್ನು ಕೂಡಾ ಅಗಾಧ ರೀತಿಯಲ್ಲಿ ಬಲಪಡಿಸುತ್ತದೆ. ಈ ಮೂಲಭೂತ ದೃಷ್ಟಿಕೋಣವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ನೀತಿಗಳನ್ನು ಪರೀಕ್ಷಿಸಬೇಕು, ಆಗಾಗ ಅವುಗಳ ವಿಮರ್ಶೆ ನಡೆಸಬೇಕು ಮತ್ತು ಹೊಂದಾಣಿಕೆಗಳನ್ನು ಮಾಡಬೇಕು.**

ಇಕೈಗಾರಿಕೀಕರಣ(deindustrialisation) ರೆ ಕೈಗಾರಿಕೆಗಳ ನಾಶದ ಬೆದರಿಕೆ ಈಗ ವಾಸ್ತವ ಸಂಗತಿ. ಆದ್ದರಿಂದ ಕಾರ್ಮಿಕ ರ ಸಂಖ್ಯೆಯಲ್ಲಿ ಹೆಚ್ಚಳ ಮತ್ತು ಬೆಳವಣಿ ಮೇಲೂ ಅದರ ಅಪಾಯಕಾರಿ ಪ್ರಭಾ ಒಂದು ವಾಸ್ತವ ಸಂಗತಿ. ಇದೇ ಪ್ರವೃತ್ತಿ ಮುವರಿದರೆ ಎಡರಂಗ ಸರಕಾರ ದಾಖಲಿ ಸಾಧನೆಗಳಲ್ಲಿ ಗಂಭೀರ ಹಿನ್ನಡೆಯಾಗು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಲಾದ ನಿರುದ್ಯೋಗಿಗಳ ಸಂಖ್ಯೆ ಆಗಲೇ ಲಕ್ಷಕ್ಕಿಂತಲೂ ಹೆಚ್ಚು. ಒಂದು ದೊಡ್ಡ ಯ-ಪ್ರಾವಂತ ಮಾನವ ಶಕ್ತಿ ಉಪ ಗಕ್ಕೆ ಬರುತ್ತಿಲ್ಲ. ಇದರಿಂದ ಎಡರಂಗ ರದ ರಾಜಕೀಯ ನೆಲೆ ದುರ್ಬಲಗೊಳ್ಳ 1985ರಲ್ಲಿ ಇದ್ದುದಕ್ಕಿಂತಲೂ ಈಗ ದಲ್ಲಿ ಹೊಸ ಕೈಗಾರಿಕಾ ಬಂಡವಾಳ ಕೆ ಇನ್ನಷ್ಟು ಅಗತ್ಯವಾಗಿದೆ.

ಹೊಸ ಆರ್ಥಿಕ ನೀತಿಗಳಿಂದಾಗಿ ಬಂಡವಾ ಯ ಅಸಮಾನ ಬೆಳವಣಿಗೆ ಇನ್ನಷ್ಟು ಗೊಳ್ಳುತ್ತದೆ. ಲೈಸೆನ್ಸ್ ಪದ್ಧತಿಯ ರದ್ಧತಿ ಹತೋಟಿಗಳ ರದ್ಧತಿಯಿಂದ ಬಹು ಖಾಸಗಿಯಾದ ಬಂಡವಾಳ ಹೂಡಿಕೆ ಕ ಉತ್ತೇಜನಾಂಶಗಳು, ಮೂಲಭೂತ ಗಳು ಮತ್ತು ಸೌಲಭ್ಯಗಳನ್ನು ಒದಗಿಸುವ ಶಗಳಿಗೆ ಹರಿದು ಹೋಗುತ್ತದೆ. ಆಗಸ್ಟ್ ರಿಂದ ಆಗಸ್ಟ್ 1994ರ ನಡುವೆ ಅಂದರೆ ರೀಕರಣದ ಮೂರು ವರ್ಷಗಳಲ್ಲಿ ಕೈಗಾ ಲ್ಲಿ ಬಂಡವಾಳ ಹೂಡಿಕೆಯ ಶೇ. 2.5 ಪಶ್ಚಿಮ ಬಂಗಾಳಕ್ಕೆ ದೊರೆಯಿತು. ರಾಷ್ಟ್ರಕ್ಕೆ ಶೇ. 20.5, ಗುಜರಾತಿಗೆ ಶೇ. ದೊರೆಯಿತು. ಪೂರ್ವಭಾರತ ಇಡಿ ಈ ಹೂಡಿಕೆಯಿಂದ ವಂಚಿತವಾಗಿದೆ.

ರಂಗ ಸರಕಾರ ಏನು ಡಬೇಕು-ಏನು ಮಾಡಬಾರದು

985ರಲ್ಲಿ ಕೇಂದ್ರ ಉದ್ದಿಮೆಗಳಿಗೆ ಲೈಸೆನ್ಸ್ ವ ಹಾಗೂ ಹತೋಟಿಯಿಡುವ ಅಧಿಕಾ ನ್ನು ಬಳಸಿ ಪಶ್ಚಿಮ ಬಂಗಾಳದ ವಿರುದ್ಧ ತ ನಡೆಸುತ್ತಿತ್ತು. ಆದ್ದರಿಂದ ಆಗ ಹೋರಾಟ ದ ಈ ಪಕ್ಷಪಾತದ ವಿರುದ್ಧ ಇತ್ತು. ಆದರೆ ಹಾಗಲ್ಲ. ಲೈಸೆನ್ಸ್, ಹತೋಟಿಗಳ ರದ್ಧತಿ ವಾಗಿ ಪಶ್ಚಿಮ ಬಂಗಾಳಕ್ಕೆ ಬಂಡವಾಳ ಸಲು ಕ್ರಮ ಕೈಗೊಳ್ಳುವ ಮುತುವರ್ಜಿ ವುದು ಈಗ ಎಡರಂಗ ಸರ್ಕಾರದ ಲ್ಲಿದೆ. ಇಂತಹ ಮುತುವರ್ಜಿ ಸಾಧ್ಯವಾಗ ದರೆ ವಿವಿಧ ವಲಯಗಳಲ್ಲಿ ಹೆಚ್ಚಿನ

> **ಹೆಚ್ಚಿನ ಖಾಸಗಿ ಬಂಡವಾಳಕ್ಕೆ ಅನುವಾಗುವಂತೆ ರಾಜ್ಯದಲ್ಲಿನ ನೀತಿಗಳನ್ನು ನಿಯಮಾವಳಿಗಳನ್ನೂ ಹೊಂದಿಸುವಾಗಲೇ ಇಂತಹ ಕೈಗಾರಿಕೀಕರಣ ಮತ್ತು ಕೈಗಾರಿಕೆಗಳ ವಿಸ್ತರಣೆ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ, ವರ್ಗಶೋಷಣೆ ಮುಂದುವರಿಯುತ್ತದೆ, ಒಟ್ಟಾರೆಯಾಗಿ ಕೇಂದ್ರದ ಉದಾರೀಕರಣ ನೀತಿಗಳಿಂದ ಇದು ಹೆಚ್ಚುತ್ತದೆ ಎಂದು ಜನಗಳಿಗೆ ಸತತವಾಗಿ ಹೇಳುತ್ತಿರಬೇಕು.**

ಗಿ ಬಂಡವಾಳ ಹೂಡಿಕೆಗೆ ಅವಕಾಶ ಬೇಕು. ಕೇಂದ್ರ ಸರ್ಕಾರದ ಉದಾರೀಕರ ನೀತಿಯಿಂದ ಉಂಟಾಗಿರುವ ಹೊಸ ಶದಲ್ಲಿ ಪಶ್ಚಿಮ ಬಂಗಾಳ ಸರಕಾರ ತನ್ನ ಳನ್ನು ಈ ಆಧಾರದ ಮೇಲೆ ಹೊಂದಿಸಿ ಬೇಕಾಗಿದೆ. ಆದರೆ ಹೀಗೆ ಮಾಡುವಾಗ (ಎಂ) ನೇತೃತ್ವದ ಸರಕಾರ ವಿದೇಶೀ ವಾಳ ಅಥವಾ ದೊಡ್ಡ ವ್ಯಾಪಾರಸ್ಥರ ಮಪೂರ್ಣ ಒತ್ತಡ ಮಾತ್ರದಿಂದ ಬಂದಿ ಯಾವ ಕರಾರುಗಳನ್ನೂ ಒಪ್ಪಬಾರದೆಂಬ ಗಮನ ನೀಡಬೇಕು. ಅದು ಲಭ್ಯವಿರುವ ತಂತ್ರಜ್ಞಾನದ ವಿರುದ್ಧ ಹೋಗಬಾರದು. ಸೀಮಿತ ಬಂಡವಾಳ ಅನಗತ್ಯ ವಲ ಗೆ ಹೋಗಬಾರದು. ಉದಾಹರಣೆಗೆ ಬಂಗಾಳದ ಎಡರಂಗ ಸರ್ಕಾರ ಒಂದು ಶಕ್ತಿ ನೀತಿಯನ್ನು ಸರಿಯಾದ ರೀತಿಯಲ್ಲಿ ಸಿದೆ. ಇದು ವಿದ್ಯುತ್ ಉತ್ಪಾದನೆಯ ನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿ, ತೆರಬೇಕಾದ ದರಗಳನ್ನು ಹೆಚ್ಚಿಸುವ, ಸರಕಾರದ ಮತ್ತು ಅದರ ಹಣಕಾಸು ಜಾಮೀನಿನಿಂದ ಬಂಡವಾಳ ಖರ್ಚನ್ನು ತೋರಿಸಿ ಹೆಚ್ಚಿನ ಲಾಭಾಂಶ ಗಿಟ್ಟಿಸುವ ಮಹಾರಾಷ್ಟ್ರದ ಎನ್ರೋನ್ ಮಾದರಿಯನ್ನು ಒಪ್ಪಿಕೊಳ್ಳದ ನೀತಿ. ನೂರಕ್ಕೆ ನೂರು ವಿದೇಶೀ ಮಾಲಕತ್ವವನ್ನು ಒಪ್ಪಿಕೊಳ್ಳುವ ಬದಲು ಪಶ್ಚಿಮ ಬಂಗಾಳದಲ್ಲಿ ಸ್ಥಳೀಯವಾಗಿ ಸ್ಪರ್ಧಾತ್ಮಕ ಬಿಡ್ಡಿಂಗ್ ಮೂಲಕ ಉಪಕರಣಗಳನ್ನು ಖರೀದಿಸಿ ಜಂಟಿ ವಲಯದ ಪ್ರಾಜೆಕ್ಟ್ ಗಳನ್ನು ಆರಂಭಿಸುವ ಬಗ್ಗೆ ಯೋಚಿಸಲಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಯೋಜಿಸಲಾಗಿರುವ ವಿದ್ಯುತ್ ಯೋಜನೆಯಲ್ಲಿ ಉತ್ಪಾದನೆಯ ಖರ್ಚು ವಿದೇಶೀ ಮಾಲಕತ್ವ ಯೋಜನೆಗಳಿಂತ ಬಹಳ ಕಮ್ಮಿ. ಎಡರಂಗ ಸರ್ಕಾರ ನಿರಂತರವಾಗಿ ಸ್ಥಳೀಯ ಉದ್ದಿಮೆಗಳ ಮತ್ತು ಲಭ್ಯವಿರುವ ಸ್ಥಳೀಯ ತಂತ್ರಜ್ಞಾನದ ಹಿತಾಸಕ್ತಿಗಳನ್ನು ರಕ್ಷಿಸಲು ಎಚ್ಚರದಿಂದಿರಬೇಕು. ಅದು ಕಾರ್ಮಿಕರ ಹಿತಾಸಕ್ತಿಗಳು ಮತ್ತು ಅವರ ನ್ಯಾಯಬದ್ಧ ಹಕ್ಕುಗಳ ಪರವಾಗಿ ದೃಢವಾಗಿ ನಿಲ್ಲಬೇಕು.

ಮೂಲಭೂತ ಪ್ರಶ್ನೆಗಳಿಗೆ ಇದು ಪರಿಹಾರವಲ್ಲ

ಹೆಚ್ಚಿನ ಖಾಸಗಿ ಬಂಡವಾಳಕ್ಕೆ ಅನುವಾಗುವಂತೆ ರಾಜ್ಯದಲ್ಲಿನ ನೀತಿಗಳನ್ನು ನಿಯಮಾವಳಿಗಳನ್ನೂ ಹೊಂದಿಸುವಾಗಲೇ ಇಂತಹ ಕೈಗಾರಿಕೀಕರಣ ಮತ್ತು ಕೈಗಾರಿಕೆಗಳ ವಿಸ್ತರಣೆ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ, ವರ್ಗ ಶೋಷಣೆ ಮುಂದುವರಿಯುತ್ತದೆ, ಒಟ್ಟಾರೆಯಾಗಿ ಕೇಂದ್ರದ ಉದಾರೀಕರಣ ನೀತಿಗಳಿಂದ ಇದು ಹೆಚ್ಚುತ್ತದೆ ಎಂದು ಜನಗಳಿಗೆ ಸತತವಾಗಿ ಹೇಳುತ್ತಿರಬೇಕು.

ಹೊಸ ಕೈಗಾರಿಕಾ ಯೋಜನೆಗಳು ಉದ್ಯೋಗವಕಾಶಗಳನ್ನೂ ನಿರ್ಮಿಸುವಂತೆ ಮತ್ತು ಈ ಯೋಜನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವಂತೆ ಎಡರಂಗ ಸರ್ಕಾರ ಪ್ರಯತ್ನಿಸಬೇಕು. ಎಡರಂಗ ಸರ್ಕಾರ ಸತತವಾಗಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಬಲಪಡಿಸಲು, ಇಂತಹ ಘಟಕಗಳ ಖಾಸಗೀಕರಣವನ್ನು ವಿಶೇಷವಾಗಿ ಪ್ರಧಾನ ವಲಯದಲ್ಲಿರುವ ಘಟಕಗಳ ಖಾಸಗೀಕರಣವನ್ನು ತಡೆಯುವಲ್ಲಿ ನೆರವಾಗಲು ಪ್ರಯತ್ನಿಸಬೇಕು. ಪಶ್ಚಿಮ ಬಂಗಾಳದ ಪ್ರಮುಖ ಉದ್ದಿಮೆಗಳಲ್ಲಿನ ಸಾರ್ವಜನಿಕ ವಲಯದ ಘಟಕಗಳು ಕೇಂದ್ರ ಸರಕಾರದ ಉದ್ದಿಮೆಗಳು. ಕೇಂದ್ರದ ನೀತಿಯೆಂದರೆ ಈ ಘಟಕಗಳಿಗೆ ಹೊಸ ಬಂಡವಾಳ ಅಥವಾ ಆರ್ಡರ್‌ಗಳು ಇಲ್ಲದಂತೆ ಮಾಡಿ ಅವನ್ನು ಕಳಚಿ ಹಾಕವುದು. ಎಡರಂಗ ಸರ್ಕಾರ ಇಂತಹ ನೀತಿಯನ್ನು ವಿರೋಧಿಸುತ್ತದೆ ಮತ್ತು ಕಾರ್ಮಿಕರ ಕೆಲಸವನ್ನು ರಕ್ಷಿಸಲು ಪ್ರಯತ್ನಿಸುತ್ತದೆ.

ಕೇಂದ್ರದ ಪ್ರಸ್ತುತ ನೀತಿಗಳು ಸಣ್ಣ ಪ್ರಮಾಣದ ಮತ್ತು ಗುಡಿ ಕೈಗಾರಿಕೆಗಳ ವಿರುದ್ಧವಾಗಿರುವ ನೀತಿಗಳು. ಆದರೆ ನಾವು ಈ ವಲಯವನ್ನು ಭದ್ರಪಡಿಸಲು, ಅವುಗಳ ಉದ್ಯೋಗ ಸಾಮರ್ಥ್ಯವನ್ನು ವಿಸ್ತರಿಸಲು ಪ್ರಯತ್ನಿಸಬೇಕು.

ಎಡರಂಗದ ಕೈಗಾರಿಕಾ ನೀತಿ ಹೇಗೆ ಭಿನ್ನವಾಗಿರುತ್ತದೆ?

ಪಶ್ಚಿಮ ಬಂಗಾಳದಲ್ಲಿಯೇ ಹಲವು ರೋಗಗ್ರಸ್ತ ಮುಚ್ಚಿದ ಘಟಕಗಳಿವೆ. ಇಲ್ಲಿ ಕಾರ್ಮಿಕರು ತಮ್ಮ ಕೆಲಸಗಳನ್ನು ಹಾಗೂ ಹಕ್ಕುಗಳನ್ನು ರಕ್ಷಿಸಲು ದೀರ್ಘಕಾಲದಿಂದ ಹೋರಾಡುತ್ತಿದ್ದಾರೆ. ಖಾಸಗಿ ಬಂಡವಾಳಶಾಹಿಗಳು ಮುಚ್ಚಿದ ಇಂತಹ ಹಲವು ಘಟಕಗಳಲ್ಲಿ ಕಾರ್ಮಿಕರು ತಮ್ಮ ಕೆಲಸ ಹಾಗೂ ಬದುಕನ್ನು ಉಳಿಸಿಕೊಳ್ಳಲು ಒಪ್ಪುವ ಪುನರುಜ್ಜೀವನದ ಒಪ್ಪಂದಗಳು ಆಗಬಹುದು. ಇವುಗಳಲ್ಲಿ ಕೆಲವುಗಳಲ್ಲಿ ಪ್ರತಿಕೂಲ ಕರಾರುಗಳೂ ಇರಬಹುದು. ಇಂತಹ ಒಪ್ಪಂದಗಳನ್ನು ದೀರ್ಘ ಹೋರಾಟದಿಂದ ಸುಸ್ತಾದ ಕಾರ್ಮಿಕರು, ಆ ಒಪ್ಪಂದಗಳ ನಕಾರಾತ್ಮಕ ಅಂಶಗಳನ್ನು ತೋರಿಸಿಕೊಟ್ಟ ಮೇಲೂ ಒಪ್ಪಿದರೆ ಮಾತ್ರ ಸಿಐಟಿಯು ಸಂಘಗಳು ಒಪ್ಪುತ್ತವೆ. ಆದರೆ ಮಾಲಕರು ಸೂಕ್ತವಾಗಿ ಸ್ಪಂದಿಸದೆ ಕಾರ್ಮಿಕರು ಮಾತ್ರ 'ತ್ಯಾಗ' ಮಾಡಬೇಕು ಎಂಬ ಏಕಪಕ್ಷೀಯ ಕರೆ ನೀಡಲು ಸಾಧ್ಯವಿಲ್ಲ.

ಬದಲಾದ ಸನ್ನಿವೇಶಗಳಲ್ಲಿ ಸಿಐಟಿಯು ನೇತೃತ್ವದ ಸಂಘಗಳು ಮತ್ತು ಎಡ ನೇತೃತ್ವದ ಆಂದೋಲನಗಳು ಖಾಸಗೀಕರಣವನ್ನು ಹೇರುವ, ಕಾರ್ಮಿಕರ ಶೋಷಣೆಯನ್ನು ಹೆಚ್ಚಿಸುವ ಎಲ್ಲಾ ಪ್ರಯತ್ನಗಳ ವಿರುದ್ಧ ದೃಢವಾದ ಹೋರಾಟ ನಡೆಸುತ್ತವೆ. ವರ್ಗ ಹೋರಾಟ ಮತ್ತು ಕಾರ್ಮಿಕ ವರ್ಗದ ಹಕ್ಕುಗಳ ವಿಷಯದಲ್ಲಿ ಕಾರ್ಮಿಕ

ಪುಟ 8 ನೋಡಿ

ಆರ್ಥಿಕ ಸುಧಾರಣೆ ಎಂದರೆ ಬಡತನದ ಹೆಚ್ಚಳ!

ನರಸಿಂಹರಾಯರ ಸರಕಾರ ಸಂದರ್ಭ ದೊರೆತಾಗಲೆಲ್ಲ ಹೇಳುತ್ತಾ ಬಂದಿದೆ-ಸುಧಾರಣೆಯಿಂದ ಬಡವರಿಗೇ ಹೆಚ್ಚು ಲಾಭ ಎಂದು. ಮಾನವೀಯ ಮುಖದ ಸುಧಾರಣೆ ಇತ್ಯಾದಿ ಶಬ್ದಗಳನ್ನು ಅವರು ರೂಪಿಸಿ ಪ್ರಚಾರ ಮಾಡುತ್ತಿದ್ದಾರೆ. ಆದರೆ ನಿಜದಲ್ಲಿ ಈ ಆರ್ಥಿಕ ಸುದಾರಣೆಯಿಂದ ಆಗುತ್ತಿರುವುದೇನು? ಬೆಲೆಗಳು ಗಗನಕ್ಕೇರುತ್ತಲೇ ಇವೆ. ಶ್ರೀಮಂತರು ಶ್ರೀಮಂತರಾಗುತ್ತಲೇ ಇದ್ದಾರೆ. ಹಾಗೇ ಬಡತನವೂ ಹೆಚ್ಚುತ್ತಿದೆ.

ಯೋಜನಾ ಆಯೋಗದ ಅಧ್ಯಯನವೊಂದರ ಪ್ರಕಾರ 1979ರಿಂದೀಚೆಗೆ ಬಡವರ ಶೇಕಡಾಸ್ತರದಲ್ಲಿ ಅಲ್ಪ ಸ್ವಲ್ಪ ಕಡಿಮೆಯಾಗುತ್ತಿತ್ತು. ಆ ಇಳಿಮುಖ 1989-90ರವರೆಗೂ ಇತ್ತು. ಆದರೆ ಅನಂತರದಲ್ಲಿ ಆರ್ಥಿಕ ಸುಧಾರಣೆ ಬಂದ ಹಿನ್ನೆಲೆಯಲ್ಲೇ ಬಡತನ ಹೆಚ್ಚುತ್ತಾ ಹೋಗಿದೆ. 1979ರಲ್ಲಿ ಶೇ 53ರಷ್ಟು ಇದ್ದ ಬಡತನ 1989-90ರಲ್ಲಿ ಶೇ. 34ಕ್ಕೆ ಇಳಿದಿತ್ತು. ಆದರೆ 1992ರ ವೇಳೆಗೆ ಬಡತನ ಪುನಃ ಶೇ. 40 ಕ್ಕೆ ಏರಿತ್ತು.

ಗ್ರಾಮೀಣ ಬಡವರು ಅತಿ ತೊಂದರೆಗೊಳಗಾದಜನ. ಇವರಲ್ಲಿ ಬಡತನ 1989-90ರಲ್ಲಿ ಶೇಕಡಾ 33 ಇದ್ದದ್ದು 1992 ರಲ್ಲಿ ಶೇ. 42ಕ್ಕೇರಿತು. ನಗರಗಳಲ್ಲಿ ಪ್ರತಿಒಂದು ಸಾವಿರ ಜನಸಂಖ್ಯೆಗೆ 21 ನಿರುದ್ಯೋಗಿಗಳಿದ್ದರು. 1992ರ ವೇಳೆಗೆ ಈ ಸಂಖ್ಯೆ 23 ಕ್ಕೆ ಏರಿತ್ತು.

ತಜ್ಞರ ಪ್ರಕಾರ ಇಂತಹ ಬೆಳವಣಿಗೆಗೆ ಮುಖ್ಯಕಾರಣ ಬೆಲೆ ಏರಿಕೆ. ಅದರಲ್ಲೂ ಮುಖ್ಯವಾಗಿ ಆಹಾರ ಪದಾರ್ಥಗಳ ಬೆಲೆ ಏರಿಕೆಯಂತಹ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಿದೆಯಂತೆ. 1991-92 ರಲ್ಲಿ ಆಹಾರ ಧಾನ್ಯಗಳ ಬೆಲೆ ಶೇ. 20 ರಷ್ಟು ಹೆಚ್ಚಾಗಿದೆ.

ಇವೆಲ್ಲ ಸರ್ಕಾರಿ ಅಂಕಿ ಸಂಖ್ಯೆಗಳ ಪ್ರಕಾರವೇ ಆಗಿರುವುದು ಈ ಸರ್ಕಾರಿ ಸಂಖ್ಯೆಗಳು ಬಹಳ ಸಾರಿ ನಿಖರವಾಗಿರುವುದಿಲ್ಲ. ಆದರೆ ದೊಡ್ಡ ಪ್ರಮಾಣದಲ್ಲಿ ಇರಬಹುದಾದದ್ದನ್ನು ಅಲ್ಪ ಪ್ರಮಾಣದಲ್ಲಾದರೂ ಇದು ತೋರುತ್ತದೆ. ಅಂದರೆ ಬಡತನದ ಹೆಚ್ಚಳ ಈ ಸರ್ಕಾರಿ ಅಂಕಿ ಸಂಖ್ಯೆಗಳಿಗಿಂತಲೂ ಹೆಚ್ಚಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಅಂಗೈ ಹುಣ್ಣಿಗೆ ಕನ್ನಡಿ ಏಕೆ ಎಂಬಂತೆ ನಮ್ಮ ಸುತ್ತಲು ದುಡಿವ ಜನ- ಬಡಜನ ಬದುಕಲು ಪರದಾಡುವ ಸ್ಥಿತಿಯನ್ನು ನೋಡಿದರೆ ಬಡತನ ಹೆಚ್ಚಾಗಿರುವುದು ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ. ನೀವು ಕೇಳುವ ಪ್ರತಿಯೊಂದರ ಬೆಲೆಯೂ ಏರಿದೆ. ಆದರೆ ನಮ್ಮ ಶ್ರಮದ ಬೆಲೆಯಂತೂ ಅದೇ ಪ್ರಮಾಣದಲ್ಲಿ ಏರಿಲ್ಲ.

ನರಸಿಂಹರಾಯರ ಸರಕಾರದ ಸುಳ್ಳುಗಳಿಗೂ ಒಂದು ಮಿತಿ ಇರಬೇಡವೆ?

ಹೊಗಳಿ ಹೊನ್ನ ಶೂಲಕ್ಕೇರಿಸುವುದು

ಹೊಗಳಿದರೆ ಹೊಗಳಿಕೆಗೆ ತಕ್ಕ ಮರ್ಯಾದೆ ಮಾನ್ಯತೆ ನೀಡುವುದು ಸಹಜ. ಆದರೆ ಹೊಗಳಿ ಶೂಲಕ್ಕೇರಿಸಿದರೆ? ಕೇಂದ್ರ ಸರ್ಕಾರ ಅಂಚೆ ಮತ್ತು ತಂತಿ ಮತ್ತು ಟೆಲಿಕಾಂ ಇಲಾಖೆಗಳನ್ನು ಹೀಗೆ ನಡೆಸಿಕೊಳ್ಳುತ್ತಿದೆ ಎಂದು ಸಾಮಾಜಿಕ ಪರೀಕ್ಷಣ ಮಂಡಳಿ ಹೇಳಿದೆ.

ಒಂದು ಕಡೆ ಸರಕಾರ ಈ ಇಲಾಖೆಗಳು ಬಹಳ ಮುಖ್ಯ ಇಲಾಖೆಗಳು ಎಂದು ಹೇಳುತ್ತದೆ. ಆದರೆ ಈ ಇಲಾಖೆಗಳನ್ನು ಬೆಳೆಸಲು ಅವಶ್ಯಕ ಸಂಪನ್ಮೂಲಗಳನ್ನೂ ನೀಡುತ್ತಿಲ್ಲ, ಅವುಗಳಿಗೆ ಕಾರ್ಯ ಸ್ವಾತಂತ್ರ್ಯವೂ ಇಲ್ಲವಾಗಿದೆ.

ಇದನ್ನು ಆಳವಾಗಿ ವಿಶ್ಲೇಷಿಸಿದರೆ ಒಳಗೆ ಒಂದು ಪಿತೂರಿಯಷ್ಟೇ ಇರುವುದು ಕಂಡು ಬರುತ್ತದೆ. ಕೇಂದ್ರ ಸರ್ಕಾರ ಈ ವಲಯದಲ್ಲಿ ಖಾಸಗೀಕರಣ ತರುತ್ತಿದೆ. ಈ ಇಲಾಖೆಗಳು ದಕ್ಷವಾಗಿ ಲಾಭದಾಯಕವಾಗಿ ನಡಯುವಂತಾದರೆ ಖಾಸಗಿಯವರಿಗೆ ಅದರಲ್ಲೂ ಬಹುರಾಷ್ಟ್ರೀಯ ಕಂಪನಿಗಳಿಗೆ ವ್ಯಾಪಾರ ಕುದರುವುದಿಲ್ಲ. ಆದ್ದರಿಂದ ಈ ಇಲಾಖೆಗಳನ್ನು ದಕ್ಷತೆ ಇಲ್ಲದಂತೆ, ಅಲ್ಲಿಯ ನೌಕರರಿಗೆ ಯಾವುದೇ ಕಾಳಜಿ ಇಲ್ಲದಿರುವಂತೆ ಮಾಡಿದರೆ?

ಆಗ ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭವೋ ಲಾಭ. ಇದಕ್ಕಾಗಿಯೇ ನಮ್ಮ ಕೇಂದ್ರ ಸರ್ಕಾರದ ಹಿಡಿತದಲ್ಲಿರುವ ಈ ಇಲಾಖೆಗಳು ಸೃಜನ ಶೀಲತೆಯಿಲ್ಲದ ನಿರ್ಜೀವ ಇಲಾಖೆಗಳಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ. ಆದರೆ ಈ ಇಲಾಖೆಗಳಲ್ಲಿ ಜನರಿಗಾಗಿ ದುಡಿವ ಹುಮ್ಮಸ್ಸು ಪ್ರತಿಭೆ ಇರುವ ಜನ ಇಲ್ಲವೆಂದಲ್ಲ ಅವರಿಗೆ ಅಂತಹ ಅವಕಾಶಗಳನ್ನೇ ನೀಡಲಾಗುತ್ತಿಲ್ಲ.

ಮನೆಗೆ ಮಾರಿ ಪರರಿಗುಪಕಾರಿ ಎಂದರೆ ಇದೇ ಅಲ್ಲವೇ?

ಎಣ್ಣೆ ಕಾಳುಗಳೇ, ಯಾಕೆ ನೀವು ರಫ್ತಾಗುತ್ತಿಲ್ಲ?

ಇದು ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಾಲಯದ ಚಿಂತೆಯಂತೆ. ಈ ವರ್ಷದ ಮೊದಲ ಒಂಬತ್ತು ತಿಂಗಳುಗಳನ್ನು ತೆಗೆದುಕೊಂಡರೆ ಕಳೆದ ವರ್ಷದ ಇದೇ ಅವಧಿಯಲ್ಲಿ 1446 ಕೋಟಿ ರೂಪಾಯಿಗಳಷ್ಟು ಎಣ್ಣೆಕಾಳು ರಫ್ತಾಗಿದ್ದದು ಈ ವರ್ಷದಲ್ಲಿ 907 ಕೋಟಿ ರೂಪಾಯಿಗಳಿಗೆ ಇಳಿದಿದೆಯಂತೆ .

ಇದಕ್ಕೆ ಕಾರಣ? ಬೆಲೆಗಳು ಅತಿಯಾಗಿ ಏರಿರುವುದೇ ಕಾರಣ.

ಉದಾರೀಕರಣದಿಂದ ಭಾರತದ ಸರಕುಗಳಿಗೆ ಸ್ಪರ್ಧಾತ್ಮಕತೆ ಬರುತ್ತದೆ. ವಿದೇಶಗಳಲ್ಲಿ ಭಾರತದ ಸರಕುಗಳು ಅಗ್ಗವಾಗುತ್ತವೆ. ಈ ದೇಶಗಳಲ್ಲಿ ನಮ್ಮ ಸರಕುಗಳಿಗೆ ಅಪಾರವಾದ ಬೇಡಿಕೆ ಬರುತ್ತದೆ. ಇದರಿಂದ ನಮ್ಮ ರಫ್ತು ಹೆಚ್ಚುತ್ತದೆ. ರಫ್ತು ಹೆಚ್ಚಳದಿಂದ ವಿನಿಮಯ ಅಪಾರವಾಗಿ ಹರಿದು ಬರುತ್ತದೆ.ವಿದೇಶೀ ವಿನಿಮಯ ನಿಧಿ ಹೆಚ್ಚಾದರೆ ಅದು ದೇಶದೊಳಗಿನ ಆರ್ಥಿಕ ಅಭಿವೃದ್ಧಿಗೆ ಅನುವುಮಾಡಿ ಕೊಡುತ್ತದೆ. ಎಂಬ ವಾದವನ್ನು ಉದಾರೀಕರಣವಾದಿಗಳು, ನರಸಿಂಹರಾಯರ ಸರ್ಕಾರ ಹೂಡುತ್ತಲೇ ಬಂದಿದ್ದವು. ಇಂದೂ ಅವರು ಇದೇ ವಾದ ಹೂಡುತ್ತಾರೆ.

ಆದರೆ ಆಗುತ್ತಿರುವುದೇನು? ರಫ್ತುಗಳು ಏರುತ್ತಲೇ ಇಲ್ಲ, ವಿದೇಶೀ ಸಾಲ ಹೆಚ್ಚುತ್ತಿದೆ. ಒಟ್ಟಾರೆ ಉದಾರೀಕರಣದ ನೀತಿಗಳಿಂದಾಗಿ ದೇಶದೊಳಗೆ ಬೆಲೆಗಳು ಅಪಾರವಾಗಿ ಏರಿವೆ.



-ಜಿ.ಎಸ್.ಮಣಿ

ಹಾಗೆ ದೇಶದೊಳಗಿನ ಜನ ತಮ್ಮ ಪೌಷ್ಟಿಕತೆಯ ಅವಶ್ಯಕತೆಗಳಿಗನುಗುಣವಾಗಿ ಎಣ್ಣೆಕಾಳುಗಳನ್ನು ಬಳಸುತ್ತಲೂ ಇಲ್ಲ, ಅವರು ಬಳಸುವ ಆರ್ಥಿಕ ಸ್ಥಿತಿಯಲ್ಲೂ ಇಲ್ಲ.

ಹಾಗಾದರೆ ಉದಾರೀಕರಣದಿಂದ ಆದ ಲಾಭವೇನು? ಬೆಳೆ ಬೆಳೆದರೂ ನಮ್ಮ ಜನ ಹೊಟ್ಟೆ ತುಂಬ ಉಣ್ಣುವಂತಿಲ್ಲ, ವಿದೇಶಗಳಿಗೆ ರಫ್ತು ಮಾಡಿ ಆ ಹಣದಿಂದ ಅನುಕೂಲಗಳನ್ನು ಹೊಂದುವಂತೂ ಇಲ್ಲ, ಹೇಗಿದೆ ಸಂಕಟ?

ಹರಿಯದ ಖಾಸಗಿ ವಿದ್ಯುತ್

ವಿದ್ಯುತ್ ವಲಯವನ್ನು 1991ರಿಂದಲೇ ಉದಾರೀಕರಿಸುತ್ತಾ ಬಂದಿದೆ ನಮ್ಮ ಕೇಂದ್ರ ಸರಕಾರ. ಈ ಉದಾರೀಕರಣ ದೇಶದ ವಿದ್ಯುತ್ ಸಮಸ್ಯೆಗಳಿಗೆ ಇರುವ ಒಂದೇ ಉತ್ತರ ಎಂಬುದು ಸರಕಾರದ ಅಂಬೋಣ. ಆದರೆ ಈ ಉತ್ತರ ಫಲ ನೀಡುತ್ತಿದೆಯೇ?

ಹಲವು ವಿದ್ಯುತ್ ಯೋಜನೆಗಳು ಕಾರ್ಯರೂಪಕ್ಕೇ ಬರುತ್ತಿಲ್ಲ, ಸಮಗ್ರ ವಿದ್ಯುತ್ ಯೋಜನೆಗಳೆಂಬ ಹೆಸರು ಪಡೆದಿರುವ ಈ ಕೆಲವು ಯೋಜನೆಗಳು ಕಲ್ಲಿದ್ದಲಿನಿಂದ ನಡೆಯುವಂತಹವು. ಕಲ್ಲಿದ್ದಲು ಗಣಿ ಕಾರ್ಯವೂ ಈ ಯೋಜನೆಯಲ್ಲಿ ಸೇರಿಕೊಂಡಿದೆ.

ಇಂತಹ ಯೋಜನೆಗಳ ಯೋಜನಾ ಸಮಯ ಬಹಳ ದೊಡ್ಡದು. ಸರಕಾರ ಈ ಕಾರಣದಿಂದಾಗಿಯೇ ಈ ಯೋಜನೆಗಳಿಗೆ ಕನಿಷ್ಟ ಪ್ರತಿಫಲದ ಭರವಸೆಯನ್ನು ನೀಡಿತು. ಆದರೂ ಈ ಖಾಸಗಿಯವರಿಗೆ ತೃಪ್ತಿಯಾಗಿಲ್ಲ. ಆದ್ದರಿಂದ ಹಲವು ಯೋಜನೆಗಳು ಇನ್ನೂ ಪ್ರಾರಂಭವೇ ಆಗಿಲ್ಲ. ಖಾಸಗಿಯವರ ಲಾಭ ಪಿಪಾಸೆಗೆ ಮಿತಿಯೆಂಬುದೇನಾದರೂ ಇದೆಯೇ? ಖಾಸಗಿಯವರಿಂದ ಅಭಿವೃದ್ಧಿ ಕಾರ್ಯಗಳು ನಿಜವಾಗಿಯೂ ಆಗಿವೆಯೇ?

ವಿಷವಾಗುವ ಔಷಧಿಗಳು

ಹೊಸ ಔಷಧಿ ನೀತಿ ಬಂದ ಮೇಲೆ ಈಗ ಔಷಧ ಬೆಲೆ ಹತೋಟಿ ಆಜ್ಞೆ ಹೊರಬಂದಿದೆ. ಇದು ಹಲವು ಔಷಧಿಗಳನ್ನು ಹಿಂದಿನ ನಿಬಂಧನೆಗಳಿಂದ ಹೊರಗೆ ತಂದಿದೆ. ಈಗ ಈ ಔಷಧಿಗಳ ಮೇಲೆ ಯಾವುದೇ ನಿಬಂಧನೆಗಳಿರುವುದಿಲ್ಲ.

ಕೇಂದ್ರದ ಪೆಟ್ರೋಲಿಯಂ ಮತ್ತು ರಸಾಯನಿಕಗಳ ಮಂತ್ರಾಲಯ ಬೆಲೆಗಳ ಮೇಲೆ ನಿಗಾ ಇಡುವ ವಿಚಾರ ಮಾಡುತ್ತೇವೆ ಎಂದಿದೆ. ಆದರೆ ಇಲ್ಲಿ ನಿಬಂಧನೆಗಳನ್ನು ತೆಗೆದಿರುವುದರಿಂದ ಬೆಲೆಗಳ ಮೇಲೆ ನಿಗಾ ಇಡುವುದಷ್ಟೇ ಸಾಧ್ಯ ಹೊರತು ಹತೋಟಿಯನ್ನಲ್ಲ. ಔಷಧ ಬೇಕಾದವರಿಗೆ ಈ ಅಧೋಗತಿ.



ಅಮೃತಸರದಲ್ಲಿ 'ಕ್ಯೂಬಾ ನೈಟ್' ಸೌಹಾರ್ದ ಸಾಂಸ್ಕೃತಿಕ ಕಾರ್ಯಕ್ರಮ

ಆಧ್ಯಾತ್ಮಿಕ ಮೌಲ್ಯಗಳ, ತ್ಯಾಗ-ಬಲಿದಾನಗಳ ನಗರ ಅಮೃತ್‌ಸರ ಜನವರಿ 6 ರಂದು ಇನ್ನೊಂದು ವಿಶಿಷ್ಟ ಸಾಂಸ್ಕೃತಿಕ ಕಾರ್ಯಕ್ರಮ ಕಂಡಿತು. ಅಂದು 'ಕ್ಯೂಬಾ ನೈಟ್' ನಡೆದು ಭಾರತದಲ್ಲಿ ಕ್ಯೂಬಾದ ರಾಯಭಾರಿ ಕಛೇರಿಯಲ್ಲಿ ಸಾಂಸ್ಕೃತಿಕ ಅಧಿಕಾರಿಯಾಗಿರುವ ಕಾಮ್ರೇಡ್ ವಿಕ್ಟರ್ ರವರಿಗೆ 20,000 ರೂ. ಅರ್ಪಿಸಲಾಯಿತು. ಜನವರಿ 5ರಿಂದ 7ರವರೆಗೆ ಇಲ್ಲಿ ನಡೆದ ಸಿಪಿಐ(ಎಂ) ಪಂಜಾಬ್ ರಾಜ್ಯ ಸಮಿತಿಯ 14ನೇ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಈ ಸಮಾರಂಭ ನಡೆಯಿತು. ಸಮ್ಮೇಳನ ನಡೆದ ಸ್ಥಳದಲ್ಲೇ ಅದು ನಡೆಯಿತು. 14ನೇ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ವಿಜಯ್ ಮಿಶ್ರಾ ಈ ಕೊಡುಗೆಯನ್ನು ಅರ್ಪಿಸಿದರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಈ ಸೌಹಾರ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅವರು ಮತ್ತು ಇನ್ನೊಬ್ಬ ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಎಸ್.ಆರ್. ಪಿಳ್ಳೆ ಕ್ಯೂಬಾದ ಕ್ರಾಂತಿಯ ಇತಿಹಾಸ ನೆನೆಪಿಸಿದರು. "ಕ್ಯೂಬಾ ಪತನಗೊಳ್ಳುವುದಿಲ್ಲ" ಎಂದು ಸುರ್ಜಿತ್ ಸಾರಿದಾಗ ಇಡೀ ಸಭೆ ಚಪ್ಪಾಳೆ ತಟ್ಟುತ್ತಾ ಕ್ಯೂಬಾದ ಜನತೆಯೊಂದಿಗೆ ಸೌಹಾರ್ದದ ಘೋಷಣೆ ಕೂಗಿತು.

ಸುರ್ಜಿತ್ ಹೆಸರೀಗ ಕ್ಯೂಬಾದಲ್ಲಿ ಮನೆಮಾತು

ಕಾಮ್ರೇಡ್ ವಿಕ್ಟರ್ ಈ ನೆರವಿಗೆ ಕೃತಜ್ಞತೆ ವ್ಯಕ್ತಪಡಿಸುತ್ತಾ ಈ ಹಣದ ಪ್ರತಿಯೊಂದು ಪೈಸೆಯೂ ಕ್ಯೂಬಾದ ಸಮಾಜವಾದದ ರಕ್ಷಣೆಯ ಒಂದೊಂದು ಕೊತ್ತಳವಾಗಲಿದೆ ಎಂದರು. ಸಿಪಿಐ(ಎಂ) ಮುಖಂಡರನ್ನು ವಿಶೇಷವಾಗಿ ಶ್ಲಾಘಿಸುತ್ತಾ ಕ್ಯೂಬಾದಲ್ಲಿ ಸುರ್ಜಿತ್‌ರ ಹೆಸರೀಗ ಮನೆ-ಮನೆಯಲ್ಲಿ ಕೇಳಿ ಬರುವ ಹೆಸರು ಎಂದರು.

ಉರಿಯುತ್ತಿರುವ ಪಂಜು ಹಿಡಿದು
ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತಾ ಸಾಗು
ಕಾರ್ಗತ್ತಲು ಇನ್ನೂ ಕವಿದೇ ಇದೆ

ಎಂದು ಜೀವನ್ ಜ್ಯೋತಿ ಪಬ್ಲಿಕ್ ಸ್ಕೂಲ್‌ನ ಚಿಕ್ಕ ಮಕ್ಕಳ ತಂಡ ಹಾಡಿದ್ದ ಹಾಡುಗಳು ಸಭಿಕರನ್ನು ಆಕರ್ಷಿಸಿದವು.

ಸಿಪಿಐ(ಎಂ) ಪಂಜಾಬ್ ರಾಜ್ಯ ಸಮ್ಮೇಳನ

ಸಿಪಿಐ(ಎಂ) ಪಂಜಾಬ್ ರಾಜ್ಯ ಘಟಕದ 15ನೇ ಸಮ್ಮೇಳನ ಜನವರಿ ಐದರಿಂದ ಏಳರವರೆಗೆ ಅಮೃತಸರದಲ್ಲಿ ನಡೆಯಿತು.

ಮೊದಲ ದಿನದ ಬಹಿರಂಗ ಸಭೆಯಲ್ಲಿ ಗಣನೀಯ ಸಂಖ್ಯೆಯ ಮಹಿಳೆಯರ ಸಹಿತ 20000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಭಯೋತ್ಪಾದನೆಯ ನೆರಳಿನಲ್ಲಿದ್ದ ಅಮೃತಸರದಲ್ಲಿ ಸುಮಾರು 12 ವರ್ಷಗಳ ನಂತರ ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರು ಮತ್ತು ರೈತರ ರ್‍ಯಾಲಿಯನ್ನು ಕಂಡಿತು.

ಪಕ್ಷದ ಪ್ರಧಾನ ಕಾರ್ಯದರ್ಶಿ ಬಹಿರಂಗ ಸಭೆಯಲ್ಲಿ ಮಾತನಾಡಿದರು.

34 ಸದಸ್ಯರ ಹೊಸ ರಾಜ್ಯ ಸಮಿತಿಯನ್ನು ಸಮ್ಮೇಳನವು ಆರಿಸಿತು. ಕಾಂ. ಮಂಗತ್ ರಾಮ್ ಪಾಸ್ಲಾ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಗುಜರಾತ್: ಪುರಸಭೆ ಚುನಾವಣೆಗಳಲ್ಲಿ ಯಶಸ್ಸು

ಗುಜರಾತಿನ ಸ್ಥಳೀಯ ಮಂಡಳಿಗಳಿಗೆ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಸಿಪಿಐ(ಎಂ) 16 ಸ್ಥಾನಗಳಿಗೆ ಸ್ಪರ್ಧಿಸಿತ್ತು. ಇತರ ಕೆಲವು ಕಡೆ ಪಕ್ಷೇತರರಿಗೆ ಬೆಂಬಲ ನೀಡಿತ್ತು. ಪಕ್ಷದ ಚಿಹ್ನೆ ಮೇಲೆ ಸ್ಪರ್ಧಿಸಿದ್ದ 16 ಅಭ್ಯರ್ಥಿಗಳ ಪೈಕಿ ನಾಲ್ವರು ಗೆದ್ದಿದ್ದಾರೆ.

ಸಬರ್‌ಕಾಂತ್ ಜಿಲ್ಲೆಯ ಜಿಲ್ಲಾ ಮುಖ್ಯ ಸ್ಥಳವಾದ ಹಿಮ್ಮತ್ ನಗರದ ಪುರಸಭೆಗೆ ಸಿಪಿಐ(ಎಂ) ಚಿಹ್ನೆ ಮೇಲೆ ಸ್ಪರ್ಧಿಸಿದ್ದ ಮಹಿಳಾ ಅಭ್ಯರ್ಥಿ ರುಹಾನಾ ಬಾನು ಬಶಿಭ್ಯಾ ಸೈಯದ್ ವಿಜಯಿಯಾಗಿದ್ದಾರೆ. ಅವರು ಚುನಾವಣೆಗಳಲ್ಲಿ ಅತ್ಯಂತ ಹೆಚ್ಚು ಮತಗಳನ್ನು ಗಳಿಸಿದವರಾಗಿದ್ದಾರೆ. ಪಕ್ಷೇತರರಾಗಿದ್ದ ಅವರ ಸೋದರ ಜೇನುಭ್ಯಾ ಕೂಡಾ ವಿಜಯಿಯಾಗಿದ್ದಾರೆ.

ಸಿಪಿಐ(ಎಂ) ಪಕ್ಷದ ಚಿಹ್ನೆ ಮೇಲೆ ಸ್ಪರ್ಧಿಸದಂತೆ ಬಂದಿದ್ದ ಎಲ್ಲಾ ಒತ್ತಡಗಳನ್ನು ಬದಿಗೊತ್ತಿ ರುಹಾನಾ ದಿಟ್ಟತನದಿಂದ ಕಣಕ್ಕಿಳಿದಿದ್ದರು.

ರುಹಾನಾ ಮತ್ತು ಜೈನುಭ್ಯಾ ಅವರನ್ನು ಅಭಿನಂದಿಸಲು ನಡೆದ ಬಹಿರಂಗ ಸಭೆಗೆ ಬಹಳಷ್ಟು ಜನರು ಬಂದಿದ್ದರು.

ಹಿಮ್ಮತ್ ನಗರದ ಪುರಸಭೆಗೆ ಸಿಪಿಐ(ಎಂ) ಪ್ರಥಮಬಾರಿಗೆ ಪ್ರವೇಶಿಸಿದ್ದು ಹೊಸ ಸನ್ನಿವೇಶ ನಿರ್ಮಾಣವಾಗಿದೆ.

ಸುರೇಂದ್ರನಗರ ಜಿಲ್ಲೆಯ ಧಂಗ್ರ್ಯ ಪುರಸಭೆಯನ್ನು ಪ್ರವೇಶಿಸುವ ಮೊದಲ ಯತ್ನದಲ್ಲೇ ಸಿಪಿಐ(ಎಂ) ಯಶಸ್ಸೂ ಕಂಡಿದೆ. ಪರಿಶಿಷ್ಟ ಜಾತಿಗೆ ಸೇರಿದ ಜಯಂತಿಲಾಲ್ ಖಿಮಾಭ್ಯಾ ಪರಮಾರ್ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾಗಿದ್ದಾರೆ.

ಮೆಹಸಾನ ಜಿಲ್ಲೆಯ ಸಿದ್ಧಾಪುರ ಪುರಸಭೆಗೆ ಸ್ಪರ್ಧಿಸಿದ್ದ ಸಿಪಿಐ(ಎಂ) ಬೆಂಬಲಿತ ಮಹೇಶ ಥಕ್ಕರ್ ಚುನಾಯಿತರಾಗಿದ್ದಾರೆ. ಅವರ ವಿರುದ್ಧ ಕಾಂಗ್ರೆ ಮತ್ತು ಬಿಜೆಪಿ ಭಾರೀ ಅಪಪ್ರಚಾರವನ್ನು ನಡೆಸಿದ್ದವು.

ಬರೋಡಾ ಜಿಲ್ಲೆಯ ಪದ್ರಾದಲ್ಲಿ ಇಬ್ಬರು ಸಿಪಿಐ(ಎಂ) ಬೆಂಬಲಿತ ಹುರಿಯಾಳುಗಳು ಗೆದ್ದಿದ್ದಾರೆ. ಚುನಾಗಢದಲ್ಲಿ ಪಕ್ಷ ಆರು ಸ್ಥಾನಗಳಿಗೆ ಸ್ಪರ್ಧಿಸಿತ್ತು. ಕೇವಲ 35ರಿಂದ 40 ಮತಗಳ ಅಂತರದಿಂದ ಸಿಪಿಐ(ಎಂ) ಅಭ್ಯರ್ಥಿಗಳು ಸೋತಿದ್ದಾರೆ. ಇಲ್ಲಿ ಜನತಾದಳ ಸಿಪಿಐ(ಎಂ)ನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಇತರ ಎಲ್ಲಾ ಸ್ಥಾನಗಳಿಗೆ ಸ್ಪರ್ಧಿಸಿತ್ತು.

15ನೇ ಮಹಾಧಿವೇಶನಕ್ಕೆ ಸಿದ್ಧತೆ

ಚಂಡೀಘಡದಲ್ಲಿ ಏಪ್ರಿಲ್ 3ರಿಂದ 8ರವರೆಗೆ ನಡೆಯಲಿರುವ ಸಿಪಿಐ(ಎಂ)ನ 15ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ರಾಜ್ಯ ಸಮ್ಮೇಳನಗಳು ಆರಂಭವಾಗಿವೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಮೂರು ರಾಜ್ಯಗಳಲ್ಲಿ ಸಮ್ಮೇಳನಗಳು ಮುಗಿದಿವೆ. ವಿವಿಧ ರಾಜ್ಯ ಸಮ್ಮೇಳನಗಳ ದಿನಾಂಕಗಳು ಹೀಗಿವೆ.

ರಾಜ್ಯ	ದಿನಾಂಕ		ಸ್ಥಳ
ಪಂಜಾಬ್	ಜನವರಿ	5-7	ಅಮೃತಸರ
ದಿಲ್ಲಿ	ಜನವರಿ	11-13	ದಿಲ್ಲಿ
ಹಿಮಾಚಲ ಪ್ರದೇಶ	ಜನವರಿ	14-15	ನಗ್ರೋತಾ
ಹರ್ಯಾಣ	ಜನವರಿ	28-29	ಕರ್ನಾಲ್
ಅಂಡಮಾನ್	ಜನವರಿ	28-29	ಪೋರ್ಟ್ ಬ್ಲೇರ್
ಉತ್ತರ ಪ್ರದೇಶ	ಫೆಬ್ರವರಿ	4-6	ಬುಲಂದ್‌ಶಹರ್
ಅಸ್ಸಾಂ	ಫೆಬ್ರವರಿ	14-16	ಗುವಾಹಾಟಿ
ಮಧ್ಯಪ್ರದೇಶ	ಫೆಬ್ರವರಿ	15-17	ರಾಯಪುರ
ತ್ರಿಪುರಾ	ಫೆಬ್ರವರಿ	17-20	ಅಗರ್ತಲಾ
ಮಣಿಪುರ	ಫೆಬ್ರವರಿ	18	ಇಂಫಾಲ್
ಕರ್ನಾಟಕ	ಫೆಬ್ರವರಿ	24-27	ಗುಲ್ಬರ್ಗಾ
ಕೇರಳ	ಫೆಬ್ರವರಿ	25-28	ಕೊಳ್ಳಿರಿ
ತಮಿಳುನಾಡು	ಮಾರ್ಚ್	1-4	ಕಡಲೂರು
ಪಶ್ಚಿಮ ಬಂಗಾಳ	ಮಾರ್ಚ್	2-6	ಜಾಧವ್‌ಪುರ್
ರಾಜಾಸ್ತಾನ	ಮಾರ್ಚ್	8-9	ಸಿಕಾರ್
ಮಹಾರಾಷ್ಟ್ರ	ಮಾರ್ಚ್	11-13	ಥಾಣೆ
ಒರಿಸ್ಸಾ	ಮಾರ್ಚ್	18-19	ಬಾಲೇಶ್ವರ್
ಆಂಧ್ರಪ್ರದೇಶ	ಮಾರ್ಚ್	22-24	ಹೈದರಾಬಾದ್

ಬಿಹಾರ್, ಗೋವಾ ಸಿಕ್ಕಿಂ, ಗುಜರಾತ್ ಮತ್ತು ಜಮ್ಮು-ಕಾಶ್ಮೀರ ರಾಜ್ಯ ಸಮ್ಮೇಳನಗಳ ದಿನಾಂಗಳು ಇನ್ನೂ ನಿರ್ಧಾರವಾಗಿಲ್ಲ.

ಡಿವೈಎಫ್‌ಐನಿಂದ ಕನ್ನಡ ರಾಜ್ಯೋತ್ಸವ

ಬೆಂಗಳೂರಿನ ಹೊಸುರು ರಸ್ತೆಯಲ್ಲಿರುವ ಡಿವೈಎಫ್‌ಐ ಚಿಕ್ಕ ಬೇಗೂರು ಗೇಟ್ ಘಟಕ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಿತು. ಇದೇ ಸಂದರ್ಭದಲ್ಲಿ ಡಿವೈಎಫ್‌ಐ ಕಛೇರಿ(ಕುವೆಂಪು ವಾಚನಾಲಯ) ಭಗತ್‌ಸಿಂಗ್ ಧ್ವಜಸ್ತಂಭ ನೆಡಲಾಯಿತು.

ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಜನತಾದಳ ಮುಖಂಡರಾದ ಮುನಿನಾರಾಯಣರವರು ಉದ್ಘಾಟಿಸಿದರು. ಡಿವೈಎಫ್‌ಐ ಕಛೇರಿಯನ್ನು ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿಯಾದ ಗೋಪಾಲಕೃಷ್ಣ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಕಾಂ. ಪ್ರಕಾಶ್ (ಎಸ್‌ಎಫ್‌ಐ) ರಾಜ್ಯ ಕಾರ್ಯದರ್ಶಿ) ಮಾತನಾಡಿ ವಿದ್ಯಾರ್ಥಿ ಯುವಜನರು ಪ್ರಗತಿದಾಯಕ ವಿಚಾರಗಳತ್ತ ಎಚ್ಚೆತ್ತು ಜನಪರ ಹೋರಾಟಗಳಿಗೆ ಸ್ಪಂದಿಸಬೇಕೆಂದು ಕರೆ ನೀಡಿದರು. ಈ ಸಮಾರಂಭದಲ್ಲಿ ವಿಜಯ ಕಾಲೇಜ್ ಕನ್ನಡ ವಿಭಾಗದ ಮುಖ್ಯಸ್ಥರು, ಅಧ್ಯಾಪಕರಾದ ಶ್ರೀಪಾದರವರು ಲಾವಣಿ ಹಾಡುವುದರ ಮೂಲಕ ಈ ಸಮಾರಂಭಕ್ಕೆ ಕಳೆ ನೀಡಿದರು.

ವರ್ತೂರು ವಿಧಾನಸಭಾ ಸದಸ್ಯರಾದ ಅಶ್ವಥನಾರಾಯಣರೆಡ್ಡಿ ಭಾಗವಹಿಸಿದರು. ಈ ಸಮಾರಂಭದಲ್ಲಿ ಬಡ ಮಹಿಳೆಯರಿಗೆ ಹೊದೆಯುವ ಬೆಡ್‌ಸೀಟ್‌ಗಳನ್ನು ಉಚಿತವಾಗಿ ನೀಡಲಾಯಿತು.

ಈ ಪ್ರದೇಶದ ಯುವ ಮುಖಂಡರಾದ ಬಿಎಂಎಸ್ ಮಾಲೀಕರಾದ ಮುನ್ನಾವರ್‌ರವರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ಯಾಮಣ್ಣ ರೆಡ್ಡಿ(ಕಾರ್ಮಿಕ ಮುಖಂಡರು) ವಹಿಸಿದರು. ರಾಮು ಮೆಲೋಡಿ ವಾದ್ಯಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಈ ಸಮಾರಂಭದಲ್ಲಿ ಡಿವೈಎಫ್‌ಐ ಚಿಕ್ಕಬೇಗೂರು ಗೇಟ್ ಘಟಕದ ಕಾರ್ಯದರ್ಶಿ ಎಂ.ಲಕ್ಷ್ಮಣ್ ಸ್ವಾಗತಿಸಿದರು. ಉಪಾಧ್ಯಕ್ಷರಾದ ಶಂಕರ್ ವಂದಿಸಿದರು. ಅಧ್ಯಕ್ಷರಾದ ಆನಂದಕುಮಾರ್ ಮೇಲ್ವಿಚಾರಣೆ ನೆರವೇರಿಸಿದರು.

SFI ಸ್ಥಾಪನಾ ದಿನಾಚರಣೆ

ಹೊಸಪೇಟೆ: ಡಿಸೆಂಬರ್ 30ರಂದು ಹೊಸಪೇಟೆಯ SFI ಹಾಗೂ DYFIನ ಜಂಟಿ ಕಛೇರಿಯಲ್ಲಿ SFIನ ದಿನಾಚರಣೆಯನ್ನು ಆಚರಿಸಲಾಯಿತು. 30ರಂದು ಬೆಳಿಗ್ಗೆ 11 ಗಂಟೆಗೆ ಕಾಂ. ಗೋಪಾಲಕೃಷ್ಣ ತಾಲೂಕು ಅಧ್ಯಕ್ಷರು ಕಛೇರಿಯ ಆವರಣದಲ್ಲಿ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ರಾಜ್ಯ ಸಮಿತಿ ಉಪಾಧ್ಯಕ್ಷರಾದ ಕಾಂ.ಎಲ್. ಮಂಜುನಾಥರವರು ಮಾತನಾಡಿ SFI ಅನೇಕ ವರ್ಷಗಳಿಂದ ಸತತವಾಗಿ ಅನ್ಯಾಯದ ವಿರುದ್ಧ ಹೋರಾಡುತ್ತಾ ಬಂದಿದೆ. ಈ ಕಾರ್ಯಕ್ರಮದಲ್ಲಿ ತಾಲೂಕಿನ ವಿವಿಧ ಭಾಗಗಳಿಂದ ವಿದ್ಯಾರ್ಥಿ ಪ್ರತಿನಿಧಿಗಳು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ನೆರೆದಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ತಾಲೂಕು ಕಾರ್ಯದರ್ಶಿ ಕೆ.ರಮೇಶ್ ಮಾತನಾಡಿ SFI ಕಳೆದ 81ರಿಂದಲೂ ಬಳ್ಳಾರಿ ಜಿಲ್ಲೆಯಲ್ಲಿ ಅತ್ಯುತ್ತಮವಾದ ಕಾರ್ಯಚಟುವಟಿಕೆಗಳನ್ನು ನಡೆಸಿ ಅಂದರೆ ವಿದ್ಯಾರ್ಥಿ ಸಮಸ್ಯೆಗಳನ್ನು ಬಗೆಹರಿಸಿ ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಆದ ಕಾರಣ ಇಂತಹ ಸಂಘಟನೆಯನ್ನು ಎಲ್ಲಾ ಸೇರಿ ಇನ್ನಷ್ಟು ಬಲಿಷ್ಟಗೊಳಿಸಲು ಮುಂದಾಗಬೇಕೆಂದು ಕರೆ ನೀಡಿದರು. ಕೊನೆಯಲ್ಲಿ ಶ್ರೀನಿವಾಸರು ವಂದನಾರ್ಪಣೆ ಸಲ್ಲಿಸಿದರು.

ಭಟ್ಕಳ: SFIನ ಸ್ಥಾಪನಾ ದಿನಾಚರಣೆಯ ಅಂಗವಾಗಿ 31-12-94ರ ಸಂಜೆ 3.45ಕ್ಕೆ ನೂತನ ಕಚೇರಿಯನ್ನು ನವಾಯತ್ ಕಾಲೋನಿ ಕ್ರಾಸ್‌ನ ಹತ್ತಿರವಿರುವ ಅಪ್ಸ್ಕೋ ಸೇಲ್ಸ್ ಕಟ್ಟಡದಲ್ಲಿ ಉದ್ಘಾಟಿಸಲಾಯಿತು. ಉದ್ಘಾಟಕರಾಗಿ ಆಗಮಿಸಿದಂತ ಮಾನ್ಯ ತಸಹೀಲ್ದಾರ್ ಸುಬ್ರಾಯ ಕಾಮತ್ ಮಾತನಾಡಿದರು. ಮುಖ್ಯ ಅತಿಥಿಯಾಗಿ SFIನ ಜಿಲ್ಲಾ ಧ್ಯಕ್ಷ ಆನಂದ್ ಶೆಟ್ಟಿ, ಕಾಂ. ಶಂಭುಭಟ್ಟ ಹಾಗೂ DYFIನ ಶಾಯಿದ್ ಭಟ್ಟಿಯವರನ್ನು ಕಾರ್ಯಾಲಯದ ಕಾರ್ಯದರ್ಶಿಯನ್ನಾಗಿ ಈ ಸಂದರ್ಭದಲ್ಲಿ ನೇಮಿಸಲಾಯಿತು.

ಹಾಸ್ಟೆಲ್ ವ್ಯವಸ್ಥೆ ಸುಧಾರಣೆಗೆ ಜಿಲ್ಲಾ ಪಂಚಾಯತ್ ಚಲೋ

ತುಮಕೂರು: ಜನವರಿ 11 ರಂದು SFI ತುಮಕೂರು ಜಿಲ್ಲಾ ಸಮಿತಿ ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ಬೇಡಿಕೆ ಈಡೇರಿಕೆಗಾಗಿ ಜಿಲ್ಲಾ ಪಂಚಾಯತ್ ಚಲೋ ಕಾರ್ಯಕ್ರಮ ಸಂಘಟಿಸಿತ್ತು. 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜಿಲ್ಲೆಯ ಬೇರೆ ಬೇರೆ ತಾಲೂಕುಗಳಿಂದ ಭಾಗವಹಿಸಿದ್ದರು. ಪ್ರತಿಭಟನಾಕಾರರನ್ನುದ್ದೇಶಿಸಿ SFI ರಾಜ್ಯ ಅಧ್ಯಕ್ಷರಾದ ಶಾಂತಾರಾಮ ನಾಯಕರು ಮಾತನಾಡಿ ಹಂದಿಗೂಡಿನಂತಿರುವ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳು ವಾಸ ಮಾಡಲು ಅನರ್ಹವಾದಂತಹ ಪರಿಸ್ಥಿತಿ ಇದೆ. ಕಳಪೆ ಮಟ್ಟದ ಆಹಾರ ವಿತರಣೆಯಾಗುತ್ತಿದೆ, ಈ ಸಮಸ್ಯೆಗಳ ವಿರುದ್ಧ ರಾಜ್ಯದಾದ್ಯಂತ ಹೋರಾಡಲು SFI ರಾಜ್ಯ ಸಮಿತಿ ಉದ್ದೇಶಿಸಿದೆ ಎಂದರು. ಜಿಲ್ಲಾಧ್ಯಕ್ಷ ಕೆ.ಎಸ್. ಉಮೇಶ್, ಕಾರ್ಯದರ್ಶಿ ಅಲ್ಲಾ ಬಕಾಷ್, ಸೈಯದ್ ಮುಜೀಬ್ ಮುಂತಾದವರು ಮಾತನಾಡಿದರು.

ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಿಗೆ ಅರ್ಪಿಸಿದ ಮನವಿಯಲ್ಲಿ ಕಟ್ಟಡಗಳ ಸುವ್ಯವಸ್ಥೆ, ಪಠ್ಯೇತರ ಚಟುವಟಿಕೆಗೆ ಹೆಚ್ಚು ಹಣ, ಬೆಲೆ ಏರಿಕೆಗೆ ಅನುಗುಣವಾಗಿ ವಿದ್ಯಾರ್ಥಿ ವೇತನ ಹೆಚ್ಚಳ, ಶೈಕ್ಷಣಿಕ ಕೇಂದ್ರಕ್ಕೊಂದು ಹಾಸ್ಟೆಲ್, ಸಂಖ್ಯಾ ಬಲ ಹೆಚ್ಚಳ, ಹಾಸ್ಟೆಲ್ ನಿರ್ವಹಣೆಯಲ್ಲಿ ವಿದ್ಯಾರ್ತಿಗಳಿಗೆ ಪ್ರಾತಿನಿಧ್ಯ, ಪಾವಗಡದಲ್ಲಿ ಇನ್ನು 30 ವಿದ್ಯಾರ್ಥಿಗಳಿಗೆ ಸೀಟು ನೀಡಬೇಕು ಇನ್ನೂ ಮುಂತಾದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಯಿತು.

ಎಸ್.ಎಫ್.ಐ. ತಾಲೂಕು ಸಮ್ಮೇಳನ

ದೇವದುರ್ಗ: ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) 3ನೇ ತಾಲೂಕು ಸಮ್ಮೇಳನವು ಜನವರಿ 10,1995ರಂದು ದೇವದುರ್ಗದಲ್ಲಿ ನಡೆಯಿತು. ಈ ಸಮ್ಮೇಳನಕ್ಕೆ ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ತಿಪ್ಪಯ್ಯನಾಯಕ ಮತ್ತು ಕಾಂ.ಪಿ.ಗಿರಿಯಪ್ಪ ಉಪಸ್ಥಿತರಿದ್ದರು. ಈ ಸಮ್ಮೇಳನದಲ್ಲಿ ಸುಮಾರು 50 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್‌ಎಫ್‌ಐ ತಾಲೂಕು ಚಟುವಟಿಕೆಗಳ ಕುರಿತು ಕಾಂ. ತಿಪ್ಪಯ್ಯ ನಾಯಕ ಹೇಳಿದರು. ಅದೇ ರೀತಿಯಾಗಿ ಎಸ್‌ಎಫ್‌ಐ ಸಂವಿಧಾನ ಮತ್ತು ಬೆಳವಣಿಗೆ ಕುರಿತು ಕಾಂ.ಪಿ.ಗಿರಿಯಪ್ಪ ಸ್ಪಷ್ಟವಾದ ಚಿತ್ರ ಕೊಟ್ಟರು ಅಲ್ಲದೆ ಹೊಸ ಶಿಕ್ಷಣ ನೀತಿ ವಿರೋಧಿಸಬೇಕೆಂದು ಕರೆ ಕೊಟ್ಟರು. ವಿದ್ಯಾರ್ಥಿಗಳು ಎಸ್‌ಎಫ್‌ಐ ಬೆಳವಣಿಗೆ ಕುರಿತು ಎರಡು ಗಂಟೆ ಕಾಲ ಚರ್ಚೆ ಮಾಡಿದರು. ನಂತರ ಹೊಸ ತಾಲೂಕು ಸಮಿತಿಯನ್ನು ರಚಿಸಲಾಯಿತು.

ನೂತನ ಅಧ್ಯಕ್ಷರಾಗಿ: ಕಾಂ. ಎಚ್.ಮಲ್ಲಪ್ಪ ಮಸರಕಲ್ಲ ಉಪಾಧ್ಯಕ್ಷರಾಗಿ: ಪಿ. ಗಿರಿಯಪ್ಪ, ರಾಜಪ್ಪ, ಶಿವಪ್ಪ, ರವಿ ಪೆಂಟಳ, ಕಾರ್ಯದರ್ಶಿಯಾಗಿ: ಚಂದ್ರಶೇಖರ್ ನಾಡಗೌಡ, ಸಹ ಕಾರ್ಯದರ್ಶಿಯಾಗಿ: ಕಾಂ. ತಿಪ್ಪಯ್ಯನಾಯಕ,ಬಸವರಾಜ ಬಾಗುರ,ಮಹಾದೇವ,ಶರಣಗೌಡ, ಸದಸ್ಯರಾಗಿ: ಅಮರೇಶದೊಡ್ಡಮನ್ನಿ, ಅನ್ವರ ಹುಸೇನ, ಶಿವಪ್ಪ, ಶೈಲೇಶ್ ಕುಮಾರ್, ಖಂಚಾಚಿಯಾಗಿ: ಮುದರಂಗಪ್ಪ ಗುಡಗಲಿ ಆಯ್ಕೆಯಾದರು.

ಎಸ್.ಎಫ್.ಐ.ನೂತನ ಸಮಿತಿ ಆಯ್ಕೆ

ಹರಪನಹಳ್ಳಿ : ಜನವರಿ 31, 1995 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (SFI)ತಾಲೂಕು ಸಮಾವೇಶದಲ್ಲಿ ಈ ಕೆಳಕಂಡ ನೂತನ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಗಿದೆ.

ಹೆಚ್.ರಹಮತ್-ಅಧ್ಯಕ್ಷರು
ಟಿ.ಹಾಲೇಶ್-ಕಾರ್ಯದರ್ಶಿ
ಎಂ.ನಾಗೇಂದ್ರ-ಉಪಾಧ್ಯಕ್ಷರು
ಕೆ.ರಾಜು-ಉಪಾಧ್ಯಕ್ಷರು
ಎಚ್.ಎಂ. ಶಿವಕುಮಾರ್-ಸಹಕಾರ್ಯದರ್ಶಿ
ಕೆ.ಗುಂಡಪ್ಪ-ಸಹಕಾರ್ಯದರ್ಶಿ ಹಾಗೂ 9 ಜನ ಸದಸ್ಯರ ಸಮಿತಿಯನ್ನು ರಚಿಸಲಾಯಿತು.

ಜನವರಿ 26ರಂದು ಡಿವೈಎಫ್‌ಐನಿಂದ ಕೋಮು ಸೌಹಾರ್ದತೆಗಾಗಿ ರಕ್ತದಾನ ಶಿಬಿರ

ಡಿವೈಎಫ್‌ಐ ಬೆಂಗಳೂರು ಜಿಲ್ಲಾ ಸಮಿತಿ ಗಣರಾಜ್ಯೋತ್ಸವ ದಿನವಾದ ಜನವರಿ 26ರಂದು ಕೋಮು ಸೌಹಾರ್ದತೆಗಾಗಿ ರಕ್ತದಾನ ಶಿಬಿರ ನಡೆಸಲಿದೆ. ಅಂದು ಬೆಳಿಗ್ಗೆ 10.30ಕ್ಕೆ ರಕ್ತದಾನಿಗಳ ಕ್ಲಬ್ ಉದ್ಘಾಟನೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ನಗರಾಭಿವೃದ್ಧಿ ಸಚಿವರಾದ ರೋಶನ್ ಬೇಗ್ ಉದ್ಘಾಟನೆ ನಡೆಸುವರು. ಚಲನಚಿತ್ರ ನಟರೂ, ಶಾಸಕರೂ ಆದ ಅನಂತನಾಗ್, ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಹೆಚ್.ಎನ್ ನಾಗಮೋಹನದಾಸ್ ಹಾಗೂ ಲಯನ್ಸ್ ಕ್ಲಬ್ ಆಫ್ ಬೆಂಗಳೂರು, ವಿಜಯನಗರದ ಅಧ್ಯಕ್ಷರಾದ ಲಯನ್ ಎಂ. ಶಿವಾನಂದ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಡಿವೈಎಫ್‌ಐ ಜಿಲ್ಲಾ ಉಪಾಧ್ಯಕ್ಷರಾದ ಸತ್ಯನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಮಾರಂಭ ಬೆಂಗಳೂರು ಮಹಾನಗರಪಾಲಿಕೆ ಎದುರಿರುವ ವಿನಾಯಕ ವಿದ್ಯಾಸಂಸ್ಥೆಯಲ್ಲಿ(ಅಲಸೂರು ಗೇಟ್ ಪಕ್ಕ) ನಡೆಯಲಿದೆ ಎಂದು ಡಿವೈಎಫ್‌ಐ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ತಿಳಿಸಿದ್ದಾರೆ.

ಸ್ಪೇನಿನಲ್ಲಿ ಎಡರಂಗದ ಮುನ್ನಡೆ

ಸ್ಪೇನಿನಲ್ಲಿ ಕಮ್ಯುನಿಸ್ಟ್ ಪಕ್ಷ ಎಡ ಮತ್ತು ಪ್ರಗತಿಪರ ಪಕ್ಷಗಳ ಐಕ್ಯ ಎಡರಂಗವೊಂದನ್ನು ಸ್ಥಾಪಿಸಿದೆ. ಈ ಎಡರಂಗದಲ್ಲಿ ಸ್ಪೇನಿನ ಕಮ್ಯುನಿಸ್ಟ್ ಪಕ್ಷ, ಎಡ ರಿಪಬ್ಲಿಕನ್ ಪಕ್ಷ, ಸಮಾಜವಾದಿ ಕ್ರಿಯಾ ಪಕ್ಷ ಸೇರಿವೆ. ಪರಿಸರವಾದಿ ಹಸಿರು ಪಕ್ಷ ಮತ್ತು ಹಲವಾರು ಸ್ವತಂತ್ರರು ಸೇರಿದ್ದಾರೆ. ಡಿಸೆಂಬರ್ 9ರಿಂದ 11ರವರೆಗೆ ಸ್ಪೇನಿನ ರಾಜಧಾನಿ ಮ್ಯಾಡ್ರಿಡ್‌ನಲ್ಲಿ ಐಕ್ಯ ಎಡರಂಗದ ನಾಲ್ಕನೇ ಅಧಿವೇಶನ ನಡೆಯಿತು. ರಂಗದ ಹಲವು ಘಟಕ ಪಕ್ಷಗಳ ಸುಮಾರು 900 ಪ್ರತಿನಿಧಿಗಳು ಅಧಿವೇಶನದಲ್ಲಿ ಭಾಗವಹಿಸಿದ್ದರು. ಅಲ್ಲದೆ 51 ದೇಶಗಳಿಂದ 81 ಅಂತರ್ರಾಷ್ಟ್ರೀಯ ಪ್ರತಿನಿಧಿಗಳು ಅಧಿವೇಶನದಲ್ಲಿ ಭಾಗವಹಿಸಿದ್ದರು. ಸಿಪಿಐ(ಎಂ)ನಿಂದ ಅವತಾರ್ ಸಾದಿಕ್ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಅಧಿವೇಶನದ ಮುಖ್ಯ ಘೋಷಣೆಯಾದ "ಮುನ್ನಡೆಯಿರಿ" ಎಂಬುದನ್ನು ಭಾರೀ ದೊಡ್ಡ ಗಾತ್ರದ ಕೆಂಪು ಅಕ್ಷರಗಳಲ್ಲಿ ಬ್ಯಾನರ್ ಮೇಲೆ ಆಕರ್ಷಕವಾಗಿ ಬರೆಯಲಾಗಿತ್ತು.

ಇಂತಹ ಐಕ್ಯ ಎಡರಂಗದ ಸಂಘಟನಾ ರೂಪ ಬಹುಶಃ ಯುರೋಪಿನಲ್ಲಿ ಎಡ, ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಗೆ ನಡೆಸಿದ ವಿಶಿಷ್ಟವಾದ ಪ್ರಯತ್ನ. ಐಕ್ಯ ಎಡರಂಗ 1993ರ ಚುನಾವಣೆಯಲ್ಲಿ 19 ಸೀಟುಗಳನ್ನು ಪಡೆದಿದೆ. 22.5 ಲಕ್ಷ ಮತಗಳನ್ನು ಗಳಿಸಿದೆ. ಸಂಘಟನಾತ್ಮಕವಾಗಿ ರಂಗ ಬೆಳೆಯುತ್ತಿದ್ದು ಐಕ್ಯ ಎಡರಂಗ ಸಂಘಟನೆಗೆ 1.8 ಲಕ್ಷ ಸದಸ್ಯರಿದ್ದಾರೆ. ಸ್ಪೇನಿನ ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರಶ್ನಿಸುವ, ಅದರ ದುಷ್ಪರಿಣಾಮಗಳ ವಿರುದ್ಧ ಹೋರಾಡುವ, ಬಂಡವಾಳಶಾಹಿ ವ್ಯವಸ್ಥೆಗೆ ಬದಲಿ ವ್ಯವಸ್ಥೆ ರೂಪಿಸುವ ಕಾರ್ಯಕ್ರಮ ಹೊಂದಿರುವ ಎಲ್ಲಾ ಪಕ್ಷಗಳಿಗೆ ಈ ರಂಗದಲ್ಲಿ ಸ್ಥಾನವಿದೆ. ಸ್ಪಾನಿಷ್ ಆಳುವ ವರ್ಗಗಳ ಸಂಪ್ರದಾಯವಾದಿ ನವ-ಲಿಬರಲ್ ನೀತಿಗಳನ್ನು ಬೆಂಬಲಿಸುವ ಯಾವ ಪಕ್ಷಗಳಿಗೂ ಎಡರಂಗದಲ್ಲಿ ಸ್ಥಾನವಿಲ್ಲ. ಹೆಸರಿಗೆ ಮಾತ್ರ ಸೋಶಲಿಸ್ಟ್ ಲೇಬರ್ ಪಕ್ಷವಾಗಿರುವ ಆಳುವ ಪಕ್ಷವನ್ನು ರಂಗದಿಂದ ಹೊರಗಿಡಲಾಗಿದೆ. ಈ ಪಕ್ಷ ಕಲ್ಯಾಣ ರಾಜ್ಯದ ಅಂಶಗಳ ಮೇಲೆ ಧಾಳಿ ಇಡುತ್ತಾ, ಖಾಸಗೀಕರಣ, ಬಹುರಾಷ್ಟ್ರೀಯ ಸಂಸ್ಥೆಗಳ ಹಿತಾಸಕ್ತಿಗಳನ್ನು ಕಾಪಾಡುತ್ತಾ, ಕಾರ್ಮಿಕ ಮಾರುಕಟ್ಟೆ ಸುಧಾರಣೆ ಹೆಸರಲ್ಲಿ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಹತ್ತಿಕ್ಕುತ್ತಿರುವ ಈ ಪಕ್ಷದ ಸರಕಾರದ ಟೀಕೆ ಎಡರಂಗದ ಮುಖ್ಯ ಕಾರ್ಯಕ್ರಮ. ಐಕ್ಯ ಎಡರಂಗ ಬಂಡವಾಳಶಾಹಿ ವಿರುದ್ಧ ತಂತಾನೇ ಹುಟ್ಟಿಕೊಂಡಿರುವ ಪರಿಸರವಾದಿ, ಮಹಿಳಾವಾದಿ ಇತ್ಯಾದಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಚಳುವಳಿಗಳನ್ನು ಒಳಗೊಂಡು, ಬಂಡವಾಳಶಾಹಿಗೆ ಬದಲಿ ರೂಪಿಸುವತ್ತ ಒಂದು ಸಂಘಟಿತ ಸಾಮಾಜಿಕ ರಾಜಕೀಯ ಚಳುವಳಿ ಕಟ್ಟಬಯಸುತ್ತದೆ. ಇದು ಇಂದು ಸ್ಪಾನಿಷ್ ರಾಜಕೀಯದಲ್ಲಿ ಅತ್ಯವಶ್ಯಕ ಸಂಗತಿ.

ಯುರೋಪಿಯನ್ ಒಕ್ಕೂಟಕ್ಕೆ ವಿರೋಧದ ಬಗ್ಗೆ ಐಕ್ಯ ಎಡರಂಗದಲ್ಲಿ ಪೂರ್ಣ ಒಮ್ಮತವಿದೆ. ಐಕ್ಯ ಎಡರಂಗ ಕೆಳಕಂಡ ಮುಖ್ಯ ಗುರಿಗಳನ್ನು ಹೊಂದಿದೆ.

- ■ ಪೂರ್ಣ ಉದ್ಯೋಗದ ಸಮಾಜ ನಿರ್ಮಾಣ
- ■ ಹೆಚ್ಚಿನ ವೇತನದ ಜತೆ ಕೆಲಸದ ಗಂಟೆಗಳ ಕಡಿತ
- ■ ಸ್ಪಾನಿಷ್ ಸಾರ್ವಭೌಮತೆಯ ರಕ್ಷಣೆ
- ■ ಖಾಸಗೀಕರಣ ತಡೆಗಟ್ಟಿ ಕಾರ್ಮಿಕರ ಹಕ್ಕುಗಳ ರಕ್ಷಣೆ
- ■ ಸ್ವಾಯತ್ತ ಬೆಳವಣಿಗೆ ಮೇಲೆ ಆಧಾರಿತ ಬದಲಿ ಆರ್ಥಿಕ ನೀತಿಗಳು
- ■ ಯರೋಪಿಯನ್ ಒಕ್ಕೂಟ, ಗ್ಯಾಟ್, ನಾಟೋ, ಸಂಘಟನೆಗಳ ಪ್ರಸ್ತುತ ಸ್ವರೂಪಕ್ಕೆ ವಿರೋಧ ಹಾಗೂ ಅವುಗಳಲ್ಲಿ ಪ್ರಜಾಸತ್ತಾತ್ಮಕ ಬದಲಾವಣೆಗೆ ಒತ್ತಾಯ. ವಿಶ್ವ ಸಂಸ್ಥೆ, ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳಲ್ಲೂ ಪ್ರಜಾಸತ್ತಾತ್ಮಕ ಬದಲಾವಣೆಗೆ ಒತ್ತಾಯ

ಬಂಡವಾಳಶಾಹಿ ಪರಿಸರದ ಮೇಲೆ ಇಡುತ್ತಿರುವ ಧಾಳಿಯನ್ನು ವಿರೋಧಿಸಿ ಮನುಷ್ಯ ಪ್ರಕೃತಿ ಮತ್ತು ವಿಜ್ಞಾನ, ತಂತ್ರಜ್ಞಾನಗಳ ಸಂಬಂಧಗಳ ಬಗ್ಗೆ ಹೊಸ ನೋಟ ಬೆಳೆಸುವುದು

ಸ್ಪಾನಿಷ್ ಐಕ್ಯ ಎಡರಂಗ ಯುರೋಪಿನ ಹಾಗೂ ಜಗತ್ತಿನ ಇತರ ಎಡ-ಪ್ರಗತಿಪರ ಶಕ್ತಿಗಳೊಂದಿಗೆ ಸಂಪರ್ಕ ಬೆಳೆಸಲು ಪ್ರಯತ್ನಿಸುತ್ತಿದೆ. ಇದೇ ತಿಂಗಳಲ್ಲಿ ಬ್ರಸ್ಸೆಲ್ಸ್‌ನಲ್ಲಿ ಯುರೋಪಿಯನ್ ನವ ಎಡ ಫೋರಂನಲ್ಲಿ ಯುರೋಪಿನ ಹಲವಾರು ಎಡ-ಪ್ರಗತಿಪರ ಸಂಘಟನೆಗಳು ಸಭೆ ಸೇರಲಿವೆ. ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ಎಲ್ಲಾ ದೇಶದ ಎಡ-ಪ್ರಗತಿಪರ ಪಕ್ಷಗಳ ಪಾರ್ಲಿಮೆಂಟರಿ ಗುಂಪು ರಚಿಸಲಾಗಿದೆ. ಕ್ಯೂಬಾ, ಸಹಾರವಿ ಗಣರಾಜ್ಯ, ದಕ್ಷಿಣ ಆಫ್ರಿಕಾ, ಪ್ಯಾಲೆಸ್ತೀನ್ ಜನರ ಹೋರಾಟಗಳ ಜತೆ ಸೌಹಾರ್ದತೆ ಇತ್ಯಾದಿ ಅಂತರ್ರಾಷ್ಟ್ರೀಯ ಸೌಹಾರ್ದತಾ ಕಾರ್ಯಕ್ರಮಗಳಲ್ಲೂ ರಂಗ ಸಕ್ರಿಯವಾಗಿದೆ.



ಲೋಕಸಂಚಾರ

-ಶರತ್‌ಚಂದ್ರ

ದ.ಕೊರಿಯಾದಲ್ಲಿ ಹೊಸ ಟ್ರೇಡ್ ಯೂನಿಯನ್ ಕೇಂದ್ರದ ಉದಯ

ದಕ್ಷಿಣ ಕೊರಿಯಾ ಮಾರುಕಟ್ಟೆ ಆಧಾರಿತ ಆರ್ಥಿಕಕ್ಕೆ ಮೂರನೇ ಜಗತ್ತಿನ ದೇಶಗಳಲ್ಲಿ 'ಮಾದರಿ' ದೇಶ. ಸಾಮ್ರಾಜ್ಯಶಾಹಿ ಪ್ರತಿನಿಧಿಗಳು ಅದು ಏಶ್ಯನ್ ಹುಲಿಗಳಲ್ಲಿ ಒಂದು ಎಂದೆಲ್ಲಾ ಹೇಳುವುದುಂಟು. ಆದರೆ ನಿಜವಾದ ಪರಿಸ್ಥಿತಿ ನೋಡಿದರೆ ಕೊರಿಯಾದ ಆರ್ಥಿಕ 80ರ ದಶಕದ ಮೊದಲ ಆರ್ಧದಲ್ಲಿ ಬಿಟ್ಟರೆ, ಈಗ ಅಷ್ಟೇನೂ ಆರೋಗ್ಯಕರವಾಗಿಲ್ಲ. ಅದರಲ್ಲೂ ರಫ್ತು-ಆಧಾರಿತ ಆರ್ಥಿಕಕ್ಕೆ ಕಾರ್ಮಿಕರ ಹಕ್ಕುಗಳ ಧಮನ ಪೂರ್ವಭಾವಿ ಅಗತ್ಯ ಎಂಬುದಕ್ಕೆ ಒಳ್ಳೆ ಉದಾಹರಣೆ.

ದಕ್ಷಿಣ ಕೊರಿಯಾದಲ್ಲಿ ಟ್ರೇಡ್ ಯೂನಿಯನ್‌ಗಳ ದಮನ, ಅವುಗಳನ್ನು ಕುಣಿಸುವ ಪ್ರಯತ್ನ ಇತರ ಎಲ್ಲಾ ಸಾಮ್ರಾಜ್ಯಶಾಹಿ ಕಪಿಮುಷ್ಟಿಯಲ್ಲಿರುವ ಸರ್ವಾಧಿಕಾರಿ ಸರಕಾರಗಳಿರುವಲ್ಲಿರುವಂತೆ ಸಾಮಾನ್ಯ. ಈವರೆಗೆ ಕೊರಿಯನ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್(KFTU) ಪ್ರಮುಖ ಟ್ರೇಡ್ ಯೂನಿಯನ್ ಕೇಂದ್ರವಾಗಿತ್ತು. ಇದು ಸರಕಾರದ ಕೃಪಾಪೋಷಿತ ಟ್ರೇಡ್ ಯೂನಿಯನ್ ಎಂದು ಎಲ್ಲರಿಗೂ ಗೊತ್ತು. KFTU ನ ನಿಜವಾದ ಬಲ ಏನಿಲ್ಲದಿದ್ದರೂ, ಅಧಿಕೃತ ಅಂಕೆ ಸಂಖ್ಯೆಗಳ ಪ್ರಕಾರ ಅದು ಅತಿ ದೊಡ್ಡಟ್ರೇಡ್ ಯೂನಿಯನ್ ಕೇಂದ್ರವಾಗಿತ್ತು. ಆದರೆ ಅದಕ್ಕೆ ಸೇರಿರುವ ಟ್ರೇಡ್ ಯೂನಿಯನ್‌ಗಳಲ್ಲಿ ಅತ್ಯಂತ ಸಮರಶೀಲ ಯೂನಿಯನ್‌ಗಳಿಂದ, ಅತ್ಯಂತ ಮ್ಯಾನೇಜ್‌ಮೆಂಟ್- ಕೈಗೊಂಬೆ ಯೂನಿಯನ್‌ಗಳವರೆಗೆ ಎಲ್ಲಾ ತರಹದ ಯೂನಿಯನ್‌ಗಳಿವೆ. ಇತರ ಎರಡು ಟ್ರೇಡ್ ಯೂನಿಯನ್ ಕೇಂದ್ರಗಳಾದ ಕೊರಿಯನ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (KTUC) ಮತ್ತು ಕೊರಿಯನ್ ಕಾನ್ಫೆಡರೇಶನ್ ಆಫ್ ಇಂಡಿಪೆಂಡೆಂಟ್ ಇಂಡಸ್ಟ್ರೀಯಲ್ ಫೆಡರೇಶನ್(KCIIF) ನಿಜವಾಗಿ KFTU ಗಿಂತಲೂ ಪ್ರಬಲ ಸಂಘಟನೆಯಾಗಿದ್ದರೂ ಅವು ಸರಕಾರದ ದಮನ, ಅಡ್ಡಗಾಲುಗಳಿಂದಾಗಿ ವಿಸ್ತರಿಸುವುದು ಸಾಧ್ಯವಾಗಿರಲಿಲ್ಲ. ಆದರೂ ಕಾರ್ಮಿಕರ ಮೇಲೆ ಅವುಗಳ ಪ್ರಭಾವ ಹೆಚ್ಚುತ್ತಿವೆ. ಸರಕಾರದ ಅಡ್ಡಗಾಲು, ದಮನಗಳಿದ್ದಾಗ್ಯೂ ಟ್ರೇಡ್ ಯೂನಿಯನ್ ಕಾರ್ಯಾಚರಣೆಗಳು ಹೆಚ್ಚುತ್ತಿವೆ. 1986ರಿಂದ 92ರವರೆಗೆ 25 ಲಕ್ಷ ಕಾರ್ಮಿಕರು ಭಾಗವಹಿಸಿದ ಎಂಟು ಸಾವಿರಕ್ಕೂ ಹೆಚ್ಚು ಮುಷ್ಕರಗಳು ನಡೆದವು. ಕಾರ್ಮಿಕವರ್ಗ ತನ್ನ ವರ್ಗಹಿತಾಸಕ್ತಿ ಹಾಗೂ ಸ್ವಾತಂತ್ರ್ಯ ಕಾಪಾಡಲು ಹೋರಾಟಕ್ಕಿಳಿದಿದೆ. ಸರಕಾರಿ ಕೃಪಾಪೋಷಿತ ಟ್ರೇಡ್ ಯೂನಿಯನ್ ಸಂಘಟನೆಗಳು ಈ ಹೋರಾಟಕ್ಕೆ ಅಡ್ಡವಾಗಿ ನಿಂತರೆ ಅವುಕೊಚ್ಚಿ ಹೋಗುವುದು ಅಥವಾ ಬದಲಾಗುವುದು ಖಚಿತ.

ಕೊರಿಯನ್ ಟ್ರೇಡ್ ಯೂನಿಯನ್ ಚಳುವಳಿಯಲ್ಲೇ, ಅತ್ಯಂತ ಗಮನಾರ್ಹ ಬದಲಾವಣೆಗಳು ಆರಂಭವಾಗಿ KTUC, KCIIF ಮತ್ತು ಇತರ ಹಲವು ಸ್ವತಂತ್ರ ಯೂನಿಯನ್‌ಗಳು ಒಂದಾಗಿ ಒಂದು ಹೊಸ ಟ್ರೇಡ್ ಯೂನಿಯನ್ ಕೇಂದ್ರ 1995ರ ಮೇ ದಿನದಂದು ಅಸ್ತಿತ್ವಕ್ಕೆ ಬರುವುದು ಎಂದು ನಿರ್ಧರಿಸಲಾಗಿದೆ. ನವಂಬರ್ 13ರಂದು 5 ಲಕ್ಷ ಕಾರ್ಮಿಕರು ಭಾಗವಹಿಸಿದ ಭಾರಿ ರ್‍ಯಾಲಿಯಲ್ಲಿ ಇದಕ್ಕಾಗಿ ಒಂದು ಸಿದ್ಧತಾ ಸಮಿತಿಯ ರಚನೆಯನ್ನು ಘೋಷಿಸಲಾಯಿತು. ಮೇ ದಿನದಂದು ಕೊರಿಯಾದ ಹೊಸಅತ್ಯಂತ ದೊಡ್ಡ ಸ್ವತಂತ್ರ ಟ್ರೇಡ್ ಯೂನಿಯನ್ ಕೊರಿಯಾದ ಕಾರ್ಮಿಕರ ಚರಿತ್ರೆಯಲ್ಲೇ ಅತಿ ದೊಡ್ಡ ರ್‍ಯಾಲಿಯಲ್ಲಿ ಉದಯಗೊಳ್ಳಲಿದೆ. ಕೊರಿಯಾದಂತೆ ಭಾರತವನ್ನು ಏಶ್ಯಾದ ಹುಲಿ ಮಾಡುವ ಕನಸು ಹೊತ್ತಿರುವವರೆಗೆ ಟ್ರೇಡ್ ಯೂನಿಯನ್ ದಮನ ಆರಂಭಿಸುವವರಿಗೆ ಇದು ಕಣ್ಣು ತೆರೆಸಬೇಕು. ನಮ್ಮ ಟ್ರೇಡ್ ಯೂನಿಯನುಗಳಿಗೆ ಇದು ಸ್ಫೂರ್ತಿಯಾಗಬೇಕು.

ಬೊಸ್ನಿಯ ಶಾಂತಿ ಉಳಿಯುವುದೇ?

ಹೊಸ ವರ್ಷದ ಮೊದಲ ದಿನದಂದು ಒಪ್ಪಲಾದ ನಾಲ್ಕು ತಿಂಗಳ ಕದನ ವಿರಾಮ ಈವರೆಗೆ ಉಳಿದುಕೊಂಡು ಬಂದಿದೆ. ಆದರೆ ಈ ಅವಧಿ ಪೂರ್ತಿ ಉಳಿಯುವುದೇ ಎಂಬುದು ಇನ್ನೂ ಪ್ರಶ್ನೆಯಾಗಿ ಉಳಿದಿದೆ. ಮಾಜಿ ಯುಗೋಸ್ಲಾವಿಯಾದ ವಿವಿಧ ಪ್ರದೇಶಗಳಲ್ಲಿ ಕಳೆದ ಮೂರು-ನಾಲ್ಕು ವರ್ಷಗಳಿಂದ ನಡೆಯುತ್ತಿರುವ ಅಂತಃಕಲಹಕ್ಕೆ ದೊಡ್ಡ ಕಾರಣ ಯುರೋಪಿನ ಸಾಮ್ರಾಜ್ಯಶಾಹಿಗಳ ಮೂಗು ತೂರಿಸುವಿಕೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದ್ದಂತೆ, ಇದು ನಿಲ್ಲದೆ ನಿಜವಾದ ಶಾಂತಿ ಮರಳುವುದು ಕಷ್ಟ ಸಾಧ್ಯ ಎಂಬುದು ಸ್ಪಷ್ಟವಾಗುತ್ತಿದೆ. ಅಮೇರಿಕ ವಿಶ್ವಸಂಸ್ಥೆ ಹಾಗೂ ಯುರೋಪಿನ ಪ್ರಬಲ ದೇಶಗಳು ತಮ್ಮ ತಮ್ಮದೇ ರೀತಿಯಲ್ಲಿ ಒಪ್ಪಂದಗಳನ್ನು ಹೇರುತ್ತಾ ಬಂದಿದ್ದು, ಅವರ ಪ್ರಾಮಾಣಿಕತೆ ಬಗ್ಗೆ ಎಲ್ಲರಿಗೂ ಸಂಶಯ. ಇದರಿಂದಾಗಿ ಈ ಪ್ರದೇಶಗಳಲ್ಲಿ ಪರಿಸ್ಥಿತಿ ಉಲ್ಬಣಿಸುತ್ತಾ ಬಂದಿದೆ. ಈಗಿನ ಒಪ್ಪಂದ ಸಹ ಯುರೋಪಿನ ಐದು ದೇಶಗಳ ಸಂಪರ್ಕ ಗುಂಪು ಹೇರಿದ್ದು. ಯಾವ ಜನಾಂಗೀಯ ಗುಂಪು ಕೂಡಾ ಇದರಿಂದ ಸಂತುಷ್ಟವಾಗಿಲ್ಲ. ಈ ಶಾಂತಿ ಪ್ರಸ್ತಾವ-ವಿಶ್ವ ಸಂಸ್ಥೆಯ ಬಾಂಬ್ ದಾಳಿ ಬೆದರಿಕೆ ಹಾಗೂ ತರಾತುರಿಯಿಂದ ಇನ್ನೂ ಹೆಚ್ಚಿನ ಘರ್ಷಣೆಗೆ ಎಡೆಕೊಟ್ಟಿತ್ತು. ಮಾಜಿ ಅಮೇರಿಕನ್ ಅಧ್ಯಕ್ಷ ಕಾರ್ಟರ್‌ರ ಭೇಟಿಯಿಂದ ಪರಿಸ್ಥಿತಿ ಸ್ವಲ್ಪ ತಿಳಿಯಾಗಿದ್ದು, ಈಗಿನ ಕದನ ವಿರಾಮಕ್ಕೆ ಅನುವು ಮಾಡಿಕೊಟ್ಟಿದೆ. ಆದರೆ ನಿಜವಾದ ಶಾಂತಿ ಎಂಬುದು ಬಹು-ಜನಾಂಗೀಯ, ಬಹು ಧಾರ್ಮಿಕ ಜನತೆ ಭಿನ್ನಭಿನ್ನವಾಗಿ ಹೇಗೆ ಒಟ್ಟಿಗೆ ಬಾಳಬಹುದು ಎಂಬ ಬಗ್ಗೆ ಸೃಜನಾತ್ಮಕ ಯೋಜನೆಯಿಲ್ಲದೆ ಬರಲಾರದು. ಒಂದಲ್ಲ ಒಂದು ರೂಪದಲ್ಲಿ ಯುಗೋಸ್ಲಾವಿಯಾ ಫೆಡರೇಶನ್ ಸ್ಥಾಪಿಸದೆ ಇಂತಹ ಯೋಜನೆ ಕಷ್ಟಸಾಧ್ಯ.

ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ನೇತಾರ

ಕಾಮ್ರೇಡ್ ಜೋ ಸ್ಲೋವೋ ನಿಧನ

ದಕ್ಷಿಣ ಆಫ್ರಿಕಾ ವಿಮೋಚನಾ ಆಂದೋಲನದ ಹಿರಿಯ ಮುಖಂಡರಲ್ಲೊಬ್ಬ ಹಾಗೂ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷರಾಗಿದ್ದ ಕಾಮ್ರೇಡ್ ಜೋ ಸ್ಲೋವೋ ನಿಧನರಾಗಿದ್ದಾರೆ. ನೆಲ್ಸನ್ ಮಂಡೇಲಾರ ಮಧ್ಯಂತರ ಸರಕಾರದಲ್ಲಿ ಅವರು ವಸತಿ ಮಂತ್ರಿಯೂ ಆಗಿದ್ದರು.

ಕಾಮ್ರೇಡ್ ಜೋ ಸ್ಲೋವೋ ಹುಟ್ಟಿದ್ದು ಸೋವಿಯೆತ್ ಒಕ್ಕೂಟದ ಭಾಗವಾಗಿದ್ದ ಲಿಥುವೇನಿಯಾದಲ್ಲಿ- ಮೇ 23, 1926ರಂದು. ಬಾಲ್ಯ ಕಾಲದಲ್ಲೇ ಅವರು ದಕ್ಷಿಣ ಆಫ್ರಿಕಾಕ್ಕೆ ಬಂದರು.

ದಕ್ಷಿಣ ಆಫ್ರಿಕಾದಲ್ಲೇ ಬಿ.ಎ., ಎಲ್.ಎಲ್.ಬಿ. ತೇರ್ಗಡೆಯಾಗಿ 'ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್'ನಿಂದ ಎಲ್.ಎಲ್.ಎಂ. ಪದವಿ ಪಡೆದರು. ಅವರು ಒಬ್ಬ ಆಟೋರ್ನಿ ಅರ್ಹತೆ ಪಡೆದ ಅಡ್ವೋಕೇಟ್ ಆಗಿದ್ದರು.

ತಮ್ಮ 15ನೇ ವಯಸ್ಸಿನಲ್ಲೇ ಕಾಮ್ರೇಡ್ ಜೋ ಕಮ್ಯುನಿಸ್ಟ್ ಪಕ್ಷ ಸೇರಿ ಕೊನೆಯವರೆಗೂ ಆ ಪಕ್ಷದ ವಿಧೇಯ ಸದಸ್ಯರಾಗುಳಿದರು. 1940ರ, 50ರ ದಶಕಗಳಲ್ಲಿ ಅವರು ಕಾರ್ಮಿಕ ಸಂಘದ ಕಾರ್ಯಕರ್ತರಾಗಿ ಸಕ್ರಿಯರಾಗಿದ್ದರು. ಮುಖ್ಯವಾಗಿ ರಾಸಾಯನಿಕ ಉದ್ದಿಮೆಯಲ್ಲಿ ಕಾರ್ಮಿಕರನ್ನು ಸಂಘಟಿಸಿದರು. ಎ.ಎನ್.ಸಿ. ವಿಮೋಚನಾ ಸೇನೆ 'ಉಮ್ ಖೊಂಟೋವಿಸಿಜ್ವೆ'ಯಲ್ಲಿ ಮತ್ತು ಕಮ್ಯುನಿಸ್ಟ್ ಪಕ್ಷದ ಉನ್ನತ ಮುಖಂಡತ್ವದಲ್ಲಿ ಸಕ್ರಿಯರಾಗಿದ್ದ ಅವರು ಎ.ಎನ್.ಸಿ., ಕಮ್ಯುನಿಸ್ಟ್ ಪಕ್ಷ ಮತ್ತು ಕಾರ್ಮಿಕ ಸಂಘಗಳ ತ್ರಿಪಕ್ಷೀಯ ಮೈತ್ರಿಕೂಟ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇದರಿಂದಾಗಿ ವರ್ಣದ್ವೇಷಿ ಆಳ್ವಿಕೆಯ ಅಂತ್ಯದಲ್ಲಿ ಅವರದ್ದು ಮಹತ್ವದ ಪಾತ್ರ. ವರ್ಣದ್ವೇಷಿ ಆಡಳಿತಕ್ಕೆ ಅವರು ಪ್ರಥಮ ಶತ್ರುವಾಗಿದ್ದರು. ಆಡಳಿತ ಸದಾ ಅವರ ಬೇಟೆಯಲ್ಲಿತ್ತು. ಇದರ ಭಾಗವಾಗಿಯೇ 1982ರಲ್ಲಿ ವರ್ಣದ್ವೇಷಿ ಗುಪ್ತಚರ ವಿಭಾಗ ಕಳಿಸಿದ ಪಾರ್ಸೆಲ್ ಬಾಂಬ್‌ನಿಂದ ಅವರ ಮೊದಲ ಪತ್ನಿ ರೂಥ್ ಫಸ್ಟ್‌ರವರ ಹತ್ಯೆಯಾಯಿತು. ಆದರೂ ಧೃತಿಗೆಡದೆ ಅವರು ಹೋರಾಟದ ನೇತೃತ್ವ ವಹಿಸಿದರು.

ತಲೆಮರೆಸಿಕೊಂಡಿದ್ದಾಗ ಅವರು ಉಮ್ ಖೋಂಟೋ ವಿ ಸಿಜ್ವೆಯ ಸೇನಾಧಿಪತಿಗಳಾಗಿ ದುಡಿದರು. 1986ರಿಂದ 1991ರ ನಡುವೆ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ 1991ರಿಂದ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಎ.ಎನ್.ಸಿ.ಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು.

ಅವರು ಹಲವು ಕೃತಿಗಳನ್ನು ಸಂಪಾದಿಸಿದರು, ರಚಿಸಿದರು. ಅವುಗಳಲ್ಲಿ ಪ್ರಮುಖವಾದುದು "ಆಫ್ರಿಕಾ ಖಂಡದ ದಕ್ಷಿಣ ಭಾಗ", "ಕ್ರಾಂತಿಯ ರಾಜಕೀಯ" ಮತ್ತು "ಸಮಾಜವಾದ ವಿಫಲಗೊಂಡಿದೆಯೇ?" ಇವು ದೇಶ-ವಿದೇಶಗಳಲ್ಲಿ ಗಮನ ಸೆಳೆದ ಕೃತಿಗಳು. "ದಿ ಆಫ್ರಿಕನ್ ಕಮ್ಯುನಿಸ್ಟ್" ಪತ್ರಿಕೆಗೆ ನಿಯಮಿತವಾಗಿ ಲೇಖನಗಳನ್ನು ಕೊಡುತ್ತಿದ್ದರು.

ಗಡೀಪಾರಿನಿಂದ ಹಿಂತಿರುಗಿದ ಮೇಲೆ ಕಾಮ್ರೇಡ್ ಜೋ ಪ್ರಜಾಸತ್ತಾತ್ಮಕ ದಕ್ಷಿಣ ಆಫ್ರಿಕಾದ ರಚನೆಗಾಗಿ ನಡೆದ CODESA ಮಾತುಕತೆಗಳಲ್ಲಿ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ನಿಯೋಗದ ಮುಖ್ಯಸ್ಥರಾಗಿದ್ದರು. ನಂತರ ನಡೆದ ಬಹುಪಕ್ಷೀಯ ಮಾತುಕತೆಗಳಲ್ಲೂ ಅವರು ಭಾಗವಹಿಸಿದರು. ಎ.ಎನ್.ಸಿ. ಮತ್ತು ಹಿಂದಿನ ಸರಕಾರ ಹಾಗೂ ಇತರ ಪಕ್ಷಗಳ ನಡುವೆ ದ್ವಿಪಕ್ಷೀಯ, ತ್ರಿಪಕ್ಷೀಯ ಮಾತುಕತೆಗಳಲ್ಲೂ ಅವರು ಮಹತ್ವದ ಪಾತ್ರ ವಹಿಸಿದರು.

ಹೊಸ ಸರಕಾರದಲ್ಲಿ ವಸತಿ ಮಂತ್ರಿಯಾಗಿ ಕಾಮ್ರೇಡ್ ಜೋ ಕಮ್ಯುನಿಸಂ ತನಗೆ ಒಂದು ಕುರುಡು ಸಿದ್ಧಾಂತವಲ್ಲ ಎಂದು ಸಾಬೀತು ಪಡಿಸಿದರು. ವಸತಿ ರಂಗದಲ್ಲಿ ವ್ಯಾಪಾರಸ್ಥರಿಂದ ಹಿಡಿದು ಕೊಳೆಗೇರಿ ನಿವಾಸಿಗಳವರೆಗೆ ವಿವಿಧ ಜನವಿಭಾಗಗಳೊಡನೆ ಉತ್ತಮ ಸಂಪರ್ಕ ಏರ್ಪಡಿಸಿಕೊಳ್ಳುವಲ್ಲಿ ಸಫಲರಾದ ಅವರು ಪರಸ್ಪರ ವಿರೋಧಿಸುತ್ತಿರುವ ಶಕ್ತಿಗಳನ್ನು ನಿಕಟ ತಂದು ದೇಶದ ಪುನರ್ರಚನೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿದರು.

ಕಾಮ್ರೇಡ್ ಜೋರವರು ತಮ್ಮ ಎರಡನೇ ಪತ್ನಿ ಹೆಲೆನಾ ಹಾಗೂ ಮೂವರು ಹೆಣ್ಣು ಮಕ್ಕಳನ್ನು ಆಗಲಿದ್ದಾರೆ. ಹೆಲೆನಾ ರವರು ಎ.ಎನ್.ಸಿ. ಭೂ ಆಯೋಗದಲ್ಲಿ ಸಕ್ರಿಯರಾಗಿರುವ ಮಹಿಳೆ.

ಸಿಪಿಐ(ಎಂ) ಶ್ರದ್ಧಾಂಜಲಿ

ಕಾಮ್ರೇಡ್ ಜೋ ಸ್ಲೋವೋ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಆಂದೋಲನದ, ವಿಮೋಚನಾ ಹೋರಾಟದ ಅತ್ಯುತ್ತಮ ಪರಂಪರೆಯ ಪ್ರತೀಕವಾಗಿದ್ದರು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಶ್ರದ್ಧಾಂಜಲಿ ಅರ್ಪಿಸುತ್ತಾ ಹೇಳಿದೆ.

ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ, ನಂತರ ಅಧ್ಯಕ್ಷರಾಗಿ ಅವರು ದಕ್ಷಿಣ ಆಫ್ರಿಕಾದ ಕಾರ್ಮಿಕ ವರ್ಗದ ಈ ಸಮರಧೀರ ಬಹುಜನಾಂಗೀಯ ಪಕ್ಷಕ್ಕೆ ಅದರ ಅತ್ಯಂತ ಕ್ಲಿಷ್ಟ ಹಾಗೂ ಕಷ್ಟದ ಘಟ್ಟದಲ್ಲಿ ಮುಖಂಡತ್ವ ನೀಡಿದರು.

ಕಾಮ್ರೇಡ್ ಸ್ಲೋವೋ ಕಳೆದ ಕೆಲವು ವರ್ಷಗಳಿಂದ ಕ್ಯಾನ್ಸರ್‌ನಿಂದ ನರಳುತ್ತಿದ್ದರೂ ದಕ್ಷಿಣ ಆಫ್ರಿಕಾದ ಇತಿಹಾಸದ ಒಂದು ನಿರ್ಣಾಯಕ ಘಟ್ಟದಲ್ಲಿ ಧೈರ್ಯದಿಂದ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದರು ಎಂದು ಹೇಳಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅವರ ನಿಧನ ದಕ್ಷಿಣ ಆಫ್ರಿಕಾದ ಜನತೆಗೆ, ಕಮ್ಯುನಿಸ್ಟ್ ಪಕ್ಷಕ್ಕೆ ಮತ್ತು ಎ.ಎನ್.ಸಿ.ಗೆ ದೊಡ್ಡ ನಷ್ಟ ಎಂದು ವರ್ಣಿಸುತ್ತಾ "ಈ ಶ್ರೇಷ್ಠ ನೇತಾರ, ದೇಶಪ್ರೇಮಿ ಹಾಗೂ ಮಾನವತಾವಾದಿ"ಗೆ ಸಿಪಿಐ(ಎಂ)ನ ಗೌರವ ಪೂರ್ಣ ಶ್ರದ್ಧಾಂಜಲಿ ಅರ್ಪಿಸಿದೆ.

ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷದ ಶ್ರದ್ಧಾಂಜಲಿ

ಕಾಂ.ಜೋ ಸ್ಲೋವೋರ ನಿಧನ ಅವರ ಕುಟುಂಬಕ್ಕೆ ಎಂತಹ ನಷ್ಟವೋ, ಅಷ್ಟೇ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ (SACP)ಕ್ಕೆ ಹಾಗೂ ಒಟ್ಟಾರೆಯಾಗಿ ದಕ್ಷಿಣ ಆಫ್ರಿಕಾಕ್ಕೂ ದೊಡ್ಡ ನಷ್ಟ ಎಂದು ಎಸ್.ಎ.ಸಿ.ಪಿ. ಅಗಲಿದ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸಿದೆ.

"ಅವರು ನಮ್ಮ ವಿಮೋಚನಾ ಹೋರಾಟಕ್ಕೆ, ನಮ್ಮ ಪಕ್ಷಕ್ಕೆ ಒಂದು ಕಟ್ಟುನಿಟ್ಟಾದ ಬೌದ್ಧಿಕತೆಯನ್ನು, ವಾಸ್ತವತೆಯ ಒಂದು ಬಲವಾದ ಅರಿವನ್ನು ಹಾಗೂ ಒಂದು ತೀಕ್ಷ್ಣ ಜಾಣ್ಮೆಯನ್ನು ನೀಡಿದರು. ಈ ಗುಣಗಳನ್ನು ದಕ್ಷಿಣ ಆಫ್ರಿಕಾದ ವ್ಯಾಪಕ ಜನಸಮುದಾಯ ಅವರ ಜೀವನದ ಕೊನೆಗಾಲದಲ್ಲಷ್ಟೇ ಕಾಣುವುದು ಸಾಧ್ಯವಾಯಿತು ಎಂಬುದು ಒಂದು ದುರಂತ" ಎಂದು ಎಸ್.ಎ.ಸಿ.ಪಿ. ಹೇಳಿದೆ.

ಕಾಮ್ರೇಡ್ ಜೋ ಸ್ಲೋವೋ ಎಂದೂ ತಮ್ಮ ನಂಬಿಕೆಗಳ ಬಗ್ಗೆ ಕುರುಡಾಗಿರಲಿಲ್ಲ, ಸದಾ ತನ್ನ ಅಭಿಪ್ರಾಯಗಳನ್ನು ಬದಲಿಸಲು ಸಿದ್ಧವಿರುತ್ತಿದ್ದರು ಎಂದು ನೆನಪಿಸಿಕೊಂಡಿರುವ ಎಸ್.ಎ.ಸಿ.ಪಿ. ಅವರ ಕೃತಿ "ಸಮಾಜವಾದ ವಿಫಲಗೊಂಡಿದೆಯೇ?" ಅಂತರರಾಷ್ಟ್ರೀಯವಾಗಿ ಸಮಾಜವಾದದ ನವೀಕರಣಕ್ಕೊಂದು ಮೈಲಿಗಲ್ಲಿನಂತಿರುವ ಕೊಡುಗೆ ಎಂದಿದೆ.



KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ

ಉದ್ಯೋಗಾವಕಾಶ ಕಡಿತ ಮಾಡುವ ಸರಕಾರೀ ನೀತಿ ಬಯಲಿಗೆ

ಭಾರತೀಯ ಕಾರ್ಮಿಕ ಸಮ್ಮೇಳನ ಪ್ರತಿ ವರ್ಷ ಸೇರಬೇಕಾದ ಕಾರ್ಮಿಕ ಸಂಘಗಳು, ಉದ್ದಿಮೆ ಮಾಲಿಕರು ಮತ್ತು ಸರಕಾರ ಭಾಗವಹಿಸುವ ತ್ರಿಪಕ್ಷೀಯ ಸಮ್ಮೇಳನ. ಸರಕಾರ ಕ್ರಮೇಣ ಈ ಸಮ್ಮೇಳನದ ಮಹತ್ವವನ್ನು ಕಮ್ಮಿ ಮಾಡಲು ಪ್ರಯತ್ನಿಸುತ್ತಾ ಇದೆ. ಆದರೂ ಈ ಜನವರಿ 3 ಮತ್ತು 4ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ 31ನೇ ಅಧಿವೇಶನದಲ್ಲಿ ಆಳುವ ಪಕ್ಷದ ನೇತೃತ್ವದ ಇಂಟಕ್ ಕೂಡಾ ಸೇರಿದಂತೆ ಎಲ್ಲಾ ಕಾರ್ಮಿಕ ಸಂಘಗಳು ಸರಕಾರದ ಆರ್ಥಿಕ ನೀತಿಗಳನ್ನು ಕಟುವಾಗಿ ಟೀಕಿಸಿದ್ದು ಸರಕಾರದ ವಂಚನೆಯನ್ನು ಬಯಲಿಗೆಳೆದಿಟ್ಟಿದೆ.

ಸಮ್ಮೇಳನದಲ್ಲಿ ಸರಕಾರದ ಪರವಾಗಿ ಭಾಗವಹಿಸಿದ್ದ ಹಣಕಾಸು ಮಂತ್ರಿಗಳು, ಕೈಗಾರಿಕಾ ಮಂತ್ರಿಗಳು ಮತ್ತು ಕಾರ್ಮಿಕ ಮಂತ್ರಿಗಳು ಹೊಸ ಆರ್ಥಿಕ ನೀತಿಗಳಿಂದ ಒಟ್ಟು ಆಂತರಿಕ ಉತ್ಪಾದನೆ ಹೆಚ್ಚಿದೆ, ಇದರಿಂದ ಹೆಚ್ಚು ಉದ್ಯೋಗಾವಕಾಶಗಳು ನಿರ್ಮಾಣವಾಗುತ್ತವೆ ಎಂದು ವಾದಿಸಲು ಪ್ರಯತ್ನಪಟ್ಟರೂ ತಮ್ಮ ವಾದದ ಟೊಳ್ಳುತನದ ಅರಿವು ಈ ಮಂತ್ರಿಗಳಿಗೂ ಇದ್ದಂತಿತ್ತು. ಏಕೆಂದರೆ ಉದ್ಯೋಗಾವಕಾಶದ ಬಗ್ಗೆ ಚರ್ಚೆಯನ್ನು ಅಜೆಂಡಾದಲ್ಲಿ ಸೇರಿಸಿದ್ದದ್ದು ಸ್ಥಾಯೀ ಕಾರ್ಮಿಕ ಸಮಿತಿಯ ಒತ್ತಾಯದಿಂದಲೇ. ಈ ಬಗ್ಗೆ ಸಮ್ಮೇಳನದ ಎರಡನೇ ದಿನ ಯೋಜನಾ ಆಯೋಗದ ಉಪಾಧ್ಯಕ್ಷ ಪ್ರಣಬ್ ಮುಖರ್ಜಿ ಮತ್ತು ಯೋಜನಾ ಆಯೋಗದ ಸದಸ್ಯರಾದ ಮೀರಾ ಸೇಠ್ ಮಾತನಾಡುವುದಿತ್ತು. ಆದರೆ ಮೊದಲನೆ ದಿನವೇ ಮೂರೂ ಮಂತ್ರಿಗಳು ತಮ್ಮ ಭಾಷಣದಲ್ಲಿ ಅದನ್ನು ಪ್ರಸ್ತಾಪಿಸಿದ್ದು ಈ ರಂಗದಲ್ಲಿನ ನಿರಾಶಾ ಭಾವನೆ ಅವರನ್ನು ಕಾಡುತ್ತಿರುವಂತಿತ್ತು.

ಕಾರ್ಮಿಕ ಮಂತ್ರಿಗಳು ಉದ್ಯೋಗಾವಕಾಶ ಹೆಚ್ಚುವ ಬಗ್ಗೆ ಹೇಳಿದರೂ ಉದಾರೀಕರಣ ಮತ್ತು ಕೆಲಸದ ರಕ್ಷಣೆ ಒಟ್ಟೊಟ್ಟಿಗೇ ಸಾಗಲು ಸಾಧ್ಯವಿಲ್ಲ ಎಂದು ಹೇಳುವಾಗ ತಮ್ಮ ನೀತಿಗಳ ನಿಜಸ್ವರೂಪವನ್ನು ತಾವೇ ಬಯಲಿಗೆಳೆದರು. ರೋಗಗ್ರಸ್ತ ಉದ್ದಿಮೆಗಳನ್ನು ಸರಿಪಡಿಸಲು ಪ್ರಯತ್ನಿಸುವುದಕ್ಕಿಂತ ಅವನ್ನು ಮುಚ್ಚಿ ಹೊಸ ಉದ್ದಿಮೆಗಳ ಬಗ್ಗೆ ಯೋಚಿಸುವುದೇ ಒಳ್ಳೆಯದು, ಹೆಚ್ಚುವರಿ ಶ್ರಮಶಕ್ತಿ ಸರಕಾರದ ಮುಂದಿರುವ ಸಮಸ್ಯೆ ಅದಕ್ಕಾಗಿ ಸ್ವಯಂನಿವೃತ್ತಿ ಯೋಜನೆಯನ್ನು ಕಾರ್ಮಿಕರ ಹಿತಾಸಕ್ತಿಯಿಂದಲೇ ತರಲಾಗಿದೆ, ಹೆಚ್ಚು ಉದ್ಯೋಗಾವಕಾಶಕ್ಕೆ ದುಡಿಮೆಯ ಅವಧಿಯನ್ನು, ಅದಕ್ಕೆ ಅನುಗುಣವಾಗಿ ವೇತನವನ್ನು ಕಡಿತ ಮಾಡಬೇಕು ಎಂಬ ಕಾರ್ಮಿಕ ಮಂತ್ರಿಗಳ ಅಮೋಘ ಮಾತುಗಳು ಸರಕಾರದ ಆರ್ಥಿಕ ನೀತಿ ಉದ್ಯೋಗಾವಕಾಶ ನಿರ್ಮಾಣಕ್ಕೆ ಏನು ಮಾಡಿದೆಯೆಂಬುದರ ಸಂಕೇತವಾಗಿತ್ತು.

ಮೂಲಭೂತ ಹಕ್ಕುಗಳ ಮೇಲೆ ಧಾಳಿ ಸರಕಾರದ ನಿಜ ಆಶಯ

ಚರ್ಚೆಯಲ್ಲಿ ಭಾಗವಹಿಸಿದ ಎಲ್ಲಾ ಕಾರ್ಮಿಕ ಸಂಘಟನೆಗಳ ಮುಖಂಡರು(ಇಂಟಕ್, ಬಿ.ಎಂ.ಎಸ್. ಕೂಡಾ ಸೇರಿದಂತೆ) ಸರಕಾರದ ವಾದಗಳನ್ನು ಅಂಕೆ-ಸಂಖ್ಯೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದರು. ಸಂಸತ್ತಿನ ಮುಂದೆ ತರಬೇಕೆಂದಿರುವ ಹೊಸ ಕೈಗಾರಿಕಾ ಸಂಬಂಧಗಳ ಶಾಸನದಲ್ಲಿ ರಾಮನುಜಂ ಸಮಿತಿಯ ಶಿಫಾರಸುಗಳನ್ನು ನಿರ್ಲಕ್ಷಿಸಿ ಬೇರೆಯೇ ಅಂಶಗಳನ್ನು ಸೇರಿಸಿರುವುದು, ಈ ಮಸೂದೆಯ ಕರಡು ತಯಾರಿಸುವ ಮೊದಲು ಕಾರ್ಮಿಕ ಸಂಘಗಳೊಡನೆ ಸಮಾಲೋಚನೆ ನಡೆಸಲಾಗುವುದು ಎಂಬ ವಚನವನ್ನು ಸರಕಾರ ಭಂಗ ಮಾಡಿದ್ದು ಎಲ್ಲಾ ಕಾರ್ಮಿಕ ಪ್ರತಿನಿಧಿಗಳ ತೀವ್ರ ಟೀಕೆಗೆ ಒಳಗಾಯಿತು. ಏಕೆಂದರೆ ವಿಶ್ವಬ್ಯಾಂಕ್-ಐ.ಎಂ.ಎಫ್.ನ ಒತ್ತಾಯಕ್ಕೆ ಮಣಿದು ಮೂಲಭೂತ ಕಾರ್ಮಿಕ ಸಂಘಟನೆಯ ಹಕ್ಕುಗಳ ಮೇಲೆ, ಸಾಮೂಹಿಕ ಚೌಕಾಶಿ ಹಕ್ಕಿನ ಮೇಲೆ ಧಾಳಿ ನಡೆಸುವುದು ಸರಕಾರದ ಉದ್ದೇಶ ಎಂದು ಕಾರ್ಮಿಕ ಮುಖಂಡರು ಟೀಕಿಸಿದರು. ಬಹಳ ಕಾಲದಿಂದ ಸರಕಾರದ ನಿರ್ಲಕ್ಷ್ಯದಿಂದ ನೆನೆಗುದಿಗೆ ಬಿದ್ದಿರುವ ತುಟ್ಟಿಭತ್ಯೆ, ಬೋನಸ್‌ಗಳ ಪ್ರಶ್ನೆಗಳನ್ನೂ ಎಲ್ಲಾ ಕಾರ್ಮಿಕ ಮುಖಂಡರು ಎತ್ತಿದ್ದರು.

ಕಾರ್ಮಿಕ ಸಂಘಟನೆಗಳ ಪರವಾಗಿ ಇಂಟಕ್‌ನ ಸಂಜೀವರೆಡ್ಡಿ, ಬಿ.ಎಂ.ಎಸ್.ನ ಆರ್.ಕೆ.ಭಕ್ತ್, ಹೆಚ್.ಎಂ.ಎಸ್.ನ ಶಾಂತಿ ಪಟೇಲ್, ಎಐಟಿಯುಸಿನ ಎ.ಬಿ.ಬರ್ಧನ್, ಸಿಐಟಿಯುನ ಡಾ.ಎಂ.ಕೆ.ಪಂಧೆ, ಇ.ಬಾಲಾನಂದನ್, ಚಿತ್ತಬ್ರತ ಮಜುಂದಾರ್, ಪಿ.ಕೆ.ಗಂಗೂಲಿ ಮಾತನಾಡಿ ಪಶ್ಚಿಮ ಬಂಗಾಳದ ಕಾರ್ಮಿಕ ಮಂತ್ರಿ ಶಾಂತಿ ಘಟಕ್ ಕೂಡಾ ಕಾರ್ಮಿಕ ಮುಖಂಡರ ವಾದಗಳನ್ನು ಎತ್ತಿ ಹಿಡಿದರು. ಇತರ ರಾಜ್ಯಗಳ ಕಾರ್ಮಿಕ ಮಂತ್ರಿಗಳು ಮತ್ತು ಮಾಲಕರ ಸಂಘಟನೆ CII ಪರವಾಗಿ ಹಲವು ಪ್ರತಿನಿಧಿಗಳು ಮಾತನಾಡಿದರು.

ಮಾಲಕರ ಪ್ರತಿನಿಧಿಗಳು ನಿರೀಕ್ಷೆಗೆ ಅನುಗುಣವಾಗಿ ಸರಕಾರದ ನೀತಿಗಳನ್ನು ಬೆಂಬಲಿಸಿದರೂ ನಿರುದ್ಯೋಗದ ಪ್ರಶ್ನೆಯ ಬಗ್ಗೆ ಅವರೂ ಆತಂಕ ವ್ಯಕ್ತಪಡಿಸಬೇಕಾಗಿ ಬಂತು. ಹಲವು ರಾಜ್ಯಗಳ ಕಾರ್ಮಿಕ ಮಂತ್ರಿಗಳೂ ಈ ಬಗ್ಗೆ ಆತಂಕ ವ್ಯಕ್ತಪಡಿಸಿದರು. ನಿರುದ್ಯೋಗದ ಬಗ್ಗೆ ಹೀಗೆ ವ್ಯಕ್ತಗೊಂಡ ಸಾರ್ವತ್ರಿಕ ಆತಂಕವೇ ಸರಕಾರದ ನೀತಿಗಳ ನಿಜರೂಪವನ್ನು ಈ ಸಮ್ಮೇಳನ ಬಯಲಿಗೆಳೆಯಿತು.

ಉದ್ಯೋಗ ನೀತಿ ಇದೆಯೇ?

ಉದ್ಯೋಗ ನೀತಿಯ ಬಗ್ಗೆ ಮಾತನಾಡಬೇಕಿದ್ದ ಯೋಜನಾ ಆಯೋಗದ ಉಪಾಧ್ಯಕ್ಷ ಪ್ರಣಬ್ ಮುಖರ್ಜಿಯವರಿಗೆ ಸಹಜವಾಗಿಯೇ ವಾಣಿಜ್ಯ ಮಂತ್ರಿಯಾಗಿ ಕಲ್ಕತ್ತೆಯಲ್ಲಿ ನಡೆಯುತ್ತಿದ್ದ ಮಾಲಕರ ಸಂಘಟನೆ CII ಸಮಾರಂಭದಲ್ಲಿ ಭಾಗವಹಿಸುವುದು ಮುಖ್ಯವಾಗಿತ್ತು. ಅವರು ಇಲ್ಲಿ ಭಾಗವಹಿಸಲಿಲ್ಲ, ಯೋಜನಾ ಆಯೋಗದ ಸದಸ್ಯೆ ಮೀರಾ ಸೇಠ್ ಮಾತ್ರ ಭಾಗವಹಿಸಿದ್ದರು. ಯೋಜನಾ ಆಯೋಗದ ಲೆಕ್ಕಾಚಾರದ ಪ್ರಕಾರ 2002 ಇಸ್ವಿ ವೇಳೆಗೆ ಉದ್ಯೋಗಾರ್ಥಿಗಳ ಸಂಖ್ಯೆ 9.4 ಕೋಟಿ ಆಗಬಹುದು. ಇವರಿಗೆ ಉದ್ಯೋಗ ನೀಡಲು ಭಾರೀ ಪ್ರಯತ್ನವನ್ನೇ ಮಾಡಬೇಕಾದೀತು ಎಂದು ಮೀರಾ ಸೇಠ್ ಹೇಳಿದರು. ಅದಕ್ಕೆ ಒಟ್ಟು ರಾಷ್ಟ್ರೀಯ ಉತ್ಪಾದನೆ ಶೇ. ೫.೮ ದರದಲ್ಲಿ ಏರಬೇಕಾಗುತ್ತದೆ. ಆದರೆ ೧೯೯೨ರಿಂದ ೧೯೯೬ರ ನಡುವೆ ಅದು ವಾರ್ಷಿಕವಾಗಿ ಶೇ. ೧.೯ ದರದಲ್ಲಷ್ಟೇ ಏರಿತು ಎಂದರು.

ವಾಸ್ತವ ಸಂಗತಿಯೆಂದರೆ ಸರಕಾರ ಒಂದು ಉದ್ಯೋಗ ನೀತಿಯ ಬಗ್ಗೆ ತಲೆಕೆಡಿಸಿಕೊಂಡೇ ಇಲ್ಲ, ಈ ಬಗ್ಗೆ ೨೯ನೇ ಅಧಿವೇಶನದಿಂದ ಆರಂಭಿಸಿ ಎಲ್ಲಾ ಕಾರ್ಮಿಕ ಸಂಘಗಳು ಮತ್ತೆ-ಮತ್ತೆ ಒತ್ತಾಯಿಸಿದರೂ ಸರಕಾರ ಆ ಕಡೆಗೆ ಗಮನವನ್ನೇ ಹರಿಸಿಲ್ಲ, ಯೋಜನಾ ಆಯೋಗದ ಮೇಲೆ ಹೇಳಿದ ಪ್ರಬಂಧ ಕೂಡಾ ಉದ್ಯೋಗ ನಿರ್ಮಾಣಕ್ಕೆ ಸರಕಾರದ ನಿರ್ದಿಷ್ಟ ನಿಲುವೇನು ಎಂದು ತಿಳಿಸಿಲ್ಲ, ಗ್ರಾಮೀಣ ನಿರುದ್ಯೋಗದ ಬಗ್ಗೆ ಅಂಕಿ-ಅಂಶಗಳನ್ನು ಕೂಡಾ ಸರಕಾರ ನೀಡಿಲ್ಲ, ವಾಸ್ತವವಾಗಿ ಇವನ್ನೆಲ್ಲಾ ಸೇರಿಸಿದರೆ ಈಗಲೇ ದೇಶದಲ್ಲಿ ನಿರುದ್ಯೋಗ ೧೧ ಕೋಟಿಯಿದೆ. ಹೀಗೆ ನಿರುದ್ಯೋಗ ಬೆಳೆಯುತ್ತಿರುವಾಗ ಹೊಸ ಆರ್ಥಿಕ ನೀತಿಗಳಿಂದ ಬಡತನದ ರೇಖೆಯ ಕೆಳಗೆ ಬದುಕುತ್ತಿರುವ ಜನಗಳ ಸಂಖ್ಯೆ ಕಮ್ಮಿಯಾಗಿದೆ ಅಂದರೆ ಬಡತನ ಕಮ್ಮಿಯಾಗಿದೆಯೆಂದರೆ ಯಾರು ನಂಬಲುಸಾಧ್ಯ ಎಂಬ ಕಾರ್ಮಿಕ ಮುಖಂಡರ ತೀಕ್ಷ್ಣ ಪ್ರಶ್ನೆಗೆ ಸರಕಾರದ ಬಳಿ ಉತ್ತರವಿಲ್ಲ.

ಸಮ್ಮೇಳನದಲ್ಲಿ ಸರಕಾರ ಒಂದು ಉದ್ಯೋಗ ನಿರ್ಮಾಣ ನೀತಿಯನ್ನು ರೂಪಿಸಬೇಕೆಂದು ಎಲ್ಲಾ ಕಾರ್ಮಿಕ ಸಂಘಗಳು ಒಕ್ಕೊರಲಿನಿಂದ ಮತ್ತೊಮ್ಮೆ ಒತ್ತಾಯಿಸಿದವು. ಈ ಸಮ್ಮೇಳನದ ಕರಡು ನಿರ್ಣಯದಲ್ಲಿ ಈ ಬೇಡಿಕೆಯನ್ನು ಎತ್ತಿ ಹಿಡಿಯುವ ಒಂದು ಪರಿಚ್ಛೇದವನ್ನು ಸೇರಿಸುವಲ್ಲಿ ಕಾರ್ಮಿಕ ಪ್ರತಿನಿಧಿಗಳು ಯಶಸ್ವಿಯಾದರು. ಕಾರ್ಮಿಕ ಪ್ರತಿನಿಧಿಗಳು ಬಯಸಿದ ಇನ್ನೂ ಹಲವು ತಿದ್ದುಪಡಿಗಳನ್ನು ಕಾರ್ಮಿಕ ಮಂತ್ರಿಗಳು ಒಪ್ಪಲೇ ಬೇಕಾಗಿ ಬಂತು.

ಕಾರ್ಮಿಕ ಮಟ್ಟ, ಬಾಲ ಕಾರ್ಮಿಕರು, ಪರಿಸರ ಪ್ರಶ್ನೆ ಇತ್ಯಾದಿಗಳನ್ನು ಅಂತರ್‍ರಾಷ್ಟ್ರೀಯ ವ್ಯಾಪಾರದೊಂದಿಗೆ ತಳಕು ಹಾಕುವುದನ್ನು ತಾವು ವಿರೋಧಿಸಿದರೂ ಭಾರತ ಸರಕಾರ ಈ ಎಲ್ಲಾ ಕಾರ್ಮಿಕ ಮಟ್ಟಗಳ(Labour Standard) ಜಾರಿಗೆ ತರಬೇಕು, ಕಾರ್ಮಿಕ ಸಂಘಗಳ ಚಟುವಟಿಕೆಗಳ ಹಾಗೂ ಸಾಮೂಹಿಕ ಚೌಕಾಶಿಯ ಹಕ್ಕುಗಳನ್ನು ಮಾನ್ಯ ಮಾಡಲೇಬೇಕು ಎಂದೂ ಕಾರ್ಮಿಕ ಪ್ರತಿನಿಧಿಗಳು ಒತ್ತಾಯಿಸಿದರು.

ಕಾಮ್ರೇಡ್ ಮಧು ಲಿಮೆಯೆ ನಿಧನಕ್ಕೆ ಪೊಲಿಟ್ ಬ್ಯೂರೋ ಶ್ರದ್ಧಾಂಜಲಿ

ಪ್ರಖ್ಯಾತ ಸಮಾಜವಾದಿ ಮುಖಂಡ ಮಧು ಲಿಮೆಯೆ ಜನವರಿ 8ರಂದು ನಿಧನರಾಗಿದ್ದಾರೆ. ಕಾಮ್ರೇಡ್ ಮಧು ಲಿಮೆಯೆ ದೇಶದ ಸಮಾಜವಾದಿ ಆಂದೋಲನದ ಒಬ್ಬ ಪ್ರಧಾನ ವ್ಯಕ್ತಿಯಾಗಿದ್ದರು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಹೇಳಿದೆ. ಲಿಮೆಯೆ ಸ್ವಾತಂತ್ರ್ಯ ಹೋರಾಟದ ಅಚ್ಚಿನಲ್ಲಿ ಬೆಳೆದ ಒಬ್ಬ ಮುಖಂಡರಾಗಿದ್ದರು. ಹಾಗೂ ಜನತೆಯ ಹಿತಾಸಕ್ತಿಗಳ ನಿರ್ಭೀತ ಪ್ರತಿಪಾದಕರಾಗಿದ್ದವರು. ಎಡಪಂಥೀಯ ರಾಜಕಾರಣದಲ್ಲಿ ಸಮಾಜವಾದಿ ಪ್ರವಾಹಕ್ಕೆ ಸೇರಿದ್ದ ಅವರಿಗೆ ಕಮ್ಯುನಿಸ್ಟರೊಂದಿಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನವನ್ನು ಮುನ್ನಡೆಸಲು ಅವರು ಕಮ್ಯುನಿಸ್ಟರೊಂದಿಗೆ ನಿಕಟ ಸಹಕಾರವನ್ನು ಪ್ರತಿಪಾದಿಸುತ್ತಿದ್ದವರು. 1973ರಲ್ಲಿ ಸಿಪಿಐ(ಎಂ) ಮತ್ತು ಸಮಾಜವಾದಿ ಪಕ್ಷದ ನಡುವೆ ಸಹಕಾರದ ಒಂದು ಒಪ್ಪಂದಕ್ಕೆ ಸಹಿ ಹಾಕಿದಾಗ ಅವರು ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದರು.

ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಮತ್ತು ಜಾತ್ಯಾತೀತತೆಯನ್ನು ಎತ್ತಿ ಹಿಡಿಯುವಲ್ಲಿ ಮಧು ಲಿಮೆಯೆ ಮಹತ್ವದ ಪಾತ್ರ ವಹಿಸಿದರು. ಸಂಸದೀಯ ಜೀವನದಲ್ಲಿ ಎಲ್ಲಾ ಕೇಂದ್ರ ಸರಕಾರಗಳ ಜನ-ವಿರೋಧಿ ನೀತಿಗಳ ವಿರುದ್ಧ ಸದಾ ಅವರದ್ದು ನಿರ್ಭಯ ಧ್ವನಿ.

ಇಂತಹ ಉನ್ನತ ಸಮಗ್ರತೆಯ, ಸಾರ್ವಜನಿಕ ಸೇವೆಗೆ ಮುಡಿಪಾಗಿಟ್ಟ ಒಬ್ಬ ಮುಖಂಡರ ಸಾವು ಪ್ರಜಾಪ್ರಭುತ್ವ ಶಕ್ತಿಗಳಿಗೊಂದು ದೊಡ್ಡ ನಷ್ಟ ಎಂದಿರುವ ಪೊಲಿಟ್‌ಬ್ಯೂರೋ ಅವರ ಹೆಂಡತಿ, ಮಗ ಹಾಗೂ ಕುಟುಂಬದ ಇತರ ಸದಸ್ಯರಿಗೆ ಹಾರ್ದಿಕ ಸಹಾನುಭೂತಿಯನ್ನು ವ್ಯಕ್ತಪಡಿಸಿದೆ.

ಹೊಸ ಆರ್ಥಿಕ ನೀತಿಗಳು ಮತ್ತು ಎಡರಂಗ ಸರಕಾರ

ಪುಟ 1ರಿಂದ

ಆಂದೋಲನ ಮತ್ತು ಪಕ್ಷ ಎಂದೂ ಯಾವ ರಾಜಿಯನ್ನೂ ಮಾಡಿಕೊಳ್ಳುವುದಿಲ್ಲ.

ಅದೇ ವೇಳೆಗೆ ಉದ್ದಿಮೆಯನ್ನು ಸಮಯುಬದ್ಧಗೊಳಿಸಬೇಕು, ಉತ್ಪಾದಕತೆಯನ್ನು ಹೆಚ್ಚಿಸಬೇಕು ಎಂಬ ಪ್ರಜ್ಞೆ ಉದ್ದಿಮೆಗಳ ಬೆಳವಣಿಗೆಗೆ ಅಗತ್ಯ. ಹೊಸ ತಂತ್ರಜ್ಞಾನದ ಅಳವಡಿಕೆಯನ್ನು ಈ ದೃಷ್ಟಿಕೋಣದಿಂದ ನೋಡಬೇಕು. ಅದೇ ವೇಳೆಗೆ ಹೆಚ್ಚಿನ ಉತ್ಪಾದಕತೆ ಮತ್ತು ಹೊಸ ತಂತ್ರಜ್ಞಾನದ ಹೆಸರಲ್ಲಿ ಕಾರ್ಮಿಕರು ಕೆಲಸ ಕಳಕೊಳ್ಳುವಂತೆ, ರಿಟ್ರೆಂಚ್‌ಮೆಂಟ್‌ಗೆ ಬಲಿಯಾಗದಂತೆ ನೋಡಿಕೊಳ್ಳಬೇಕು.

ಕಾರ್ಮಿಕ ವರ್ಗವನ್ನು ವಿಶ್ವಾಸಕ್ಕೆ ತಗೊಳ್ಳಬೇಕು

ಪಶ್ಚಿಮ ಬಂಗಾಳದ ಕಾರ್ಮಿಕ ಆಂದೋಲನದ ಮತ್ತು ಕಾರ್ಮಿಕ ಸಂಘಗಳ ಮುಂದೆ ಅಖಿಲ ಭಾರತ ಮಟ್ಟದಲ್ಲಿ ಶಕ್ತಿಗಳ ಬಲಾಬಲ ಹಾಗೂ ಒಂದು ನಿರ್ದಿಷ್ಟ ಉದ್ದಿಮೆಯಲ್ಲಿ ಪಶ್ಚಿಮ ಬಂಗಾಳದ ಹೊರಗೆ ಕಾರ್ಮಿಕ ವರ್ಗದ ಆಂದೋಲನದ ಶಕ್ತಿಯನ್ನೂ ಗಮನದಲ್ಲಿಟ್ಟುಕೊಂಡು ದೀರ್ಘ ಹೋರಾಟ ನಡೆಸಬೇಕಾದ ಕಷ್ಟದ ಕೆಲಸವಿದೆ. ಹಿಂದೆ ಕಂಪ್ಯೂಟರೀಕರಣ ಮತ್ತು ಇತರ ರಂಗಗಳ ಹೋರಾಟಗಳಲ್ಲಿ ಇಂತಹ ಅನುಭವ ಆಗಿವೆ. ಕಾರ್ಮಿಕ ವರ್ಗದ ಪಕ್ಷವಾಗಿ ಎಲ್ಲಾ ಕಷ್ಟದ ಸನ್ನಿವೇಶಗಳಲ್ಲಿ ಕಾರ್ಮಿಕರನ್ನು ವಿಶ್ವಾಸಕ್ಕೆ ತಗೊಂಡು ನಾವೇನು ಮಾಡಬಹುದು, ಮಾಡಲು ಸಾಧ್ಯ, ಎಲ್ಲಿಯವರೆಗೆ ಹೋರಾಟ ನಡೆಸಬಹುದು ಎಂದು ಅವರಿಗೆ ವಿವರಿಸಬೇಕಾದ್ದು ನಮ್ಮ ಪಕ್ಷದ ಕರ್ತವ್ಯ.

ಕೈಗಾರಿಕಾ ವಿಸ್ತರಣೆಯ ಹಾಗೂ ಪಶ್ಚಿಮ ಬಂಗಾಳಕ್ಕೆ ದೇಶೀ ಮತ್ತು ವಿದೇಶೀ ಖಾಸಗಿ ಬಂಡವಾಳವನ್ನು ಆಹ್ವಾನಿಸುವ ನೀತಿಗಳನ್ನು ಅನುಷ್ಠಾನಕ್ಕೆ ತರುವಾಗ ನಮ್ಮ ಸರ್ಕಾರ ಅಥವಾ ಇಲಾಖೆಗಳ ವಕ್ತಾರರು ಸರಕಾರ ಆರಂಭಿಸಿದ ಉದಾರೀಕರಣ ನೀತಿಗಳನ್ನು ಮತ್ತು ಆರ್ಥಿಕ ಸುಧಾರಣೆಗಳನ್ನು ಸಮರ್ಥಿಸುವ ಯಾವುದೇ ನೀತಿ ಹೇಳಿಕೆಗಳನ್ನು ಸಮ್ಮತಿಸದಂತೆ ಎಚ್ಚರ ವಹಿಸಬೇಕು. ಉದಾಹರಣೆಗೆ ಕೇವಲ ಸಂಪನ್ಮೂಲಗಳ ಅಭಾವದಿಂದಾಗಿ ಪ್ರಧಾನ ವಲಯಗಳಲ್ಲಿ ಮತ್ತು ಮೂಲಭೂತ ಸೌಲಭ್ಯಗಳ ವಲಯದಲ್ಲಿ ಖಾಸಗೀ ವಲಯಕ್ಕೆ ಅವಕಾಶ ನೀಡಬೇಕಾಗಿ ಬಂದಿದೆ ಎಂಬ ಕೇಂದ್ರದ ತರ್ಕವನ್ನು ನಾವು ಒಪ್ಪುವುದಿಲ್ಲ, ಈ "ಸಂಪನ್ಮೂಲದ ಅಭಾವ" ಎಂಬುದು ಕೇಂದ್ರದ ಹಿಂಡುವ ನೀತಿಯಿಂದಾಗಿ ರಾಜ್ಯ ಸರಕಾರಗಳ ಮಟ್ಟಿಗೆ ವಾಸ್ತವ ಸಂಗತಿ. ಆದರೆ ಕೇಂದ್ರ ಸರಕಾರದ ಬಗ್ಗೆ ಹಾಗೆ ಹೇಳಲು ಸಾಧ್ಯವಿಲ್ಲ. ಕೇಂದ್ರ ಸರಕಾರಕ್ಕೆ ಸಂಪನ್ಮೂಲಗಳಿದ್ದು, ಅವನ್ನು ಕ್ರೋಢೀಕರಿಸುವ ವ್ಯಾಪಕ ಹಾಗೂ ಸಮಗ್ರ ಅಧಿಕಾರಗಳೂ ಇವೆಯಾದರೂ ಅವನ್ನೆಲ್ಲಾ ಬಳಸಲು ಅದು ನಿರಾಕರಿಸುತ್ತದೆ. ಅದರ ಬದಲು ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡಕ್ಕೆ ಮಣಿಯುತ್ತದೆ. "ಸಂಪನ್ಮೂಲ ಅಭಾವ" ಸಮಗ್ರವಾಗಿ ವಿದ್ಯುತ್ ವಲಯದಲ್ಲಾಗಿರುವಂತೆ ಭಾರತೀಯ ತಂತ್ರಜ್ಞಾನವನ್ನು ಮತ್ತು ಉಪಕರಣಗಳನ್ನು ಬಳಸುವುದು ಅಗ್ಗವೆನಿಸುವ ವಲಯಗಳಲ್ಲಿ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅವಕಾಶ ನೀಡಲು ಒಡ್ಡುವ ನೆವಗಳಾಗಿರುತ್ತವೆ. ವಾಸ್ತವವಾಗಿ ವಿದ್ಯುತ್ ಉತ್ಪಾದನೆಗೆ ದೊಡ್ಡ ರಿಯಾಯ್ತಿಗಳನ್ನು ನೀಡಿ ವಿದೇಶೀ ಬಂಡವಾಳಕ್ಕೆ ಅವಕಾಶ ನೀಡುವುದರಿಂದ ಹೆಚ್ಚು ಸಂಪನ್ಮೂಲಗಳು ಖರ್ಚಾಗುತ್ತವೆ. ಅದನ್ನು ಸ್ಥಳೀಯವಾಗಿ ಮಾಡಿದರೆ ಅಷ್ಟು ಖರ್ಚಾಗುವುದಿಲ್ಲ. ವಿಶ್ವಬ್ಯಾಂಕ್ ಕೂಡಾ ಭಾರತ ಸರಕಾರ ವಿದೇಶೀ ಕಂಪೆನಿಗಳಿಗೆ ಪ್ರತಿ ಗ್ಯಾರಂಟಿ ನೀಡಿರುವುದನ್ನು ವಿರೋಧಿಸಿದೆ. ನಾವು ಸ್ವದೇಶೀ ತಂತ್ರಜ್ಞಾನ ಲಭ್ಯವಿರುವ ವಲಯದಲ್ಲೆಲ್ಲಾ ಅವುಗಳ ಬಳಕೆಯನ್ನು ಪ್ರತಿಪಾದಿಸಬೇಕು. ಅದೇ ವೇಳೆಗೆ ಇಂತಹ ಸಾಮರ್ಥ್ಯ ನಮ್ಮಲ್ಲಿ ಇಲ್ಲದ ಕಡೆಗಳಲ್ಲಿ ವಿದೇಶಗಳಿಂದ ತಂತ್ರಜ್ಞಾನ ಆಮದು ಮಾಡುವ ಅವಕಾಶ ನೀಡಲು ಹಿಂಜರಿಯಬಾರದು.

ಅದೇ ರೀತಿ ದೊಡ್ಡ ಬಂಡವಾಳಶಾಹಿಗಳು ಮತ್ತು ಕೇಂದ್ರಸರ್ಕಾರ ತಮ್ಮ ಉದ್ದಿಮೆಗಳನ್ನು ಹಾಗೂ ಸರಕಾರಗಳನ್ನು ಹೆಚ್ಚು ಸ್ಪರ್ಧಾತ್ಮಕಗೊಳಿಸಲು ಅದಕ್ಕೆ ಸೂಕ್ತವಾದ ಒಂದು ಕೆಲಸದ ಸಂಸ್ಕೃತಿಯನ್ನು ಅಂಗೀಕರಿಸಲು ತ್ಯಾಗ ಮಾಡಬೇಕು ಎಂದೆಲ್ಲಾ ಕರೆ ನೀಡುತ್ತಾರೆ. ಇನ್ನೊಂದೆಡೆ ಕಂಪೆನಿ ವಲಯ ಅಪಾರ ಲಾಭಗಳಿಸುತ್ತದೆ. ಕಂಪೆನಿಯ ಉಚ್ಚ ಅಧಿಕಾರಿಗಳಿಗೆ ಭಾರೀ ಮೊತ್ತದ ವೇತನ ನೀಡಲಾಗುತ್ತದೆ. ಇಂತಹ ಕರೆಗಳಿಗೆ ಅನುಮೋದನೆ ನೀಡಿ ಕಾರ್ಮಿಕರ ಸಾಮೂಹಿಕ ಚೌಕಾಶಿಯ ಹಕ್ಕುಗಳು ಕುಂಠಿತವಾಗದಂತೆ ನಾವು ಎಚ್ಚರದಿಂದಿರಬೇಕು.

ಎಡರಂಗದ ಕೈಗಾರಿಕಾ ನೀತಿ ನೀಡುವ ಒತ್ತು

ಎಡರಂಗ ಸರಕಾರ ಪ್ರಕಟಪಡಿಸಿದ ಕೈಗಾರಿಕಾ ನೀತಿ ಹೇಳಿಕೆ ಸ್ಥೂಲವಾಗಿ ಪ್ರಸ್ತುತ ಸನ್ನಿವೇಶದಲ್ಲಿ ಬಂಡವಾಳವನ್ನು ಆಕರ್ಷಿಸಲು ಅಗತ್ಯವಾದ ಹೊಸ ದಿಕ್ಕಿನ ಬಗ್ಗೆ ಸೂಚಿಸಿದೆ. ಕೆಲವು ಅಂಶಗಳ ಬಗ್ಗೆ ಸೂಕ್ತ ಒತ್ತು ನೀಡುವುದು ಕೂಡಾ ಅಗತ್ಯ.

ಪ.ಬಂಗಾಳದ ಎಡ ಕೊತ್ತಳ ಮತ್ತು ಕೇರಳ, ತ್ರಿಪುರಾ ಮತ್ತು ಇತರ ಸ್ಥಳಗಳಲ್ಲಿನ ಪಕ್ಷಗಳ ಬಲಿಷ್ಠ ತುಕಡಿಗಳು ನೀಡಿದ ಶಕ್ತಿಯಿಂದಾಗಿಯೇ ಸಿಪಿಐ(ಎಂ)ಗೆ ಹೊಸ ಆರ್ಥಿಕ ನೀತಿಗಳಿಗೆ ಪ್ರತಿರೋಧವನ್ನು ವ್ಯಾಪಕಗೊಳಿಸುವಲ್ಲಿ ಒಂದು ನೇತೃತ್ವದ ಪಾತ್ರ ವಹಿಸಲು ಸಾಧ್ಯವಾಗಿದೆ.

1) ಸಾರ್ವಜನಿಕ, ಖಾಸಗೀವಲಯ ಎರಡರಲ್ಲೂ ಲಭ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಬಳಸಿ ತ್ವರಿತ ಕೈಗಾರಿಕೀಕರಣಕ್ಕೆ ಪ್ರಯತ್ನಿಸುವಾಗಲೇ ಪ್ರಧಾನವಲಯಗಳಲ್ಲಿ ಸಾರ್ವಜನಿಕ ವಲಯದ ನಿರ್ಣಾಯಕ ಪಾತ್ರವೆ ನಾವು ಒತ್ತು ನೀಡಬೇಕು. ಸಾರ್ವಜನಿಕ ವಲಯದ ಉದ್ದಿಮೆಗಳ ನಿರ್ವಹಣೆಯನ್ನು ಬಲಪಡಿಸಿ ಇವನ್ನು ಹೆಚ್ಚು ದಕ್ಷಗೊಳಿಸಬೇಕು. ಅಗತ್ಯ ಕ್ರಮ ಕೈಗೊಳ್ಳಬೇಕು. ಉತ್ಪಾದಕತೆ ಹೆಚ್ಚಿಸುವಲ್ಲಿ ಪ್ರಜಾಪ್ರಭುತ್ವ ವಿಧಾನಗಳ ಮೂಲಕ ಈ ಘಟಕಗಳ ಕಾರ್ಮಿಕ ವರ್ಗವನ್ನು ಒಳಗೊಳ್ಳಬೇಕು.

2) ವಿದ್ಯುತ್ ವಲಯದಲ್ಲಿ ಖಾಸಗೀ ಬಂಡವಾಳ ಹೂಡಿಕೆಗೆ ಆಹ್ವಾನ ನೀಡಿದರೂ ಎಡರಂಗ ಸರಕಾರ ಎನ್ರೋನ್ ಮಾದರಿ ಒಪ್ಪಂದಗಳನ್ನು ಸ್ವೀಕರಿಸುವುದಿಲ್ಲ. ಏಕೆಂದರೆ ಇವುಗಳಿಂದ ಹೆಚ್ಚಿನ ಬಂಡವಾಳ ಹೊರಗೆ ಹರಿದು ಹೋಗುತ್ತದೆ ಮತ್ತು ವಿದ್ಯುತ್ ದರಗಳನ್ನೂ ವಿಪರೀತ ಹೆಚ್ಚಿಸಲಾಗುತ್ತದೆ.

3) ಕೈಗಾರಿಕೆಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಸುಧಾರಿಸುವ ಮತ್ತು ವಿಸ್ತರಿಸುವ ಅಗತ್ಯಕ್ಕೆ ಸರಿಯಾದ ಒತ್ತು ನೀಡಲಾಗಿದೆ. ಈ ವಲಯದಲ್ಲಿ ಜಂಟಿ ವಲಯದ ಯೋಜನೆಗಳನ್ನು ಆರಂಭಿಸುವಾಗಲೂ ಸರಕಾರ ಮಧ್ಯ ಪ್ರವೇಶಕ್ಕೆ ಆದ್ಯತೆಯಿರಬೇಕು.

4) ಕೈಗಾರಿಕೀಕರಣವನ್ನು ತೀವ್ರಗೊಳಿಸಲು, ಹೊಸ ಬಂಡವಾಳವನ್ನು ಆಕರ್ಷಿಸಲು ಪ್ರಯತ್ನ ನಡೆಸುತ್ತಲೇ ಎಡರಂಗ ಸರಕಾರ ಕಾರ್ಮಿಕರ ಹಿತಾಸಕ್ತಿಗಳನ್ನು ಮತ್ತು ಕಾರ್ಮಿಕ ಸಂಘದ ಹಕ್ಕುಗಳನ್ನು ರಕ್ಷಿಸುತ್ತಲೇ ಇರುತ್ತದೆ. ಕೈಗಾರಿಕೀಕರಣದ ಕಾರ್ಯಗಳಲ್ಲಿ ಕಾರ್ಮಿಕ ಸಂಘಗಳೊಡನೆ ಸಮಾಲೋಚನೆ ನಡೆಸಬೇಕು, ಅವನ್ನು ಒಳಗೊಳ್ಳಬೇಕು.

ಎಡರಂಗ ಸರಕಾರದ ನೀತಿಗಳು ಪ್ರಧಾನವಲಯಗಳಲ್ಲಿ ಸಾರ್ವಜನಿಕ ವಲಯದ ರಕ್ಷಣೆ, ಮೂಲಭೂತ ಸೌಕಾರ್ಯಗಳ ಅಭಿವೃದ್ಧಿಯಲ್ಲಿ ಮತ್ತು ಶಿಕ್ಷಣ, ಆರೋಗ್ಯದಂತಹ ಸಾಮಾಜಿಕ ಸೌಲಭ್ಯಗಳಲ್ಲಿ ಸರಕಾರದ ಮಧ್ಯ ಪ್ರವೇಶವನ್ನು ಉಳಿಸಿಕೊಳ್ಳಲು ಇಲೆಕ್ಟ್ರಾನಿಕ್ಸ್, ಪೆಟ್ರೋ ರಸಾಯನಿಕಗಳು, ಮತ್ತು ಇತರ ಸರಕಾರದ ಹಣದಿಂದ ಬೆಳೆಸಲಾಗದ ವಿಶಿಷ್ಟ ವಲಯಗಳಲ್ಲಿ ಹೊಸ ಬಂಡವಾಳ ಹೂಡಿಕೆಗೆ ಸಕ್ರಿಯವಾಗಿ ಪ್ರಚಾರ ಮಾಡುವಂತಿರಬೇಕು. ಅಧಿಕೃತ ನೀತಿಗಳ ಚರ್ಚೆಯಾಗುವ ಪ್ರತಿಯೊಂದು ವೇದಿಕೆಯಲ್ಲೂ ಎಡರಂಗ ಸರಕಾರ ಪ್ರಸ್ತುತ ಸನ್ನಿವೇಶದಲ್ಲಿ ಮತ್ತು ದೀರ್ಘಾವಧಿಯಲ್ಲಿ ಕಾರ್ಯಸಾಧ್ಯವಾದ ಪರ್ಯಾಯ ನೀತಿಗಳನ್ನು ಸ್ಪಷ್ಟವಾಗಿ ಪ್ರತಿಪಾದಿಸಬೇಕು. ಇದು ಜನಸಮೂಹಗಳ ನಡುವೆ ನಮ್ಮ ಪಕ್ಷದ ಪ್ರಚಾರ ಹಾಗೂ ಜನರನ್ನೂ ಅಣಿನೆರೆಸಲು ಆಧಾರವಾಗಬೇಕು.

ಸಿಪಿಐ(ಎಂ) ಮತ್ತು ಪಶ್ಚಿಮ ಬಂಗಾಳದ ಎಡರಂಗದ ಮೇಲೆ ಕೇಂದ್ರದ ಆರ್ಥಿಕ ನೀತಿಗಳ ವಿರುದ್ಧ ಅಖಿಲ-ಭಾರತ ಹೋರಾಟ ನೇತೃತ್ವ ನೀಡುವ ದೊಡ್ಡ ಜವಾಬ್ದಾರಿಯಿದೆ. ಎಡರಂಗ ಸರ್ಕಾರ ತನ್ನ ಅಸ್ತಿತ್ವ ಮತ್ತು ಕೆಲಸ -ಕಾರ್ಯಗಳಿಂದ ಈ ಹೋರಾಟಕ್ಕೆ ದೊಡ್ಡ ಪ್ರಮಾಣದಲ್ಲಿ ಸಹಾಯ ನೀಡಬಲ್ಲದು. ಎಡರಂಗ ಸರಕಾರದ ಪಾತ್ರ ಆರ್ಥಿಕ ನೀತಿಗಳ ವಿರುದ್ಧ ಅಖಿಲ ಭಾರತ ಹೋರಾಟವನ್ನು ಮಾತ್ರವೇ ಅಲ್ಲ ವರ್ಗ ಶಕ್ತಿಗಳ ಬಲಾಬಲದಲ್ಲಿ ಒಂದು ಬದಲಾವಣೆ ತರಲು ಅಗತ್ಯವಾದ ಎಡ-ಪ್ರಜಾಪ್ರಭುತ್ವರಂಗ ಕಟ್ಟುವ ಕೆಲಸವನ್ನು ಕೂಡಾ ಅಗಾಧ ರೀತಿಯಲ್ಲಿ ಬಲಪಡಿಸುತ್ತದೆ. ಈ ಮೂಲಭೂತ ದೃಷ್ಟಿಕೋಣವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ನೀತಿಗಳನ್ನು ಪರೀಕ್ಷಿಸಬೇಕು, ಆಗಾಗ ಅವುಗಳ ವಿಮರ್ಶೆ ನಡೆಸಬೇಕು ಮತ್ತು ಹೊಂದಾಣಿಕೆಗಳನ್ನು ಮಾಡಬೇಕು.

ಅಮೆರಿಕಾದೊಡನೆ ಮಾರಕ ರಕ್ಷಣಾ ಒಪ್ಪಂದ

ಪುಟ 1ರಿಂದ

ಳನ್ನೂ ಇದು ಒಳಗೊಂಡಿದೆ. ಈಗ ಈ ಹೊಸ ಒಪ್ಪಂದದ ಮೂಲಕ ಈ ಸಂಬಂಧಗಳನ್ನು ಭಾರತದ ರಕ್ಷಣಾ ಇಲಾಖೆ ಮತ್ತು ಅಮೆರಿಕಾದ ರಕ್ಷಣಾ ಇಲಾಖೆಯ ನಡುವೆ ಸಹಕಾರಕ್ಕೆ ವಿಸ್ತರಿಸಲಾಗಿದೆ. ಇದು ಭಾರತದ ಪಾರಂಪರಿಕ ಅಲಿಪ್ತ ನೀತಿಯ ಮೇಲೆ ಅನಿಷ್ಟಕಾರಿ ಪರಿಣಾಮ ಬೀರಲಿದೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಅಮೆರಿಕನ್ ಆಡಳಿತ ಭಾರತ ಶಾಂತಿಯುತ ಉದ್ದೇಶಕ್ಕೆ ಒಂದು ಸ್ವತಂತ್ರ ಪರಮಾಣು ತಂತ್ರಜ್ಞಾನವನ್ನು ಬಳಸುವುದನ್ನು ವಿರೋಧಿಸುತ್ತಿದೆ. 'ಪೃಥ್ವಿ' ಕ್ಷಿಪಣಿ ನೆಲೆಗೊಳಿಸುವುದನ್ನು, 'ಅಗ್ನಿ' ರಾಕೆಟ್ ತಂತ್ರಜ್ಞಾನ ಬೆಳವಣಿಗೆಯನ್ನು ಅದು ಕುಂಠಿತಗೊಳಿಸಬಯಸುತ್ತದೆ. ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ಮೇಲೆ ನಿರ್ಬಂಧ ಹೇರಿದ್ದು, ರಷ್ಯಾ ಕೊಡಲೊಪ್ಪಿದ ಕ್ರಯೋಜನಿಕ್ ರಾಕೆಟ್ ಇಂಜಿನ್‌ನ ಕರಾರನ್ನು ರದ್ದು ಪಡಿಸಿದ್ದು ಇದೇ ಅಮೆರಿಕನ್ ಆಡಳಿತ ಎಂದು ನೆನಪಿರುವ ಪೊಲಿಟ್‌ಬ್ಯೂರೋ ಹಿಂದೂ ಮಹಾಸಾಗರದಲ್ಲಿ ಅಮೆರಿಕಾ ಇಟ್ಟುಕೊಂಡಿರುವ ಡಿಗೋ ಗಾರ್ಸಿಯಾ ಮಿಲಿಟರಿ ನೆಲೆಯ ಬಗ್ಗೆ ನರಸಿಂಹರಾವ್ ಸರಕಾರ ಈಗ ಮೌನವಾದೆ ಎಂದೂ ಗಮನಿಸಿದೆ. ಪೂರ್ಣ ಪ್ರಮಾಣದ ಒಂದು ರಕ್ಷಣಾ ಒಪ್ಪಂದದ ಮೂಲಕ ಭಾರತದ ರಕ್ಷಣಾ ವ್ಯವಸ್ಥೆಯನ್ನು ಅಮೆರಿಕನ್ ರಕ್ಷಣಾ ವ್ಯವಸ್ಥೆ ಪೆಂಟಾಗಾನ್‌ನ ನೊಗಕ್ಕೆ ಜೋಡಿಸುವುದು ಭಾರತದ ಭದ್ರತಾ ಹಿತಾಸಕ್ತಿಗಳಿಗೆ ಮಾರಕ. ಇದು ನಮ್ಮ ಸ್ವತಂತ್ರ ವಿದೇಶಾಂಗ ನೀತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಪಿ.ಬಿ. ಎಚ್ಚರಿಸಿದೆ.

ಅಮೆರಿಕಾದೊಂದಿಗೆ ಈ ರಕ್ಷಣಾ ಒಪ್ಪಂದವನ್ನು ಬಲವಾಗಿ ವಿರೋಧಿಸಿ ರಾವ್ ಸರಕಾರ ಈ ಒಪ್ಪಂದದ ಮೊದಲು ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಬೇಕೆಂದು ದೇಶಪ್ರೇಮಿ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಪೊಲಿಟ್‌ಬ್ಯೂರೋ ಕರೆ ನೀಡಿದೆ.